ನವೆಂಬರ್ 24, 2024
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1960
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಮೋಸ್ಟ್ ವಾಂಟೆಡ್ ನಕ್ಸಲ್

## ವಿಕ್ರಂಗೌಡ ಎನ್‌ಕೌಂಟರ್!





## ಪತ್ನಿ, ಮಗುವನ್ನು ಕೊಂದು ನೇಣಿಗೆ ಶರಣಾದ!

## ಲೈಂಗಿಕ ಸುಖಕ್ಕೆ ಅಡ್ಡಿ ಮಾಡಿದ ಮಹಿಳೆಯ ಮರ್ಮಾಂಗಕ್ಕೆ ಸರಳಿನಿಂದ ತಿವಿದು ಕೊಂದ!





## ಶಿಕಾರಿಪುರದಲ್ಲಿ ಗಂಡನಿಂದಲೇ ಹೆಂಡತಿ ಕೊಲೆ!?

## ಗೋರಿಯಿಂದ ಹೊರ ಬಂದ 6 ತಿಂಗಳ ಹಿಂದೆ ಹೂತಿದ್ದ ಶವ!

# ಅಮರ್ ಆಳ್ವ ಕೊಲೆ ಕೇಸಿಗೆ ಪೂರ್ಣ ವಿರಾಮ

**ಮಂಗಳೂರು**
✍ **ಮೋಹನ್ ಬೋಳಂಗಡಿ**

ಮಂಗಳೂರು ಭೂಗತ ಲೋಕದ ಸಿಂಹಾಸನ ಏರಿ ಕುಳಿತಿದ್ದ ಅತ್ಯಂತ ಶಕ್ತಿಶಾಲಿ ಡಾನ್ ಅಮರ್ ಆಳ್ವ ಕೊಲೆಯಾಗಿ ಹೋಗಿತ್ತು. ಈ ಹತ್ಯೆಗೆ ತೆರೆಯ ಮರೆಯಲ್ಲಿ ನಿಂತು ಎಲ್ಲಾ ವ್ಯವಸ್ಥೆ ಮಾಡಿದ್ದ ಮುತ್ತಪ್ಪ ರೈ ಬೆಂಗಳೂರಿನಲ್ಲಿ ಕುಳಿತೇ ಇನ್ನು ಮಂಗಳೂರು ನನ್ನದು' ಅಂತ ಘೋಷಿಸಿದ್ದರು. ಅಮರ್‌ರನ್ನು ಗುಂಡು ಹಾರಿಸಿ ಕೊಂದಿದ್ದ ನಾಲ್ವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದರು. ಮುಬೈ ಡಾನ್ ಅಶೋಕ್ ಶೆಟ್ಟಿ ಹೇಳಿ ಮಾಡಿಸಿದ ಹತ್ಯೆ ಇದು. ಇದರಲ್ಲಿ ಮುತ್ತಪ್ಪರೈ ಕೈವಾಡವೂ ಇದೆ ಅಂತ ಮುಕ್ಕಾಲು ಅಂಡರ್ ಅಂಡರ್‌ವರ್ಲ್ಡ್‌ಗೆ ಗೊತ್ತಿತ್ತು. ಆದರೆ ಎರಡೆರಡು ಬಾರಿ ನಡೆದ ಸಿಒಡಿ ತನಿಖೆಯಲ್ಲೂ ಇದು ಸಾಬೀತೇ ಆಗಲಿಲ್ಲ. ಯಾಕೆಂದರೆ ಅದಕ್ಕೆ ಪೂರಕ ಸಾಕ್ಷಿಗಳಿರಲಿಲ್ಲ. ಸಾಕ್ಷಿಗಳು ಇರದಿರುವ ದೂರನ್ನು ನ್ಯಾಯಾಲಯ ಒಪ್ಪುವುದಿಲ್ಲವಲ್ಲ? ನೋಡ ನೋಡುತ್ತಿದ್ದಂತೆಯೇ ಇನ್ನೊಂದೆಡೆ ಆರೋಪಿಗಳೆಲ್ಲರೂ ನಿರಪರಾಧಿಗಳು ಅಂತ ಬಿಡುಗಡೆಯಾದರು. ಅಮರ್ ಆಳ್ವ ಕೊಲೆಯಾದದ್ದು ಹೌದು. ಆರೋಪಿಗಳನ್ನು ಪೊಲೀಸರು ಬಂಧಿಸಿದ್ದೂ ಹೌದು. ಆರೋಪಿಗಳು ತಪ್ಪೊಪ್ಪಿಗೆ ಹೇಳಿಕೆ ನೀಡಿದ್ದೂ ಹೌದು. ಆರೋಪಿಗಳು ನಿರಪರಾಧಿಗಳು ಅಂತಾದರೆ ಅಮರ್ ಆಳ್ವನನ್ನು ಕೊಂದವರು ಯಾರು? ಈ ಪ್ರಶ್ನೆಯನ್ನು ಕೇಳುವ ಅವಕಾಶ ನಮ್ಮ ಕಾನೂನಿನಲ್ಲಿಲ್ಲ. ತಪ್ಪುಮಾಡಿ ಸಿಕ್ಕಿಬಿದ್ದರೆ ಅದಕ್ಕೆ ಸಾಕ್ಷಿಗಳಿವೆಯಾ? ಅಂತ ನೋಡಿ ನ್ಯಾಯಾಲಯ ವ್ಯವಸ್ಥೆ ನಿರ್ಧಾರ ತೆಗೆದುಕೊಳ್ಳುತ್ತದೆ ಹೊರತು, ಇವರು ಕೊಲೆ ಮಾಡಿಲ್ಲ ಅಂತಾದರೆ ಮಾಡಿದವರು ಯಾರು? ಅಂತ ಪ್ರಶ್ನಿಸುವುದಿಲ್ಲ. ಕೊಲೆಗೆ ಸಾಕ್ಷಿಗಳಿರಲಿಲ್ಲ. ಮುತ್ತಪ್ಪರೈ ಹೆಸರು ಆರೋಪಿಗಳು ಹೇಳಲಿಲ್ಲ. ಬಿಡುಗಡೆಯಾದರೂ ಅಷ್ಟೇ. ಮಂಗಳೂರು ಕಂಡ ಅತ್ಯಂತ ಶಕ್ತಿಶಾಲಿ ಡಾನ್ ಹತ್ಯೆಗೆ ಮಾಡಿದ ಪ್ಲಾನ್ ಗಿಂತಲೂ ಸೂಪರ್ ಪ್ಲಾನ್ ಮಾಡಿ ಕೊಲೆ ಕೇಸ್ ಅನ್ನು ಮುಗಿಸಿ ಹಾಕಲಾಯಿತು. ಇದಕ್ಕಾಗಿ ಸಾಕ್ಷಿಗಳನ್ನು ಹೆದರಿಸಲಾಯಿತು ಅನ್ನುವವರೂ ಇದ್ದಾರೆ. ಅಂತೂ ಕೇಸ್ ನ್ಯಾಯಾಲಯದಲ್ಲಿ ಬಿದ್ದುಹೋಯಿತು. ಈ ಪ್ರಕರಣದಲ್ಲಿ ಹೊರ ಜಗತ್ತಿಗೆ ಕಂಡು ಬಂದ ಮೂವರು ವ್ಯಕ್ತಿಗಳ ವ್ಯಕ್ತಿತ್ವಗಳನ್ನು ಇಲ್ಲಿ ನೀಡುತ್ತಿದ್ದೇನೆ. ಓದಿಕೊಳ್ಳಿ.


ಅಮರ್ ಆಳ್ವ

**ಡಾನ್ ಅಶೋಕ್ ಶೆಟ್ಟಿ**

'ನಾನುಂಟು - ಮೂರು ಲೋಕ ಉಂಟು' ಎಂಬಂತೆ ಬದುಕಿ ಮೆರೆದ, ಅಷ್ಟೇ ಬೇಗ ನಿರ್ನಾಮವಾಗಿಯೂ ಹೋದ ಭೂಗತ ಜಗತ್ತಿನ ವ್ಯಕ್ತಿಗಳ ಪೈಕಿ ಅಶೋಕ್ ಶೆಟ್ಟಿಯವರದೊಂದು ವಿಶಿಷ್ಟ ವ್ಯಕ್ತಿತ್ವ. ಸರಿಸುಮಾರು ಒಂದೂವರೆ ದಶಕಗಳ ಕಾಲ ಮುಂಬೈ, ಬೆಂಗಳೂರು ಮತ್ತು ಮಂಗಳೂರಿನ ಕತ್ತಲ ಲೋಕದಲ್ಲಿ ಮುಕುಟವಿಲ್ಲದ ಮಹಾರಾಜನಂತೆ ಕಾಣಿಸಿಕೊಂಡಿದ್ದ ಅವರೀಗ ಸದ್ದಿಲ್ಲದೆ ತೆರೆಯಮರೆಗೆ ಸರಿದಿದ್ದಾರೆ.

ಮುಂಬೈ ಎಂಬ ಮಾಯಾನಗರಿ ಭಾರತ ದೇಶದ 'ಕಮರ್ಷಿಯಲ್ ಕ್ಯಾಪಿಟಲ್' ಆಗಿ ಮಾರ್ಪಾಡಾಗುತ್ತಿದ್ದ ಕಾಲದಲ್ಲಿ ಉದ್ಯೋಗ-ವ್ಯವಹಾರ ಅರಸಿಕೊಂಡು ಅಲ್ಲಿಗೆ ವಲಸೆ ಹೋದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಸಾವಿರಾರು ಅಮಾಯಕ ಯುವಕರ ಪೈಕಿ ಅಶೋಕ್ ಶೆಟ್ಟಿ ಕೂಡ ಒಬ್ಬರು. ಅದ್ಯಾವ ಚಕ್ರಸುಳಿಗೆ ಸಿಲುಕಿ ಭೂಗತ ಜಗತ್ತಿಗೆ ಸೇರಿಕೊಂಡರೋ ಗೊತ್ತಿಲ್ಲ. ಉಡುಪಿ ತಾಲ್ಲೂಕಿನ ಬಡಗಬೆಟ್ಟುವಿನ ಬಲುಗತ್ತಿನ ಬಂಟರ ಪಾಳಯದ ಗುತ್ತಿನ ಮನೆಯ ಯುವಕನೊಬ್ಬ 'ಡಾನ್ ಅಶೋಕ್ ಶೆಟ್ಟಿ'ಯಾಗಿ ಭೂಗತ ಲೋಕದಲ್ಲಿ ನಡೆದು ಬಂದ ದಾರಿ ಇದೆಯಲ್ಲ? ಅದು ನಿಜಕ್ಕೂ ರೋಚಕ. ರೋಮಾಂಚಕ.

ಮುಂಬೈ ಪಾತಕ ಲೋಕದಲ್ಲಿ ನೆತ್ತರ ಹೊಳೆ ಪ್ರವಾಹದಂತೆ ಹರಿಯುತ್ತಿದ್ದ ಕಾಲದಲ್ಲೇ ಅವರು ಮುಬೈ ಸೇರಿಕೊಂಡರು. ಅಲ್ಲಿ ದಾವುದ್ ಇಬ್ರಾಹಿಂನಂತಹ ರಕ್ಕಸನ ಸಂಪರ್ಕವಿದ್ದಾಗಲೂ ಅವರ್ಯಾವತ್ತಾ ಭಯೋತ್ಪಾದನಾ ಕೃತ್ಯಗಳನ್ನು ಪಾಲ್ಗೊಂಡಿರಲಿಲ್ಲ. ದೇಶದ್ರೋಹದ ಕೆಲಸ ಅವತ್ತಲ್ಲ, ಇವತ್ತಿಗೂ ಮಾಡುತ್ತಿಲ್ಲ. ಭಾರತದ ಅತ್ಯುನ್ನತ ಗುಪ್ತಚರ ಪಡೆ ರಿಸರ್ಚ್ ಅಂಡ್ ಅನಾಲಿಸಿಸ್ ವಿಂಗ್ (ರಾ)ನಲ್ಲಿ ನನಗೆ ಪರಿಚಯ ಇರುವ ಐಜಿಪಿ ದರ್ಜೆಯ ಅಧಿಕಾರಿಯ ಪ್ರಕಾರ 'ರಾ' ಕಚೇರಿ ಕಡತಗಳಲ್ಲಿ ಅಶೋಕ್ ಶೆಟ್ಟಿ ಹೆಸರಿದೆ. ಅವರ ಕುರಿತಾದ ಸಮಗ್ರ ವಿವರಗಳಿವೆ. ಆದರೆ ಅದು ಟೆರರಿಸಂ ನೆಟ್ವರ್ಕ್ ಲಿಸ್ಟ್ ನಲ್ಲಿಲ್ಲ. ಬದಲಾಗಿ ಅನಾಲಿಸಿಸ್ ವಿಂಗ್‌ನ ಆರ್ಗನೈಸ್ಡ್ ಕ್ರೈಂಗೆ ಸಂಬಂಧಿಸಿದ ಫೈಲ್‌ಗಳಲ್ಲಿದೆ. 'ಕಳೆದ 30 ವರ್ಷಗಳಿಂದ ಅಶೋಕ್ ಶೆಟ್ಟಿ ಎಂಬ ವ್ಯಕ್ತಿ ಆರ್ಗನೈಸ್ ಕ್ರೈಂಗಳಿಂದ ಕೂಡ ದೂರ ಉಳಿದಿದ್ದಾರೆ' ಎಂದೂ ಅದರಲ್ಲಿ ನಮೂದಿಸಲಾಗಿದೆಯಂತೆ.

ಅಮರ್ ಆಳ್ವಾ ಹತ್ಯೆಯೇ ಬಹುಶಃ ಕೊನೆ. ಮತ್ತ್ಯಾವತ್ತು ಅವರು ಕೈಗೆ ರಕ್ತ ಮೆತ್ತಿಸಿಕೊಂಡಿಲ್ಲ. 1992ರ ನಂತರದ ಅಂಡರ್‌ವರ್ಲ್ಡ್‌ನ ಯಾವ ಸಿಚುವೇಶನ್ ಗಳಿಗೂ ರಿಯಾಕ್ಟ್ ಮಾಡಲಿಲ್ಲ. ಅಂಡರ್‌ವರ್ಲ್ಡ್‌ನಿಂದ ಗೌರವಯುತವಾಗಿ ನಿವೃತ್ತರಾಗಿದ್ದಾರೆ. ಈಗ ಅದನ್ನು ನೆನಪಿಸಿಕೊಳ್ಳಲೂ ಇಚ್ಚಿಸುತ್ತಿಲ್ಲ. ಅಂಡರ್‌ವರ್ಲ್ಡ್‌ನ ಹಳೆಯ ಸಂಬಂಧಗಳನ್ನು ಸ್ಯಾಂಪಲ್‌ಗಾಗಿ ಕೂಡ ಇಟ್ಟುಕೊಂಡಿಲ್ಲ. ದೇಶ-ವಿದೇಶ ಸುತ್ತಿದ್ದಾರೆ. ಬೆರಳೆಣಿಕೆಯ ಸ್ನೇಹಿತರಿದ್ದಾರೆ. ಬೆಂಗಳೂರು, ಮಂಗಳೂರು, ಮುಂಬೈನಲ್ಲಿ ಕೆಲವು ಪರಿಚಿತ ಅಧಿಕಾರಿಗಳು, ಉದ್ಯಮಿಗಳು, ರಾಜಕಾರಣಿಗಳಿದ್ದಾರೆ. ಕುಟುಂಬ ವರ್ಗದೊಂದಿಗೆ ಇಂದಿಗೂ ಅತ್ಯುತ್ತಮ ಸಂಬಂಧ ಅವರಿಗಿದೆ. ಸದ್ಯ ಅಮೇರಿಕಾದಲ್ಲಿ ನೆಲೆಸಿದ್ದಾರೆ.

ಮುಂಬೈ ಅಂಡರ್‌ವರ್ಲ್ಡ್ ಉತ್ತುಂಗದಲ್ಲಿದ್ದ ವೇಳೆಯೂ ಅಮಾಯಕರಿಗೆ ಯಾವತ್ತೂ ಅವರಿಂದ ತೊಂದರೆಯಾಗಿಲ್ಲ. ವೈಯಕ್ತಿಕ ದ್ವೇಷ, ಬಾಯಿಗಿರಿಗಾಗಿ ಕೊಲೆಗಳು ನಡೆದಿರುವುದು ನಿಜವಾದರೂ, ಹಫ್ತಾವಸೂಲಿ ಮಾಡಿದ ಉದಾಹರಣೆಗಳಿಲ್ಲ. ಮಾಧ್ಯಮಗಳ ಎದುರು ಯಾವತ್ತೂ ಕಾಣಿಸಿಕೊಂಡಿಲ್ಲ. ಗೂಗಲ್‌ನಲ್ಲಿ ಬಿಡಿ. ಮುಂಬೈ ಪೊಲೀಸರ ದಾಖಲೆಗಳಲ್ಲಿ ಹುಡುಕಿದರೂ ಇವತ್ತಿಗೂ ಅವರ ಒಂದೇ ಒಂದು ಭಾವಚಿತ್ರವಿಲ್ಲ. ಉಡುಪಿಯಲ್ಲಿನ ವಿವಾಹ ನಿಶ್ಚಿತಾರ್ಥ ಮತ್ತು ಬೆಂಗಳೂರಿನ ಹಾಲಿಡೇ ಇನ್ ಹೋಟೆಲ್‌ನಲ್ಲಿ ನಡೆದ ವಿವಾಹ ಔತಣಕೂಟದ ಭಾವಚಿತ್ರಗಳನ್ನು ಕೂಡ ಅತ್ಯಂತ ಗೌಪ್ಯವಾಗಿಸಲಾಗಿದೆ.

ಭೂಗತ ಲೋಕದಲ್ಲಿ ಸಕ್ರಿಯರಾಗಿದ್ದಾಗ ಅನೇಕರನ್ನು ರಕ್ಷಿಸಿದ್ದಾರೆ. ಅದರಿಂದ ಹೊರಬಂದ ಬಳಿಕವೂ ಸದ್ದು ಮತ್ತು ಸುದ್ದಿಯಾಗದಂತೆ ಹಲವರಿಗೆ ನೆರವಾಗಿದ್ದಾರೆ. ಭಯವೆಂಬುದು ಇವತ್ತಿಗೂ ಅವರಲ್ಲಿಲ್ಲ. ಭೂಗತ ಲೋಕದಲ್ಲಿ ಅವರ ಮೇಲೆ ಕೈ ಎತ್ತಬಲ್ಲ ಮನುಷ್ಯ ಈವರೆಗೂ ಹುಟ್ಟಿಲ್ಲ. ಮುಂದೆ ಕೂಡ ಹುಟ್ಟುವುದಿಲ್ಲ ಎಂದು ಮೂವತ್ತು ವರ್ಷಗಳ ಹಿಂದೆಯೇ ಅಂಡರ್ ವರ್ಲ್ಡ್ ಮಾತನಾಡಿಕೊಂಡಿತ್ತು.

ಬದುಕು ಇವರ ಪಾಲಿಗೆ ಕರುಣಾಮಯಿ. ಅಂದು ಇವರೊಂದಿಗಿದ್ದೇ ವಿಶ್ವಾಸದ್ರೋಹ, ವಂಚನೆ ನಡೆಸಿದ ಬಹುತೇಕ ಮಂದಿ ಇಂದು ಸಮಾಧಿಗಳ ಕೆಳಗೆ ಮಲಗಿದ್ದಾರೆ. ಅಶೋಕ್ ಶೆಟ್ಟಿ ಮಾತ್ರ ಬದುಕಿನ ದಿಕ್ಕು ಬದಲಿಸಿಕೊಂಡಿದ್ದಾರೆ. ಅವರಿಗಿಂತ ಬುದ್ದಿವಂತರಾದ ಡಾನ್‌ನನ್ನು ಮುಂಬೈ ಒಂದಗೇ ಏಕೆ, ಇಡೀ ಭಾರತವೇ ನೋಡಲಿಲ್ಲ ಅಂತ ಅನ್ನುವವರೂ ಇದ್ದಾರೆ. ತುಳು, ಮರಾಠಿ, ಹಿಂದಿ ಭಾಷೆಗಳು ಅವರಿಗೆ ಸರಾಗ, ಇಂಗ್ಲಿಷ್ ಮೇಲಿನ ಹಿಡಿತ ಯಾವ ಪ್ರೊಫೆಸರ್‌ಗೂ ಕಡಿಮೆ ಏನಿಲ್ಲ.

ಈ ಮೊದಲು ಆಸ್ಪತ್ರೆಯ ಸಲಕರಣೆಗಳ ಉತ್ಪಾದನೆ ಮಾಡುವ ದೊಡ್ಡ ಉದ್ಯಮವನ್ನು ಹೊಂದಿದ್ದರು. ಇದೀಗ ಆಯಿಲ್ ಉತ್ಪಾದನಾ ಕ್ಷೇತ್ರದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಭಾರತದ ಕರೆನ್ಸಿಗಳ ಲೆಕ್ಕದಲ್ಲಿ ಅಶೋಕ್ ಶೆಟ್ಟಿಯವರೀಗ 2000 ಕೋಟಿ ರೂಪಾಯಿಗಳ ಒಡೆಯ!

ಸುಮಾರು ಆರು ಕಾಲು ಅಡಿ ಎತ್ತರದ, ಉಕ್ಕಿನ ದೇಹದ ಅಶೋಕ್ ಶೆಟ್ಟಿ ಅವರ ಸಿಟ್ಟು ಮತ್ತು ತಾಕತ್ತುಗಳ ಬಗ್ಗೆಯೂ ಭೂಗತ ಲೋಕದಲ್ಲಿ ದಂತಕಥೆಗಳಿವೆ. ಅಂಡರ್‌ವರ್ಲ್ಡ್‌ನಲ್ಲಿ ಸಂತಸದ ದಿನಗಳು ನಿರಂತರವಾಗಿ ಇರುವುದಿಲ್ಲ ಎಂಬುದನ್ನು ಅವರು ತಿಳಿದು ಮೂರು ದಶಕಗಳೇ ಕಳೆದಿದೆ. ರಾಜಕಾರಣಿಗಳಿಂದ ಹಿಡಿದು ಪೊಲೀಸ್ ಅಧಿಕಾರಿಗಳ ತನಕ, ಗ್ಯಾಂಗ್‌ಸ್ಟರ್‌ಗಳಿಂದ ಹಿಡಿದು ಲಾಯರ್‌ಗಳ ತನಕ ಎಲ್ಲರನ್ನು ಒಂದೇ ಒಂದು ಸಿಂಹ ಘರ್ಜನೆಯಲ್ಲಿ ಹಿಡಿದಿಟ್ಟುಕೊಳ್ಳುವಂತಹ ಎದೆಗಾರಿಕೆ ಇವತ್ತಿಗೂ ಅವರಲ್ಲಿದೆ.


ಲವಕುಮಾರ್

ಅಶೋಕ್ ಶೆಟ್ಟಿ ಮನಸ್ಸು ಮಾಡಿದ್ದರೆ ಇವತ್ತಿಗೂ ಮಂಗಳೂರು, ಬೆಂಗಳೂರು ಮತ್ತು ಮುಂಬೈ ಭೂಗತ ಲೋಕದ ಡಾನ್ ಆಗಿಯೇ ಮುಂದುವರಿಯಬಹುದಿತ್ತೇನೋ...

ಆದರೆ ಡಾನ್ ಪಟ್ಟ ಇರುವಾಗಲೇ ಅದರಿಂದ ಹಿಂದೆ ಸರಿದು ಶಾಂತಿಯುತ ಜೀವನ ನಡೆಸಲು ಇದ್ದ ಪ್ರೇರೇಪಣೆ ಯಾರದ್ದು?... ಹಾಗಂತ ಅಶೋಕ್ ಶೆಟ್ಟಿ ಎದುರು ನೇರಾ ನೇರ ಕೂತು, ಕಣ್ಣಲ್ಲಿ ಕಣ್ಣಿಟ್ಟು ಈ ಪ್ರಶ್ನೆಯನ್ನು ಕೇಳಬೇಕೆಂದಿದ್ದೇನೆ. 'ಅಶೋಕ್ ಶೆಟ್ಟಿ ಉತ್ತರಿಸುತ್ತಾರಂತೆ' ಎಂದು ಮುಂಬೈನಲ್ಲಿ ನಾನು ತುಂಬಾ ಗೌರವಿಸುವ ವ್ಯಕ್ತಿ ಒಬ್ಬರ ಮೂಲಕ ಸಂದೇಶವೊಂದು ಬಂದಿದೆ. ಅವಕಾಶಕ್ಕಾಗಿ ನಾನೂ ಕಾಯುತ್ತಿದ್ದೇನೆ.'

**ಲವಕುಮಾರ್**

'ವೋ ಆಫೀಸರ್ ದೋಸ್ತಿ ಕೇ ಲಿಯೇ ಕುಚ್ ಬಿ ಕರ್ ಸಕ್ತಾ ಹೆ. ಮರ್ನೇ ಔರ್ ಮಾರ್ ನೇ ಕೇ ಲಿಯೇ ವೋ ಅಭಿ ಬೀ ತಯಾರ್ ಹೈ'' (ಗೆಳೆತನಕ್ಕಾಗಿ ಈ ಅಧಿಕಾರಿ ಏನನ್ನೂ ಮಾಡಲು ತಯಾರಾಗಿರುವವರು. ಸ್ನೇಹಕ್ಕಾಗಿ ಜೀವ ಕೊಡಲು ಮತ್ತು ಜೀವ ತೆಗೆಯಲು ಇವತ್ತಿಗೂ ಕೂಡ ಸಿದ್ಧರಿರುವವರು) ಇದು ಮಂಗಳೂರು, ಬೆಂಗಳೂರು ಮತ್ತು ಮುಂಬೈ ಭೂಗತ ಪ್ರಪಂಚದಲ್ಲಿ, ಉದ್ಯಮಿಗಳ ಗುಂಪಿನಲ್ಲಿ, ಪೊಲೀಸ್ ಅಧಿಕಾರಿಗಳ ವಲಯದಲ್ಲಿ ಲವಕುಮಾರ್ ಎಂಬ ದಿಟ್ಟ ಅಧಿಕಾರಿಯ ಬಗ್ಗೆ ಅವತ್ತು ಮತ್ತು ಇವತ್ತಿಗೂ ಕೂಡ ಚಾಲ್ತಿಯಲ್ಲಿರುವ ಮಾತು.

ಮೊನಚಾದ ಕಣ್ಣು, ಅರೆ ನೆರೆತ ಕೂದಲು, ಅಗಲಗಲದ ದಪ್ಪಬಿಳಿ ಮೀಸೆ, ದಟ್ಟ ಹುಬ್ಬು, ಪೊಲೀಸ್ ಯೂನಿಫಾರ್ಮ್ ಧರಿಸಿ ರಸ್ತೆಗೆ ಇಳಿದರೆಂದರೆ ಎಂತಹ ಗುಂಪು-ಗಲಭೆಗಳನ್ನಾದರೂ ಐದೇ ಐದು ನಿಮಿಷದಲ್ಲಿ ನಿಯಂತ್ರಿಸುವ ತಾಕತ್ತು ಪತ್ತೆಯೇ ಆಗದಂತಹ ಅಪರಾಧ ಪ್ರಕರಣಗಳ ತನಿಖೆಯಲ್ಲಿ ಮಾತ್ರ ಮಾಸ್ಟರ್ ಇನ್ ವೆಸ್ಟಿಗೇಟರ್.

ಇದು ಈ ರಾಜ್ಯ ಕಂಡ ಯಶಸ್ವಿ ಪೊಲೀಸ್ ಅಧಿಕಾರಿಗಳ ಪೈಕಿ ಮೊದಲ ಸಾಲಿನಲ್ಲಿರುವ ಮತ್ತು ಇವತ್ತಿಗೂ ಪರಿಶ್ರಮದ ದುಡಿಮೆಯಿಂದಲೇ ಜೀವನ ನಡೆಸುತ್ತಿರುವ ಲವಕುಮಾರ್ ವ್ಯಕ್ತಿತ್ವ. ಇಡೀ ರಾಜ್ಯವನ್ನೇ ಬೆಚ್ಚಿ ಬೀಳಿಸಿದ್ದ ಅಮರ್ ಆಳ್ವ ಕೊಲೆ ಪ್ರಕರಣದಲ್ಲಿ ಸಮಗ್ರ ಮಾಹಿತಿ ಸಂಗ್ರಹಿಸಿ ಸುಮಾರು 186 ಪುಟಗಳ ಚಾರ್ಜ್ ಶೀಟ್ ಸಲ್ಲಿಸಿದವರು ಲವಕುಮಾರ್. ಎಷ್ಟೇ ಒತ್ತಡ, ಆಮಿಷ, ಪ್ರಭಾವಗಳ ನಡುವೆಯೇ 'ಡಾನ್ ಅಶೋಕ್ ಶೆಟ್ಟಿ'ಯನ್ನು ಈ ಕೇಸ್‌ನಲ್ಲಿ ಆರೋಪಿಯಾಗಿ ಹೆಸರಿಸಿದವರು. ಕೊಲೆ ಆರೋಪಿಗಳು ಮಂಗಳೂರಿನಿಂದ ದುಬೈಗೆ ಮಾಡಿದ ಅಂತಾರಾಷ್ಟ್ರೀಯ ಫೋನ್ ಕಾಲ್‌ನ ಮಾಹಿತಿಗಾಗಿ ಮದ್ರಾಸ್ ಮತ್ತು ಮುಂಬೈನಲ್ಲಿದ್ದ ವಿದೇಶ ಸಂಚಾರ ನಿಗಮದ 'ಗೇಟ್ ವೇ' ಟೆಲಿಫೋನ್ ಎಕ್ಸ್ಚೇಂಜ್‌ನಲ್ಲಿನ ದಾಖಲೆಗಳನ್ನು ಜಾಲಾಡಿ ಸಾಕ್ಷಿ ಸಂಗ್ರಹಿಸಿದ ದಕ್ಷಿಣ ಭಾರತದ ಏಕೈಕ ಪೊಲೀಸ್ ಅಧಿಕಾರಿ ಕೂಡ ಹೌದು.

ಲವಕುಮಾರ್ ಅವರಿಗೀಗ 76 ವರ್ಷ ವಯಸ್ಸು. ಬದುಕಿನ ಎರಡನೆಯ ಇಳಿಕೆಯ ಆರಂಭದಲ್ಲಿದ್ದಾರೆ. ಅವರ ದೇಹದೊಳಗಿನ ಆರೋಗ್ಯ, ಮನಸ್ಸಿನೊಳಗಿನ ಉತ್ಸಾಹ ಗಮನಿಸಿದರೆ ಇದೇನು ಮಹಾ ವಯಸ್ಸಲ್ಲ ಅಂತ ಅನ್ನಿಸುತ್ತದೆ.

ನೀವೊಮ್ಮೆ ಗಮನಿಸಿ ನೋಡಿ. ಅತಿ ಕಡಿಮೆ ಅವಧಿಯಲ್ಲಿ ಯಶಸ್ಸು, ಕೀರ್ತಿ ಕಂಡ ಅನೇಕ ಪೊಲೀಸ್ ಅಧಿಕಾರಿಗಳು ಬಲು ಬೇಗನೆ ಇನ್ ಸೆನ್ಸಿಟಿವ್ ಆಗುತ್ತಾರೆ. ಒಂದು ತಣ್ಣನೆಯ ದುರಹಂಕಾರ ಅಂಥವರನ್ನು ಆವರಿಸಿಕೊಂಡಿರುತ್ತದೆ. ಆದರೆ ಲವಕುಮಾರ್‌ರವರಲ್ಲಿ ಅಂತಹ ಯಾವ ಬದಲಾವಣೆಯೂ ಆಗಿಲ್ಲ. ಆಗುವುದೂ ಇಲ್ಲ. ಅವರೊಂದಿಗಿನ ನನ್ನ ಸ್ನೇಹಕ್ಕೆ ಸರಿ ಸುಮಾರು 30 ವರ್ಷಗಳ ಇತಿಹಾಸವಿದೆ.

ಕರ್ತವ್ಯದಲ್ಲಿದ್ದಾಗ ಲವಕುಮಾರ್ ಯಾವತ್ತೂ ದುಡ್ಡಿನ ಹಿಂದೆ ಬಿದ್ದವರಲ್ಲ. ದುಡ್ಡೇ ಮಾಡಬೇಕೆಂದು ಹೊರಟಿದ್ದರೆ ದುಡ್ಡು ಮಾತ್ರ ಮಾಡುತ್ತಿದ್ದರೇನೋ? ಹೆಸರು ಮಾಡಬೇಕೆಂದು ಪ್ರಯತ್ನಿಸಿದ್ದರೂ ಅಷ್ಟೇ. ಹೆಸರನ್ನಷ್ಟೇ ಮಾಡುತ್ತಿದ್ದರು. ಆದರೆ ಏನನ್ನಾದರೂ ಸಾಧಿಸಬೇಕು ಅಂತ ಲವಕುಮಾರ್ ಪೊಲೀಸ್ ಇಲಾಖೆಗೆ ಬಂದವರು. ಸಾಧಿಸಿದವರು ಕೂಡ ಹೌದು. ಹಾಗಾಗಿ

☞ 12

# ಶಿಕಾರಿಪುರದಲ್ಲಿ ಗಂಡನಿಂದಲೇ ಹೆಂಡತಿ ಕೊಲೆ!?

**ಶಿವಮೊಗ್ಗ ಜಿಲ್ಲೆ ಸದ್ಯ ಯಾವುದೇ ಕೊಲೆ, ಸುಳಿಗೆ ಸಿಕ್ಕಿಕೊಳ್ಳದೇ ಶಾಂತವಾಗಿದೆ ಅಂತಾ ಜನರು, ಪೊಲೀಸರು ನೆಮ್ಮದಿಯಿಂದಿದ್ದಿದ್ದೇ ತಡ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಅಂಬ್ಲಿಗೋಳದಲ್ಲಿ ಗಂಡನೇ ಹೆಂಡ್ತೀನಾ ಕತ್ತು ಹಿಸುಕಿ ಕೊಲೆ ಮಾಡಿದ ಘಟನೆ ನಡೆದಿದೆ.**


ಗೌರಮ್ಮ ಬದುಕಿದ್ದಾಗ

**ಶಿವಮೊಗ್ಗ**
✍ ಸಂತೋಷಕುಮಾರ

ಅದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಸಣ್ಣ ಹಳ್ಳಿ ಅಂಬಲಿಗೋಳ. ಅಲ್ಲಿ ಗುತ್ಯಪ್ಪ ಹುಚ್ಚಪ್ಪ ಧೂಪದಹಳ್ಳಿ ತನ್ನ ಹೆಂಡತಿ ಗಂಗಮ್ಮ ಮತ್ತು ಮಕ್ಕಳೊಂದಿಗೆ ಸಂಸಾರ ಮಾಡುತ್ತಾ ಇದ್ದರು. ಗುತ್ಯಪ್ಪ ಮತ್ತು ಗಂಗಮ್ಮ ಇಬ್ಬರೂ ಕೂಲಿ ಮಾಡಿ ಮಕ್ಕಳನ್ನು ಬೆಳೆಸಿ ತಕ್ಕಮಟ್ಟಿಗೆ ವಿದ್ಯಾಭ್ಯಾಸ ಮಾಡಿಸಿದ್ದರು. ಅವರ ಏಳು ಮಕ್ಕಳಲ್ಲಿ ಎರಡು ಗಂಡು, ಐದು ಹೆಣ್ಣು. ಅವರಲ್ಲಿ ಗೌರಮ್ಮ ದೊಡ್ಡವಳು. ಗೌರಮ್ಮ ಏಳನೇ ಕ್ಲಾಸ್‌ತನಕ ಕಲಿತು ಕೂಲಿ ಕೆಲಸಕ್ಕೆ ಹೋಗ್ತಾ ಇದ್ದಳು. ಹೀಗೇ ಕೂಲಿ ಕೆಲಸಕ್ಕೆ ಹೋಗ ಬೇಕಾದರೆ ಗೌರಮ್ಮಗೆ ಅದೇ ಊರಿನ ಚಂದ್ರಪ್ಪ ಅನ್ನುವವರ ಮಗ ಮನುಕುಮಾರ ಲವ್ ಮಾಡು ಅಂತಾ ಗಂಟು ಬಿದ್ದಿದ್ದ. ಆದರೆ ಮೊದ ಮೊದಲು ನಿರಾಕರಿಸಿ, ನಂತರ ಮನಸೋತ ಗೌರಮ್ಮ ಮನುಕುಮಾರನನ್ನು ತನ್ನ ಹೃದಯದಲ್ಲಿಟ್ಟು ಪೂಜಿಸೋಕೆ ಪ್ರಾರಂಭಿಸಿದಳು. ಕೊನೆಗೊಂದು ದಿನ ಗೌರಮ್ಮಳ ಮನೆಯವರಿಗೆ ಈ ವಿಷಯ ಗೊತ್ತಾಗಿ ರಾದ್ಧಾಂತವಾಗಿ ಗೌರಮ್ಮಗೆ ಮತ್ತು ಮನುಗೆ ಎಚ್ಚರಿಕೆ ಕೊಟ್ಟರು. ಆದರೂ ಮನು ಗೌರೀನಾ ಬೇರೆ ಮಾಡೋಕೆ ಯಾರಿಂದಲೂ ಸಾಧ್ಯವಾಗದಿದ್ದಾಗ... ಗೌರಿ ತಾಯಿ ಗಂಗಮ್ಮ ಚಿಕ್ಕಮಗಳೂರಿನ ಕಾಫಿ ಎಸ್ಟೇಟ್‌ಗೆ ಗೌರೀನ ಕೆಲಸಕ್ಕೆ ಸೇರಿಸಿ ತಾವೂ ಅಲ್ಲೇ ಕೆಲಸಕ್ಕೆ ಸೇರಿದ್ದಾರೆ.

ಹಾಗೇ ಕೆಲ ದಿನಗಳು ಕಳೆದಿವೆ. ಇತ್ತ ಕಡೆ ಮನುಗೆ ಗೌರಿ ಎಲ್ಲಿಗೋಗಿದ್ದಾಳಂತ ಗೊತ್ತಾಗದೇ ಒದ್ದಾಡಿದ್ದಾನೆ. ಕಂಡ ಕಂಡವರಲ್ಲಿ ನನ್ನ ಗೌರಿ ಎಲ್ಲಿದ್ದಾಳೆ ಹೇಳೀಂತ ಅಂಗಲಾಚಿದ್ದಾನೆ. ಆದರೆ ಯಾರಿಗೂ ಗೊತ್ತಾಗದ ಹಾಗೆ ಚಿಕ್ಕಮಗಳೂರಿಗೆ ಗಂಗಮ್ಮ ಗೌರಿ ಹೋಗಿದ್ದರಿಂದ ಮನುಗೆ ಸುಳಿವೇ ಸಿಗಲಿಲ್ಲ. ಅಲ್ಲಿ ಗೌರಿ ಮನುನಾ ಮರೀತಿರೋ ಹಾಗೇ ಒಂದು ದಿನ ಮನುಗೆ ಗೌರಿ ಚಿಕ್ಕಮಗಳೂರಲ್ಲಿದ್ದಾಳೆ ಅಂತ ಗೊತ್ತಾಗಿದೆ. ತಡ ಮಾಡದೇ ತಕ್ಷಣ ಮನುಕುಮಾರ ಚಿಕ್ಕಮಗಳೂರಿನ ಗೌರಿ ಕೆಲಸ ಮಾಡೋ ಜಾಗಕ್ಕೆ ಹೋಗಿ ಅಲ್ಲಿ ರಂಪಾಟ ಮಾಡಿದ್ದಾನೆ. ಮನು ಕಾಟ ತಾಳಲಾರದೇ ಗಂಗಮ್ಮ ತನ್ನ ಮಗಳು ಗೌರಿನಾ ಕರ್ಕೊಂಡು ಮತ್ತೆ ಅಂಬಲಿಗೋಳಮೆಗೆ ಬಂದಿದ್ದಾರೆ. ಅಲ್ಲಿಂದ ಮತ್ತೆ ಮನು ಗೌರಿ ಹತ್ತಿರವಾಗಿದ್ದಾರೆ. ಮನುನ ಬಿಟ್ಟು ಒಂದು ಕ್ಷಣಾನೂ ಇರೋದಿಕ್ಕಾಗುತ್ತಿಲ್ಲ ಗೌರಿಗೆ... ಹಾಗೇ ಗೌರಿ ಮತ್ತೆ ಮನುನಾ ಸೇರೋದಕ್ಕೆ ಪ್ರಾರಂಭಿಸಿದ್ದಾಳೆ.... ಈ ಮಧ್ಯೆ ಗೌರಿ ಸಹೋದರಿಯರಾದ ಚಂದ್ರಕಲಾ, ರಾಧಿಕಾ, ಸಂಗೀತಾಗೆ ಮದ್ವೆ ಆಗಿದ್ದು, ಇನ್ನೊಬ್ಬ ಮಗಳು ಶ್ವೇತಾ, ಗೌರಿ ಸಹೋದರರಾದ ಪರಶುರಾಮ ಕೂಲಿ ಕೆಲಸ ಮಾಡುತ್ತಿದ್ದು, ನಾಗರಾಜ ಹೈಸ್ಕೂಲಿಗೆ ಹೋಗುತ್ತಿದ್ದಾನೆ.


ಎಸ್ಪಿ ಮಿಥುನ್‌ಕುಮಾರ್


ಹೆಚ್ಚುವರಿ ಎಸ್ಪಿ ಅನಿಲ್‌ಕುಮಾರ್


ಹೆಚ್ಚುವರಿ ಎಸ್ಪಿ ಕಾರಿಯಪ್ಪ

ಈ ಮನುಕುಮಾರ ಚಂದ್ರಪ್ಪ ತೀರಾ ಕುಡುಕನಾಗಿದ್ದು, ಕುಡಿದು ಆಗಾಗ ಗೌರಿ ಮನೆ ಹತ್ತಿರ ಹೋಗಿ ಗಲಾಟೆ ಮಾಡುತ್ತಿದ್ದನಂತೆ. ಹಾಗಂತಾ ತನ್ನ ಮಗಳ ಜೊತೆ ಶಿಕಾರಿಪುರದಲ್ಲಿರೋ ಮನುನ ತಾಯಿ ಗೌರಮ್ಮಳಿಗೂ ಮನು ಮತ್ತು ಗೌರಿಯ ಮದುವೆ ಇಷ್ಟ ಇರಲಿಲ್ಲ. ಹಾಗಂತಾ ಮನು ತಾಯಿ ಗೌರಮ್ಮನೇ ಗೌರಿ ಮನೆಯವರಿಗೆ ತುಂಬಾ ಸಲ ಹೇಳಿದ್ದಾರಂತೆ. ಆದರೂ ಒಂದು ದಿನ ಮನು ಗೌರೀನ ಕರೆದುಕೊಂಡು ಅಂಬ್ಲಿಗೋಳನಿಂದ ಸುಮಾರು ಹನ್ನೆರಡು ಕಿ.ಮೀ. ದೂರದ ಹಿತ್ಲೂರ ದೇವಸ್ಥಾನಕ್ಕೆ ಗೌರಿಯನ್ನು ಕರೆದುಕೊಂಡು ತಾಳಿಕಟ್ಟಿ ಅದೇ ಅಂಬ್ಲಿಗೋಳಿಯ ಅಂಬೇಡ್ಕರ್ ಕಾಲೋನಿಯ ಮನೆಯೊಂದರಲ್ಲಿ ಗೌರಿ ಜೊತೆ ಸಂಸಾರ ಪ್ರಾರಂಭಿಸಿದ್ದಾನೆ.

ಹಾಗೇ ಸರಿಯಾಗಿ ಸಂಸಾರ ಮಾಡಿಕೊಂಡು ಹೋಗಿದ್ದರೆ ಮನು-ಗೌರಿ ಚೆನ್ನಾಗಿರುತ್ತಿದ್ದರೇನೋ... ಮನು ಹಾಗೆ ಗೌರಿ ಕೂಡಾ ಕೂಲಿ ಕೆಲಸಕ್ಕೆ ಹೋಗುತ್ತಿದ್ದಳು. ಅಲ್ಲಿಂದಾನೇ ಶುರುವಾಯಿತು ಸಮಸ್ಯೆ. ಗೌರಿ ಕೆಲಸಕ್ಕೆ ಹೋಗಿ ಯಾವುದಾದರೂ ಗಂಡಸಿನ ಜೊತೆ ಮಾತಾಡಿದರೆ ಮನು ತುಂಬಾನೇ ಉರಿದುಕೊಳ್ಳುತ್ತಿದ್ದ. ಹಾಗಂತಾ ಗಂಡಹೆಂಡತಿ ಮಧ್ಯೆ ಅದೇ ವಿಷಯಕ್ಕೆ ತುಂಬಾ ಸಲ ಜಗಳವೂ ಆಗಿದೆ. ಮನು ತನ್ನ ಹೆಂಡತಿ ಗೌರಿ ಮೇಲೆ ಇನ್ನೂ ಜಾಸ್ತಿಯೇ ಅನುಮಾನಪಟ್ಟು ಪ್ರತಿನಿತ್ಯ ಇಬ್ಬರಲ್ಲೂ ಸಿಕ್ಕಾಪಟ್ಟೆ ಜಗಳ, ಹೊಡೆದಾಟ ಆಗಿ ಊರಿನ ಕೆಲ ಗಣ್ಯ ನಾಗರೀಕರು ಸಮಾಧಾನ ಕೂಡ ಮಾಡಿ ಸಂಸಾರ ಸರಿ ಮಾಡಿದ್ದಾರೆ. ಆದರೂ ನಾಯಿ ಬಾಲ ಡೊಂಕು ಅನ್ನೋ ಹಾಗೆ ಮನೂನ ಕ್ರೋಧ, ಅನುಮಾನ ನಿಲ್ಲಲೇ ಇಲ್ಲ. ಮನುವಿನಲ್ಲಿ ತನ್ನ ಹೆಂಡತಿ ಗೌರಿ ಮೇಲಿರೋ ಅನುಮಾನ ಜಾಸ್ತಿಯಾಗಿ ಮತ್ತೂ ಸಮಸ್ಯೆ ಜಾಸ್ತಿಯಾದಾಗ ಗೌರಿ ಮನುನಾ ಸಹವಾಸೇ ಬೇಡ ಅಂತ ನಿರ್ಧರಿಸಿ ಶಿಕಾರಿಪುರದ ಗಾರ್ಮೆಂಟ್ ಒಂದರಲ್ಲಿ ಕೆಲಸಕ್ಕೆ ಸೇರಿದ್ದಾಳೆ. ಈ ಮಧ್ಯೆ ಮನು ಗೌರಿಗೆ ಆರು ವರ್ಷದ ವರ್ಷಾ, ನಾಲ್ಕು ವರ್ಷದ ಧ್ರುವ ಹೆಸರಿನ ಮುದ್ದು ಮಕ್ಕಳಿದ್ದಾವೆ.


ಆರೋಪಿ ಮನುಕುಮಾರ

ಗೌರಿ ಗಾರ್ಮೆಂಟ್‌ನಲ್ಲಿ ಕೆಲಸ ಮಾಡುತ್ತಿದ್ದರೆ, ಕುಡಿದು ಅಲ್ಲಿಗೂ ಹೋಗಿ ಮನು ಕಾಟ ಕೊಡುವುದಕ್ಕೆ ಶುರುಹಚ್ಚಿಕೊಂಡಿದ್ದಾನೆ. ಗಾರ್ಮೆಂಟ್‌ನಲ್ಲಿ ಕೆಲಸ ಮಾಡುವವರಿಗೂ ಇವರಿಂದ ಕಿರಿಕಿರಿಯಾಗಿ ಗೌರಿಯನ್ನು ಕೆಲಸಕ್ಕೆ ಬರಬೇಡ ಅನ್ನೋ ಸ್ಥಿತಿ ಉದ್ಭವವಾಗಿದೆ. ಮತ್ತೆ ಗೌರಿ ತನ್ನ ತವರು ಮನೆಗೆ ಹೋಗಿದ್ದಾಲೆ. ಆಗ ಮನುವಿನ ತಾಯಿ ಶಿಕಾರಿಪುರ

☞ 12


ಸಿಪಿಐ ಆರ್.ಆರ್. ಪಾಟೀಲ


ಗೌರಮ್ಮಳ ಶವ


ಇದೇ ಮನೆಯಲ್ಲಿ ಕೊಲೆಯಾಗಿದ್ದು


ಮೃತ ಗೌರಮ್ಮಳ ತವರುಮನೆ ಕುಟುಂಬ


ಗೌರಮ್ಮಳ ತಾಯಿ ಗಂಗಮ್ಮ

# ಮಂಗಳೂರು : ಪತ್ನಿ, ಮಗುವನ್ನು ಕೊಂದು ಆತ್ಮಹತ್ಯೆ ಮಾಡಿಕೊಂಡ ಕಾರ್ತಿಕ್ ಭಟ್!



ಕಾರ್ತಿಕ್ ಭಟ್


**ಮುಲ್ಕಿ ಬಳಿಯ ಪಕ್ಷಿಕೆರೆ ಜನರು ಒಂದು ಕುಟುಂಬದ ಮೂವರ ಸಾವಿನ ಸುದ್ದಿ ಕೇಳಿ ಬೆಚ್ಚಿಬಿದ್ದಿದ್ದಾರೆ. ಆರು ವರ್ಷಗಳ ಹಿಂದೆ ಶಿವಮೊಗ್ಗ ಮೂಲದ ಯುವತಿ ಪ್ರಿಯಾಂಕ ಅವರನ್ನು ಮದುವೆಯಾಗಿದ್ದ ಕಾರ್ತಿಕ್ ಭಟ್ ದಂಪತಿಗಳಿಗೆ ನಾಲ್ಕು ವರ್ಷದ ಮುದ್ದಾದ ಗಂಡು ಮಗುವಿತ್ತು. ಸುಖ ಸಂಸಾರವೂ ಇತ್ತು. ಇಂಥ ಕುಟುಂಬ ಹಠಾತ್ತಾಗಿ ಸಾವಿನ ನಿರ್ಧಾರಕ್ಕೆ ಬಂದಿದ್ದು ಯಾಕೆ ಎನ್ನುವುದೇ ಅಲ್ಲಿ ಸೇರಿದ್ದವರ ಪ್ರಶ್ನೆಯಾಗಿತ್ತು.**





ಹತ್ಯೆಯಾದ ಪ್ರಿಯಾಂಕ ಹಾಗೂ ಆಕೆಯ ಮಗು

ಪಕ್ಷಿಕೆರೆ ಬಳಿಯ ಕೆಮ್ರಾಲ್ ನಿವಾಸಿ ಜನಾರ್ಧನ ಭಟ್ ಮತ್ತು ಶ್ಯಾಮಲಾ ದಂಪತಿಯ ಮೂವರು ಮಕ್ಕಳಲ್ಲಿ ಇಬ್ಬರು ಹೆಣ್ಣಕ್ಕಳು, ಏಕೈಕ ಪುತ್ರನೇ ಕಾರ್ತಿಕ್. ಪ್ರೀತಿಯ ಪುತ್ರನ ಹೆಸರಲ್ಲಿಯೇ ಜನಾರ್ಧನ ಭಟ್, ಪಕ್ಷಿಕೆರೆಯಲ್ಲಿ 30 ವರ್ಷಗಳಿಂದ ಸಣ್ಣ ಹೋಟೆಲ್ ನಡೆಸುತ್ತಿದ್ದಾರೆ. ಹೆಣ್ಮಕ್ಕಳಿಗೆ ಮದುವೆಯಾದ ಬಳಿಕ ಪುತ್ರನಿಗೂ ಮದುವೆಯಾಗಿತ್ತು. ಮಗನ ಮದುವೆ ನಂತರವೇ ಇವರ ಕುಟುಂಬದಲ್ಲಿ ಬಿರುಗಾಳಿ ಎದ್ದಿತ್ತು. ಸೊಸೆಯಾಗಿ ಬಂದಿದ್ದ ಪ್ರಿಯಾಂಕ ಮತ್ತು ಅತ್ತೆ, ಮಾವನಿಗೆ ಸರಿ ಹೋಗುತ್ತಿರಲಿಲ್ಲ. ವೃದ್ಧ ತಂದೆ, ತಾಯಿ ಜೊತೆಗೆ ರಸ್ತೆಬದಿಯ ಫ್ಲಾಟಿನಲ್ಲಿ ನೆಲೆಸಿದ್ದರೂ, ಇವರನ್ನು ಒಡೆದ ಮನೆಯಾಗಿತ್ತು. ತಂದೆ, ತಾಯಿ ದಿನವೂ ಬೆಳಗ್ಗೆದ್ದು ಹೋಟೆಲಿಗೆ ಹೋಗುತ್ತಿದ್ದರೆ, ಕಾರ್ತಿಕ್ ದಂಪತಿ ತಮ್ಮ ಕೋಣೆಯಲ್ಲಿ ತಮ್ಮಷ್ಟಕ್ಕೇ ಗೊಣಗಿಕೊಂಡು ಇರುತ್ತಿದ್ದರು. ಇವರ ನಡುವಿನ ಕೋಪ



ಕೃತ್ಯ ನಡೆದ ಮನೆಯಲ್ಲಿ ಪೊಲೀಸರ ಪರಿಶೀಲನೆ

ಎಷ್ಟೆಂದರೆ, ಮೂರು ವರ್ಷದಿಂದ ಮನೆಯಲ್ಲೇ ಇದ್ದ ತಂದೆ, ತಾಯಿ ಜೊತೆಗೆ ಮಾತನ್ನೇ ಬಿಟ್ಟಿದ್ದರಂತೆ.

ಸ್ಥಳೀಯ ಕೋ ಆಪರೇಟಿವ್ ಸೊಸೈಟಿ ಒಂದರಲ್ಲಿ ಕೆಲಸ ಮಾಡುತ್ತಿದ್ದ ಕಾರ್ತಿಕ್ ಎರಡು ತಿಂಗಳ ಹಿಂದೆ ಕೆಲಸವನ್ನೂ ತೊರೆದಿದ್ದ ಎನ್ನಲಾಗಿದೆ. ಇದರಿಂದಾಗಿ ಸ್ವಲ್ಪ ಹಣಕಾಸು ತೊಂದರೆ ಎದುರಾಗಿದ್ದರೂ ತೋರಿಸಿಕೊಂಡಿರಲಿಲ್ಲ. ಮಗುವನ್ನು ದಂಪತಿ ಜೊತೆಯಾಗೇ ಶಾಲೆಗೆ ಕರೆದೊಯ್ಯುತ್ತಿದ್ದರು. ಮೊನ್ನೆ ದೀಪಾವಳಿಯನ್ನೂ ಜೊತೆಗೇ ಆಚರಿಸಿಕೊಂಡಿದ್ದರು. ಮನೆ ಮುಂದೆ ಸಂಭ್ರಮದಿಂದಲೇ ಪಟಾಕಿಯನ್ನೂ ಒಡೆದಿದ್ದರು ಎಂದು ಸ್ಥಳೀಯರು ಹೇಳುತ್ತಾರೆ.

**ಪತ್ನಿ, ಮಗುವನ್ನು ಕೊಂದು ಆತ್ಮಹತ್ಯೆ**

ಅಂದು ಶುಕ್ರವಾರ ಮಧ್ಯಾಹ್ನ ಮುಲ್ಕಿ ಬಳಿಯ ಬೆಳ್ಳಾಯರು ಎಂಬಲ್ಲಿ ಯುವಕನೊಬ್ಬ ಚಲಿಸುತ್ತಿದ್ದ ರೈಲಿನಡಿಗೆ ಬಿದ್ದು ಪುಡಿ ಪುಡಿಯಾಗಿದ್ದು, ಯಾರೋ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನುವ ಸುದ್ದಿ ಮುಲ್ಕಿ ಪೊಲೀಸರಿಗೆ ಲಭಿಸಿತ್ತು. ಯುವಕನ ದೇಹ ಛಿದ್ರಗೊಂಡಿದ್ದರಿಂದ ಗುರುತು ಪತ್ತೆಯಾಗಿರಲಿಲ್ಲ. ಮುಲ್ಕಿಯ ರೈಲ್ವೆ ಪೊಲೀಸರು ಕೇಸು ದಾಖಲಿಸಿದ್ದರು. ಯುವಕನ ಮೃತದೇಹ ಸಿಕ್ಕಿದ ತುಸು ದೂರದಲ್ಲೇ ಬೈಕ್ ಒಂದು ಪತ್ತೆಯಾಗಿತ್ತು. ಆತನ ದೇಹದಲ್ಲಿ ಬೇರಾವುದೇ ಗುರುತು ಪತ್ರಗಳಿರಲಿಲ್ಲ. ಶನಿವಾರ ಬೆಳಗ್ಗೆ ಸ್ಥಳದಲ್ಲಿ ಬೈಕ್ ಕೀ ಸಿಕ್ಕಿದ್ದು ಬೈಕನ್ನು ಚೆಕ್ ಮಾಡಿದಾಗ, ಅದರಲ್ಲಿ ಆರ್.ಸಿ. ಕಾರ್ಡ್ ಸಿಕ್ಕಿದ್ದರಿಂದ ಪಕ್ಷಿಕೆರೆಯ ವಿಳಾಸ ತೋರಿಸಿತ್ತು. ಪಕ್ಷಿಕೆರೆಯಲ್ಲಿ ಜನಾರ್ಧನ ಭಟ್ ಹೋಟೆಲ್ ನಡೆಸುತ್ತಿದ್ದು, ಜನಾನುರಾಗಿ ವ್ಯಕ್ತಿಯಾಗಿದ್ದರು. ಅವರ ಮಗನೇ ಮೃತಪಟ್ಟ ಕಾರ್ತಿಕ್ ಎಂದು ಪೊಲೀಸರು ಅವರ ಬಳಿಗೆ ತೆರಳಿದ್ದರು.

**30 ವರ್ಷಗಳಿಂದ ಹೋಟೆಲ್ ನಡೆಸುತ್ತಿದ್ದ ದಂಪತಿ**

ಮಧ್ಯಾಹ್ನ 1.30ರ ಸುಮಾರಿಗೆ ಪೊಲೀಸರು ಜನಾರ್ಧನ ಭಟ್ ಅವರ ಹೋಟೆಲಿಗೆ ತೆರಳಿ, ಕಾರ್ತಿಕ್ ಬಗ್ಗೆ ಕೇಳಿದಾಗ ನಿನ್ನೆ ಬೆಳಗ್ಗೆ ಮನೆಯಲ್ಲಿದ್ದರು. ಸಂಜೆ ಬಾಗಿಲು ಹಾಕ್ಕೊಂಡಿತ್ತು. ಇವತ್ತು ಬೆಳಗ್ಗೆ ಕಾಣಿಸಿರಲಿಲ್ಲ. ನಾವು ಬೆಳಗ್ಗೆಯೇ ಹೋಟೆಲಿಗೆ ಬಂದಿದ್ದವು ಎಂದು ತಿಳಿಸಿದ್ದಾರೆ. ಫೋನ್ ಮಾಡಿದರೆ ಮಗ ಮತ್ತು ಸೊಸೆಯ ಫೋನ್ ಸ್ವಿಚ್ ಆಫ್ ಬರುತ್ತಿತ್ತು. ಕೂಡಲೇ ಮನೆಗೆ ತೆರಳಿ, ಅವರಿದ್ದ ಕೋಣೆಯ ಬಾಗಿಲು ಒಡೆದು ನೋಡಿದಾಗ ಬೆಡ್‌ನಲ್ಲಿ ಮಗು ಕೊಲೆಯಾದ ಸ್ಥಿತಿಯಲ್ಲಿ ಬಿದ್ದಿತ್ತು. ಅಲ್ಲಿಯೇ ಕೆಳಗಡೆ ಸೊಸೆ ಪ್ರಿಯಾಂಕ ಮೃತದೇಹ ಪತ್ತೆಯಾಗಿದೆ. ಕಾರ್ತಿಕನ ವೃದ್ಧ ತಂದೆ, ತಾಯಿ ಅದೇ ಮನೆಯಲ್ಲಿ ನಿನ್ನೆ ರಾತ್ರಿ ಕಳೆದಿದ್ದರೂ, ಮನೆಯಲ್ಲಿ ಸೊಸೆ, ಮಗು ಮೃತಪಟ್ಟಿರುವುದು ಅವರ ಗಮನಕ್ಕೆ ಬಂದಿರಲಿಲ್ಲ.

ಒಂದೇ ಮನೆಯಲ್ಲಿದ್ದರೂ ಮಗ, ಸೊಸೆ ದಿನವೂ ಹೋಟೆಲೇ ತಮ್ಮ ಜಗತ್ತು ಅಂದ್ಕೊಂಡಿದ್ದ ಜನಾರ್ಧನ ಭಟ್ ಮತ್ತು ಶ್ಯಾಮಲಾ ಜೊತೆಗೆ ಮಾತುಕತೆ ಇರಲಿಲ್ಲ. ಹೀಗಾಗಿ ಕೆಲವೊಮ್ಮೆ ಮಗ, ಸೊಸೆ ಮನೆಯಿಂದ ಹೊರಗೆ ಹೋಗುತ್ತಿದ್ದರೂ, ತಡವಾಗಿ ಮನೆಗೆ ಬರುತ್ತಿದ್ದರೂ, ಇವರ ಚಿಂತೆ ಮಾಡುತ್ತಿರಲಿಲ್ಲ. ಪೊಲೀಸರ ಮಾಹಿತಿ ಪ್ರಕಾರ, ಶುಕ್ರವಾರ (ನ.8) ಬೆಳಗ್ಗೆ 11 ಗಂಟೆ ಸುಮಾರಿಗೆ ಪತ್ನಿ ಮತ್ತು ಮಗುವನ್ನು ಗ್ಲಾಸಿನ ಚೂರಿನಿಂದ ತಿವಿದು ಹತ್ಯೆ ಮಾಡಲಾಗಿದೆ. ಅಲ್ಲದೆ, ಮನೆಯ ಕೋಣೆಯಲ್ಲಿ ಸೀರೆಯನ್ನು ಬಿಗಿದ ರೀತಿ ಕಂಡು ಬಂದಿದ್ದು, ಕಾರ್ತಿಕ್ ಅದರಲ್ಲಿ ಆತ್ಮಹತ್ಯೆಗೆ ಪ್ರಯತ್ನ ಪಟ್ಟಿದ್ದಾನೆ ಎನ್ನುವ ಸಂಶಯ ವ್ಯಕ್ತವಾಗಿದೆ. ಅಲ್ಲದೆ, ಮನೆಯಲ್ಲಿ ಸಿಕ್ಕ ಡೈರಿಯಲ್ಲಿ ಸುದೀರ್ಘ ಡೆತ್ ನೋಟ್ ಇದ್ದು, ಅದರಲ್ಲಿ ಹಲವು ವಿಚಾರಗಳನ್ನು ಬರೆದಿಟ್ಟಿದ್ದಾನೆ.

**ತಂದೆ, ತಾಯಿಗೆ ಶವ ನೀಡಬೇಡಿ**



ಕಾರ್ತಿಕ್‌ನ ತಂದೆ ಜನಾರ್ಧನ, ತಾಯಿ ಶ್ಯಾಮಲಾ ಹಾಗೂ ಸಹೋದರಿ


ತಮ್ಮ ಶವಗಳನ್ನು ಪತ್ನಿಯ ತಂದೆ, ತಾಯಿಗೆ ನೀಡುವಂತೆ ಹೇಳಿದ್ದು, ತಂದೆ, ತಾಯಿ ತಮ್ಮ ಅಂತ್ಯಸಂಸ್ಕಾರ ಮಾಡಬಾರದು ಎಂದು ಬರೆದಿಟ್ಟಿದ್ದಾನೆ. ಅಲ್ಲದೆ, ತನಗೆ ಸೇರಬಾಕದ ಆಸ್ತಿಯ ವಿಚಾರವನ್ನೂ ಯಾರಿಗೆ ಸೇರಬೇಕು ಎನ್ನುವ ಬಗ್ಗೆ ಬರೆಯಲಾಗಿದೆ. ತನ್ನ ಸಾವಿಗೆ ಯಾರೂ ಕಾರಣರಲ್ಲ ಎಂಬುದನ್ನೂ ಬರೆಯಲಾಗಿದೆ. ಕಾರ್ತಿಕ್ ಪತ್ನಿ ಪ್ರಿಯಾಂಕ ಶಿವಮೊಗ್ಗ ಮೂಲದವರಾಗಿದ್ದು, ಆಕೆಯ ಹೆತ್ತವರು ಬಂದ ಬಳಿಕವೇ ಪೋಸ್ಟ್‌ಮಾರ್ಟಂ ನಡೆಸಲಾಗುವುದು ಎಂದು ಸ್ಥಳಕ್ಕೆ ಬಂದ ಪೊಲೀಸ್ ಕಮೀಷನರ್ ಅನುಪಮ್ ಅಗರ್ವಾಲ್ ತಿಳಿಸಿದ್ದಾರೆ.

ಕಾರ್ತಿಕ್ ಪತ್ನಿ ಪ್ರಿಯಾಂಕ ಗರ್ಭಿಣಿ ಎನ್ನುವ ವಿಷಯವೂ ಕೇಳಿಬರುತ್ತಿದೆ. ಮನೆಯಲ್ಲಿ ಕಲಹ, ಕೈಯಲ್ಲಿ ಕೆಲಸವೂ ಇಲ್ಲ ಎನ್ನುವ ನೋವಿನಲ್ಲೋ ಏನೋ ಕಾರ್ತಿಕ್ ದುಡುಕಿನ ನಿರ್ಧಾರಕ್ಕೆ ಬಂದಿದ್ದಾನೆ. ಮೇಲ್ನೋಟಕ್ಕೆ ಕೌಟುಂಬಿಕ ಕಲಹ, ಅತ್ತೆ-ಸೊಸೆ ಜಗಳದ ಸಮಸ್ಯೆ ಕೇಳಿಬಂದಿದ್ದು, ಇಷ್ಟಕ್ಕೇ ಕಾರ್ತಿಕ್ ತನ್ನ ಪತ್ನಿ, ಮಗುವನ್ನು ಸಾಯಿಸಿ ತಾನೂ ಸಾವಿಗೆ ಶರಣಾದನೇ ಅನ್ನುವ ಪ್ರಶ್ನೆಗೆ ಸದ್ಯಕ್ಕೆ ಉತ್ತರವಿಲ್ಲ. ಅತ್ತೆ-ಸೊಸೆ ಜಗಳ ಇರುವುದು ಸಮಾಜದಲ್ಲಿ ಸಾಮಾನ್ಯ ಹಾಗಂತ, ಆ ಒಂದು ಗಲಾಟೆಗೆ ತಮ್ಮ ಬದುಕನ್ನೇ ಅಂತ್ಯಗೊಳಿಸುವುದು, ಬಾಳಿ ಬದುಕಬೇಕಾದ ಜೀವಗಳನ್ನು ಕೊಲ್ಲುವುದು, ಬದುಕೇ ಬೇಡ ಎಂದುಕೊಂಡು ಸಾವಿನ ದಾರಿ ಹಿಡಿಯುವುದು ಒಂದು ಕ್ಷಣದ ಸಿಟ್ಟು, ಚಿಂತೆಯಿಂದ ಹುಟ್ಟುವ ದುಡುಕಿನ ನಿರ್ಧಾರವಷ್ಟೇ.

**ತಂದೆ-ತಾಯಿ ಕಿರುಕುಳ ನೀಡುತ್ತಿದ್ದರು : ಪತ್ನಿ ಕುಟುಂಬಸ್ಥರ ಆರೋಪ**

ಪತ್ನಿ, ಮಗುವನ್ನು ಕೊಂದು ಮನೆಮಗ ಪಕ್ಷಿಕೆರೆಯ ಕಾರ್ತಿಕ್ ಭಟ್ ರೈಲಿನಡಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎನ್ನಲಾದ ಪ್ರಕರಣದಲ್ಲಿ ಪತ್ನಿ ಪ್ರಿಯಾಂಕ ಕುಟುಂಬಸ್ಥರು ಬಹಳಷ್ಟು ಅನುಮಾನಗಳನ್ನು ವ್ಯಕ್ತಪಡಿಸಿದ್ದಾರೆ. ವೆನ್ಲಾಕ್ ಆಸ್ಪತ್ರೆಗೆ ಆಗಮಿಸಿದ್ದ ಶಿವಮೊಗ್ಗ ಮೂಲದ ಪ್ರಿಯಾಂಕ ತಾಯಿ ಮತ್ತು ದೊಡ್ಡಪ್ಪ, ನಮ್ಮ ಅಳಿಯ ಕಾರ್ತಿಕ್ ಪತ್ನಿ, ಮಗುವನ್ನು ಕೊಲ್ಲುವಂಥ ಮನಸ್ಥಿತಿಯವನೇ ಅಲ್ಲ. ಇದರ ಹಿಂದೆ ಬೇರೇನೋ ಇದೆ, ಪೊಲೀಸರು ಸೂಕ್ತ ತನಿಖೆ ನಡೆಸಬೇಕೆಂದು ಆಗ್ರಹ ಮಾಡಿದ್ದಾರೆ.

ಪ್ರಿಯಾಂಕ ಅವರ ದೊಡ್ಡಪ್ಪ



ಕೃತ್ಯ ನಡೆದ ಸ್ಥಳದಲ್ಲಿ ಜನರು

☞ 5

4 ☞

ಉಮಾಶಂಕರ ಉಪಾಧ್ಯಾಯ ಮಾಧ್ಯಮಕ್ಕೆ ಪ್ರತಿಕ್ರಿಯಿಸಿ, ಕಾರ್ತಿಕ್ ಈ ರೀತಿಯ ಕೃತ್ಯ ಮಾಡುವ ಕಟುಕನಂತೂ ಅಲ್ಲ. ಪತ್ನಿ, ಮಗುವನ್ನು ಒಳ್ಳೆ ರೀತಿಯಲ್ಲಿ ನೋಡಿಕೊಂಡಿದ್ದ. ಆರ್ಥಿಕ ಸಂಕಷ್ಟ ಇತ್ತು ಎಂದು ಮಾಧ್ಯಮದಲ್ಲಿ ಹೇಳುತ್ತ ಇರುವುದು ಸುಳ್ಳು. ಆರ್ಥಿಕ ಸಂಕಷ್ಟದ ಬಗ್ಗೆ ನಮ್ಮಲ್ಲಿ ಹೇಳಿರಲಿಲ್ಲ. ಅವನನ್ನು ಯಾರಾದ್ರೂ ಕೊಂದು ರೈಲಿನಡಿಗೆ ಹಾಕಿದ್ದಿರಲಿಕ್ಕೂ ಸಾಕು. ನಮ್ಮ ತಂದೆ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಮರ್ಯಾದಸ್ಥ ಕುಟುಂಬ, ನಮ್ಮಲ್ಲಿ ಇಂಥ ಕೊಲೆ ಹಿಂದೆಂದೂ ಆಗಿಲ್ಲ. ನಾನು ಜೆಡಿಎಸ್ ಶಿವಮೊಗ್ಗ ಜಿಲ್ಲಾ ಉಪಾಧ್ಯಕ್ಷನಿದ್ದೇನೆ, ಪಿಎಲ್‌ಡಿ ಬ್ಯಾಂಕಿನಲ್ಲಿ ನಾಲ್ಕು ಬಾರಿ ಅಧ್ಯಕ್ಷನಾಗಿದ್ದೇನೆ. ರಾಜಕೀಯ ಹಿನ್ನೆಲೆಯುಳ್ಳ ನಮ್ಮ ಕುಟುಂಬವಾಗಿದ್ದು, ನಾವು ರಾಜಕೀಯ ಬಳಸಿಕೊಳ್ಳುವುದಕ್ಕೆ ಪೊಲೀಸರು ಅವಕಾಶ ನೀಡಬಾರದು. ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗುವಂತೆ ಮಾಡಬೇಕು ಎಂದು ಹೇಳಿದರು.

ಪ್ರಿಯಾಂಕ ತಾಯಿ ಸಾವಿತ್ರಿ ಮಾತನಾಡಿ, ಅಳಿಯ ಕಾರ್ತಿಕ್ ಒಳ್ಳೆ ಹುಡುಗನಾಗಿದ್ದ. ಮನೆಯಲ್ಲಿ ತಂದೆ, ತಾಯಿ ಕಿರುಕುಳ ನೀಡುತ್ತಾರೆಂದು ಹೇಳಿಕೊಂಡಿದ್ದ. ಮಗಳಿಗೂ ಅತ್ತೆ, ಸೊಸೆಯ ಕಿರುಕುಳ ಇತ್ತು. ಇವನು ಮದುವೆಗೆ ಮೊದಲು ನೈಜೀರಿಯಾದಲ್ಲಿ ಕೆಲಸದಲ್ಲಿದ್ದ. ಮದುವೆ ನಂತರವೂ ವಿದೇಶಕ್ಕೆ ಹೋಗುವಂತೆ ತಂದೆ, ತಾಯಿ ಒತ್ತಾಯ ಮಾಡುತ್ತಿದ್ದರು. ಮಗಳನ್ನೂ ಕೆಲಸಕ್ಕೆ ಹೋಗುವಂತೆ ಹೇಳುತ್ತಿದ್ದರು. ಮಗ, ತಂದೆ-ತಾಯಿ ಜೊತೆಗೆ ಮಾತು ಬಿಟ್ಟ ಮೇಲೆ


ಮೃತಳ ಕುಟುಂಬಸ್ಥರು

ಮಗಳೂ ಮಾತು ಬಿಟ್ಟಿದ್ದಳು. ಕಾರ್ತಿಕ್ ಅಕ್ಕ ಕಣ್ಮಣಿಯೂ ಕಿರುಕುಳ ನೀಡುತ್ತಿದ್ದರು. ಮನೆಯಲ್ಲಿ ಇವರು ಜಗಳ ಮಾಡೋದಕ್ಕೆ ಸಾಧ್ಯವೇ ಇಲ್ಲ. ಮಗಳು ಗುರುವಾರ ಫೋನ್ ಮಾಡಿ ಮಾತಾಡಿದ್ದಳು. ಡಿಸೆಂಬರ್‌ನಲ್ಲಿ ಶಿವಮೊಗ್ಗಕ್ಕೆ ಬರೋದಾಗಿ ಹೇಳಿದ್ದಳು.

**ಗಂಡ-ಹೆಂಡತಿ ಜಗಳ ಇರಲಿಲ್ಲ**

ಗಂಡ-ಹೆಂಡತಿ ಜಗಳ ಮಾಡಿದ್ದಾರೆಂದು ಮಾಧ್ಯಮದಲ್ಲಿ ಸುಳ್ಳು ಯಾಕೆ ಕೊಟ್ಟಿರೋದು. ಅತ್ತೆ-ಮಾವ ಬೆಳಗ್ಗೆ ಆರೂವರೆಗೆ ಹೋಟೆಲಿಗೆ ಹೋದಿದ್ದರೆ, ಇವರಿಗೆ ಹೇಗೆ ಗೊತ್ತು ಜಗಳ ಮಾಡೋದು. ಬೇರೆ ಮನೆ ಮಾಡಬೇಕು ಎಂದು ಒತ್ತಾಯ ಮಾಡುತ್ತಿದ್ದರು. ಇದಕ್ಕಾಗಿ ಬೇರೆ ಮನೆಯನ್ನೂ ನೋಡುತ್ತಿದ್ದರು. ಮೊನ್ನೆ ನವರಾತ್ರಿಗೆ ಶಿವಮೊಗ್ಗ ಬಂದಿದ್ದವರು ಒಂದು ವಾರ ಇದ್ದರು. ಆನಂತರ, ಮಗು ಮಾತ್ರ ಪಕ್ಷಿಕೆರೆಗೆ ಹೋಗುವುದಿಲ್ಲ ಎಂದೇ ಅಳ್ತಾ ಇತ್ತು. ತಾಯಿ, ಮಗು ಬಳಿಕ ಅತ್ತು ಕರೆದು ಹೋಗಿದ್ದರು. ಗಂಡ-ಹೆಂಡತಿ ಅಷ್ಟು ಚೆನ್ನಾಗಿದ್ದವರು ಇವನೇ ಕೊಲ್ತಾನೆ ಅಂದ್ರೆ ನಂಬೋಕೆ ಆಗ್ತಿಲ್ಲ ಎಂದು ಹೇಳಿದರು.

ಇವರ ಕುಟುಂಬದ ಇನ್ನೊಬ್ಬ ವ್ಯಕ್ತಿಯಂತೂ ಮಂಗಳೂರು ಪೊಲೀಸರು ಸರಿಯಾದ ತನಿಖೆ ನಡೆಸದೇ ಇದ್ದರೆ ನಾವು ಗೃಹ ಸಚಿವರ ಬಳಿ ಹೋಗುತ್ತೇವೆ. ಬೇರೆ ಪೊಲೀಸರಲ್ಲಿ ತನಿಖೆಗೆ ಕೋರುತ್ತೇವೆ ಎಂದು ಹೇಳಿದರು. ಒಟ್ಟಿನಲ್ಲಿ ಪತ್ನಿ, ಮಗುವನ್ನು ಕಾರ್ತಿಕ್ ಭಟ್ ಕೊಲೆ ಮಾಡಿದ್ದಾನೆ ಎಂಬುದನ್ನು ಅವರು ನಂಬಲು ತಯಾರಿರಲಿಲ್ಲ. ಪಕ್ಷಿಕೆರೆಯ ಕೆಮ್ರಾಲ್‌ನಲ್ಲಿ ವಾಸವಿದ್ದ ಜನಾರ್ಧನ ಭಟ್ ಅವರ ಪುತ್ರ ಕಾರ್ತಿಕ್ ಭಟ್ ಮುಲ್ಕಿ ಬಳಿ ರೈಲಿಗೆ ತಲೆ ಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದು, ಮನೆಯಲ್ಲಿ ಪರಿಶೀಲನೆ ವೇಳೆ ಪತ್ನಿ ಪ್ರಿಯಾಂಕ ಮತ್ತು ನಾಲ್ಕು ವರ್ಷದ ಮಗುವನ್ನು ಹರಿತ ಆಯುಧದಿಂದ ಹತ್ಯೆ ಮಾಡಲಾಗಿತ್ತು. ಪೊಲೀಸರು ಮೇಲ್ನೋಟಕ್ಕೆ ಗಂಡನೇ ಪತ್ನಿ, ಮಗುವನ್ನು ಕೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಹೇಳಿದ್ದಾರೆ. ಸ್ಥಳದಲ್ಲಿ ಡೆತ್ ನೋಟ್ ಸಿಕ್ಕಿದ್ದು, ಅದರಲ್ಲಿ ತಮ್ಮ ಶವಗಳನ್ನು ತಂದೆ, ತಾಯಿ ಮತ್ತು ಅಕ್ಕನಿಗೆ ಮುಟ್ಟಲೂ ಬಿಡಬೇಡಿ. ಪತ್ನಿಯ ಕಡೆಯವರಿಗೆ ಕೊಡಿ ಎಂದು ಬರೆದಿಟ್ಟಿದ್ದಾನೆ. ಒಂದು ಕುಟುಂಬದ ಮೂವರ ಸಾವು ಜನಮಾನಸದಲ್ಲಿ ಸಂಚಲನ ಮೂಡಿಸಿದೆ.

☯

# 18 ವರ್ಷಗಳ ಬಳಿಕ ಹುಟ್ಟೂರಿನ ಮಣ್ಣಿನಲ್ಲಿ ದಫನವಾದ ಸಫಿಯಾ


ಸಫಿಯಾ

ಕಳೆದ 18 ವರ್ಷಗಳ ಹಿಂದೆ ಗೋವಾದಲ್ಲಿ ಬರ್ಬರವಾಗಿ ಹತ್ಯೆಯಾಗಿದ್ದ ಕೊಡಗಿನ ಬಾಲಕಿ ಸಫಿಯಾಳ(14) ಅಸ್ಥಿ ಪಂಜರವನ್ನು ಸೋಮವಾರ ಇಸ್ಲಾಂ ಪದ್ಧತಿಯಂತೆ ಹುಟ್ಟೂರಿನಲ್ಲಿ ಅಂತ್ಯ ಕ್ರಿಯೆ ನಡೆಸಲಾಯಿತು.

ಸಫಿಯಾ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇರಳದ ಕಾಸರಗೋಡು ಜಿಲ್ಲಾ ನ್ಯಾಯಾಲಯ ನ. 6ರಂದು ಸಫಿಯಾಳ ಅಸ್ಥಿ ಪಂಜರಗಳನ್ನು ಆಕೆಯ ಪೋಷಕರಿಗೆ ಹಸ್ತಾಂತರಿಸುವಂತೆ ಮಹತ್ವದ ಆದೇಶ ನೀಡಿತ್ತು.

ಈ ಹಿನ್ನೆಲೆಯಲ್ಲಿ ಸೋಮವಾರ ಕೊಚ್ಚಿ ವಿಧಿವಿಜ್ಞಾನ ಪ್ರಯೋಗಾಲಯದಿಂದ ಅಸ್ಥಿ ಪಂಜರವನ್ನು ಪಡೆದುಕೊಂಡು ಸಂಜೆ ವೇಳೆಗೆ ಗ್ರಾಮಕ್ಕೆ ತರಲಾಯಿತು. ಅಯ್ಯಂಗೇರಿ ಹಳೇ ಮಸೀದಿಯಲ್ಲಿ ಸಫಿಯಾ ಅಸ್ಥಿ ಪಂಜರವನ್ನಿಟ್ಟು ಧರ್ಮ ಗುರುಗಳಾದ ಉಸ್ಮಾನ್ ಮರ್ಝೂಕಿ ಪ್ರಾರ್ಥನೆ ನೆರವೇರಿಸಿದರು.

ಬಳಿಕ ಅಯ್ಯಂಗೇರಿ ಮಸೀದಿಯ ಖಬರ್ ಸ್ಥಾನದಲ್ಲಿ ಸಫಿಯಾಳ ಅಸ್ಥಿಪಂಜರವನ್ನು ದಫನ ಮಾಡಲಾಯಿತು. ಇದರಿಂದಾಗಿ ಸುದೀರ್ಘ 18 ವರ್ಷಗಳ ಬಳಿಕ ಸಫಿಯಾಳ ಪೋಷಕರು ಮಗಳ ಅಂತಿಮ ವಿಧಿ ವಿಧಾನ ನಡೆಸಿದಂತಾಯಿತು. ಈ ಸಂದರ್ಭ ಸಫಿಯಾಳ ತಂದೆ ಮೊಯ್ದು ಮತ್ತು ಇಬ್ಬರು ಸಹೋದರರು, ಅಯ್ಯಂಗೇರಿ ಜಮಾತ್ ಅಧ್ಯಕ್ಷರಾದ ಅಬ್ದುಲ್ ಖಾದರ್, ಗ್ರಾಮ ಪಂಚಾಯಿತಿ ಸದಸ್ಯ ರಶೀದ್ ಅಯ್ಯಂಗೇರಿ, ಪ್ರಮುಖರಾದ ಉಸ್ಮಾನ್, ಮೊಹಮದ್ ಹಾಗೂ ಹತ್ತಾರು ಗ್ರಾಮಸ್ಥರು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.


ಹಮ್ಜಾ

**ಪ್ರಕರಣದ ಹಿನ್ನೆಲೆ**

ನಾಪೋಕ್ಲು ಅಯ್ಯಂಗೇರಿ ನಿವಾಸಿ ಮೊಯ್ದು ಆಯಿಷಾ ದಂಪತಿಯ ಪುತ್ರಿ ಸಫಿಯಾಳನ್ನು ಮನೆ ಕೆಲಸಕ್ಕಾಗಿ 2006ರಲ್ಲಿ ಕಾಸರಗೋಡು ಮುಳಿಯಾರ್ ನಿವಾಸಿ ಗೋವಾದಲ್ಲಿ ಖಾಸಗಿ ಗುತ್ತಿಗೆದಾರನಾಗಿದ್ದ ಕೆ.ಎ. ಹಮ್ಜಾ ಎಂಬಾತ ಕರೆದುಕೊಂಡು ಹೋಗಿದ್ದ. ಸಫಿಯಾಳಿಗೆ ಹಂಸ ಮತ್ತವನ ಪತ್ನಿ ಮೈಮೂನ, ದಿನ ನಿತ್ಯ ದೈಹಿಕ ಹಿಂಸೆ ನೀಡಲು ಆರಂಭಿಸಿದ್ದರು. ಮೈಮೂನಾ ಗೋವಾದಲ್ಲಿ ಮನೆ ಹೊಂದಿದ್ದು, ಸಫಿಯಾ ಅಡುಗೆ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭ ಬಿಸಿ ನೀರು ಬಿದ್ದು, ತೀವ್ರ ಸ್ವರೂಪದ ಸುಟ್ಟ ಗಾಯಗಳಾಗಿ ಜೀವನ್ಮರಣ ಸ್ಥಿತಿಯಲ್ಲಿದ್ದಳು. ಈ ವೇಳೆ ಸಫಿಯಾಳನ್ನು ಆಸ್ಪತ್ರೆಗೆ ಕರದೊಯ್ದರೆ ಬಾಲ ಕಾರ್ಮಿಕ ಕಾನೂನಿನ ಅಡಿಯಲ್ಲಿ ಸಿಲುಕಿಕೊಳ್ಳಬೇಕಾದೀತು ಎಂದು ಹಮ್ಜಾ , ಮೈಮೂನ ಮತ್ತು ಆಕೆಯ ಸಹೋದರ ಎಂ. ಅಬ್ದುಲ್ಲ ಎಂಬವರು ಸಫಿಯಾಳನ್ನು 3 ಭಾಗಗಳಾಗಿ ಕತ್ತರಿಸಿ ಗೋವಾದಲ್ಲಿ ನಿರ್ಮಾಣ ಹಂತದಲ್ಲಿದ್ದ ಸೇತುವೆಯ ಬಳಿ ಹೂತು ಹಾಕಿದ್ದರು.



ದಿನಗಳು ಕಳೆದ ಬಳಿಕ ಸಫಿಯಾ ಕಾಣೆಯಾಗಿರುವ ಕುರಿತು ಕಾಸರಗೋಡಿನ ಆಡೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸಫಿಯಾ ಕಾಣೆಯಾಗಿರುವ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದ ಅಲ್ಲಿನ ನಿವಾಸಿಗಳು ಮತ್ತು ವಿವಿಧ ಸಂಘ ಸಂಸ್ಥೆಗಳು ಪ್ರಕರಣವನ್ನು ಉನ್ನತ ತನಿಖೆಗೆ ಒಳಪಡಿಸಬೇಕೆಂದು 'ಸಫಿಯಾ ಹೋರಾಟ ಸಮಿತಿ' ಮೂಲಕ ಭಾರೀ ಅಭಿಯಾನವನ್ನು ಆರಂಭಿಸಿದ್ದವು. ಸಾರ್ವಜನಿಕರ ಒತ್ತಡ ತೀವ್ರವಾದ ಪರಿಣಾಮ ಅಲ್ಲಿನ ಸರಕಾರ ಎರಡು ವರ್ಷಗಳ ಬಳಿಕ ಪ್ರಕರಣವನ್ನು ಕಾಸರಗೋಡು ಜಿಲ್ಲಾ ಕ್ರೈಂ ಬ್ರಾಂಚ್‌ಗೆ ಹಸ್ತಾಂತರಿಸಿತ್ತು.

ತನಿಖೆ ನಡೆಸಿದ ಕ್ರೈಂ ಬ್ರಾಂಚ್ ಪೊಲೀಸ್ ಅಧಿಕಾರಿಗಳು ಕೆ.ಎ. ಹಮ್ಜಾ, ಆತನ ಪತ್ನಿ ಮೈಮೂನ ಮತ್ತು ಆಕೆಯ ಸಹೋದರ ಎಂ.ಅಬ್ದುಲ್ಲರನ್ನು ತೀವ್ರ ವಿಚಾರಣೆಗೆ ಒಳಪಡಿಸಿದಾಗ ಸಫಿಯಾ ಕೊಲೆಯಾಗಿರುವ ಮಾಹಿತಿ ಹೊರಬಂದಿತ್ತು. 2008ರ ಜೂ.5ರಂದು ಗೋವಾದ ನಿರ್ಮಾಣ ಹಂತದ ಸೇತುವೆ ಕೆಳ ಭಾಗ ಹೂತು ಹಾಕಲಾಗಿದ್ದ ಮೃತದೇಹದ ಕಳೇಬರವನ್ನು ಹೊರತೆಗೆದ ಪೊಲೀಸರು ಅದನ್ನು ಡಿಎನ್‌ಎ ಪರೀಕ್ಷೆಗೆ ಒಳಪಡಿಸಿ ಕಳೇಬರ ಸಫಿಯಾಳದ್ದೇ ಎಂದು ದೃಢಪಡಿಸಿದ್ದರು.

ಪ್ರಕರಣದ ಆರೋಪಿಗಳಾದ ಕೆ.ಎ. ಹಮ್ಜಾ, ಆತನ ಪತ್ನಿ ಮೈಮೂನ ಮತ್ತು ಆಕೆಯ ಸಹೋದರ ಎಂ.ಅಬ್ದುಲ್ಲ, ಇವರಿಗೆ ಸಹಕರಿಸಿದ ಮೊಯ್ದುಹಾಜಿ, ಆಡೂರು ಪೊಲೀಸ್ ಠಾಣೆಯ ಎಎಸ್‌ಐ ಗೋಪಾಲಕೃಷ್ಣ ಅವರುಗಳನ್ನು ಜೈಲಿಗೆ ಅಟ್ಟಿದ್ದರು. ಆ ಮೂಲಕ ಪೊಲೀಸರು ಸಫಿಯಾ ಕೊಲೆ ಪ್ರಕರಣವನ್ನು ಯಶಸ್ವಿಯಾಗಿ ಭೇದಿಸಿದ್ದರು.

**ನ್ಯಾಯಾಲಯದಿಂದ ಶಿಕ್ಷೆ ಪ್ರಕಟ**

ಪ್ರಕರಣದ ವಿಚಾರಣೆ ನಡೆಸಿದ ಕಾಸರಗೋಡು ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯ 2015 ಜುಲೈ 16 ರಂದು ಪ್ರಕರಣದ ಪ್ರಮುಖ ಆರೋಪಿ ಹಮ್ಜಾನಿಗೆ ಮರಣ ದಂಡನೆ ಹಾಗೂ 10 ಲಕ್ಷ ರೂ. ದಂಡ ವಿಧಿಸಿ ಆದೇಶಿಸಿತ್ತು. ಇನ್ನುಳಿದ ಆರೋಪಿಗಳಾದ ಮೈಮೂನ, ಆಕೆಯ ಸಹೋದರ ಎಂ. ಅಬ್ದುಲ್ಲನಿಗೆ ತಲಾ 6 ವರ್ಷ ಸಜೆ, 1 ಲಕ್ಷ ರೂ. ದಂಡ ವಿಧಿಸಿತ್ತು. ಇನ್ನಿಬ್ಬರು ಆರೋಪಿಗಳ ವಿರುದ್ಧ ಸೂಕ್ತ ಸಾಕ್ಷ್ಯಾಧಾರ ಕೊರತೆ ಕಾರಣ ಅವರನ್ನು ಪ್ರಕರಣದಿಂದ ನ್ಯಾಯಾಲಯ ಖುಲಾಸೆಗೊಳಿಸಿತ್ತು. ನಂತರದ ನಡೆದ ಬೆಳವಣಿಗೆಯಲ್ಲಿ ಕೊಲೆ ಪ್ರಕರಣದ ಪ್ರಮುಖ ಆರೋಪಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಕೇರಳ ಹೈಕೋರ್ಟ್ ಮರಣ ದಂಡನೆ ಶಿಕ್ಷೆ ರದ್ದು ಮಾಡಿ ಅದನ್ನು ಜೀವಾವಧಿ ಕಾರಾಗೃಹ ವಾಸದ ಶಿಕ್ಷೆಯಾಗಿ ಮಾರ್ಪಡಿಸಿತ್ತು.

**ಕೊಚ್ಚಿಯಲ್ಲಿ ಅಸ್ಥಿ ಪಂಜರ**

ಕಾಸರಗೋಡು ಸಹಿತ ಕೇರಳ ರಾಜ್ಯದಲ್ಲೇ ತೀವ್ರ ಸಂಚಲನ ಮೂಡಿಸಿದ್ದ ಸಫಿಯಾ ಕೊಲೆ ಪ್ರಕರಣ ಅತ್ಯಂತ ಸೂಕ್ಷ್ಮ ವಿಚಾರವಾಗಿದ್ದ ಹಿನ್ನೆಲೆಯಲ್ಲಿ ಆಕೆಯ ಅಸ್ಥಿಪಂಜರವನ್ನು ನ್ಯಾಯಾಲಯದ ಆದೇಶದಂತೆ ಕೊಚ್ಚಿಯ ವಿಧಿ ವಿಜ್ಞಾನ ಪ್ರಯೋಗಾಲಯದಲ್ಲಿ ಸಂರಕ್ಷಿಸಿ ಇಡಲಾಗಿತ್ತು. ತಮ್ಮ ಪುತ್ರಿಯ ಅಂತಿಮ ವಿಧಿ ವಿಧಾನಗಳನ್ನು ಸಮುದಾಯದ ಪದ್ಧತಿಯಲ್ಲಿ ನಡೆಸಬೇಕಿದೆ. ಈ ಹಿನ್ನೆಲೆಯಲ್ಲಿ ಆಕೆಯ ಅಸ್ಥಿಪಂಜರವನ್ನು ತಮಗೆ ನೀಡುವಂತೆ ಸಫಿಯಾ ಪೋಷಕರಾದ ಮೊಯ್ದು ಮತ್ತು ಆಯಿಷಾ ಕಾಸರಗೋಡು ಜಿಲ್ಲಾ ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯ 2024ರ ನ.6ರಂದು ಸಫಿಯಾಳ ಅಸ್ಥಿಪಂಜರವನ್ನು ಆಕೆಯ ಪೋಷಕರಿಗೆ ಹಸ್ತಾಂತರ ಮಾಡುವಂತೆ ಆದೇಶ ನೀಡಿತ್ತು. ಅದರಂತೆ ಕಾಸರಗೋಡು ನ್ಯಾಯಾಲಯದ ಮೂಲಕ ಸಫಿಯಾಳ ಪೋಷಕರು ಅಸ್ಥಿಪಂಜರಗಳನ್ನು ಪಡೆದುಕೊಂಡರು. ಕೊಚ್ಚಿಯಿಂದ ತರಲಾಗಿದ್ದ ಸಫಿಯಾಳ ಅಸ್ಥಿಪಂಜರವನ್ನು ಅಯ್ಯಂಗೇರಿ ಜಮಾತ್‌ನ ಖಬರ್‌ಸ್ಥಾನದಲ್ಲಿ ಹೂಳುವ ಮೂಲಕ ಸಫಿಯಾಳ ಅಂತಿಮ ವಿಧಿ ವಿಧಾನಗಳನ್ನು ನೆರವೇರಿಸಿದರು.

☯



ಮಹಾರಾಷ್ಟ್ರದ ಏಳು ಜನ ಕುಖ್ಯಾತ ಬಂಧಿತ ಕಳ್ಳರಾದ ದತ್ತಾ ಲಗಮಣ್ಣ ಪವಾರ್, ಗುಲಾಬ್ ಗಂಪು ಕಾಳೆ, ಸಂತೋಷ ಭೀಮಾ ಕಾಳೆ, ಕಿರಣ ಅರ್ಜುನ ಕಾಳೆ, ಲಗಮಣ್ಣ ಬಿಸರಾಂ ಪವಾರ್, ಸುನೀಲ ಲಗಮಣ್ಣಪವಾರ್ ಹಾಗೂ ರಾಮು ಸುಬ್ಬುರಾವ್ ಕಾಳೆ

## ಚಿಕ್ಕೋಡಿ : ಪಿಎಸ್ಐ ಬಸಗೌಡ ನೇರ್ಲಿ ಮತ್ತು ಸಿಬ್ಬಂದಿಗಳ ಯಶಸ್ವಿ ಕಾರ್ಯಾಚರಣೆ...

# ಏಳು ಜನ ಕುಖ್ಯಾತ ಅಂತರರಾಜ್ಯ ಕಳ್ಳರ ಬಂಧನ; 37 ಲಕ್ಷ ರೂ.ಗಳ ಸ್ವತ್ತು ವಶಕ್ಕೆ!

**ಮಹಾರಾಷ್ಟ್ರ ರಾಜ್ಯದ ಉಸ್ಮಾನಾಬಾದ್ ಜಿಲ್ಲೆಯ ತೇರಖೇಡಾ ಪಾರದಿ ವಸತಿ ಪ್ರದೇಶದ ಏಳು ಜನ ಕುಖ್ಯಾತ ಕಳ್ಳರನ್ನು ಅತ್ಯಂತ ಚಾಣಾಕ್ಷತನದಿಂದ ಪತ್ತೆ ಹಚ್ಚಿ ಅವರನ್ನು ಬಂಧಿಸಿ ಅವರಿಂದ ಕಳ್ಳತನ ಮಾಡಿದ್ದ ಮೋಟಾರ್ ಬೈಕ್, ಡಿಸ್ಕ್ ಸಮೇತ ಇದ್ದ 8 ಟೈರ್‌ಗಳು ಮತ್ತು ತಮ್ಮ ಕಳ್ಳತನಕ್ಕೆ ಉಪಯೋಗ ಮಾಡುತ್ತಿದ್ದ 14 ಟೈರ್‌ನ ಮಹೀಂದ್ರಾ ಟ್ರಕ್, ಕಬ್ಬಿಣದ ಪಾನಾ ಸಟ್, ರಾಡ್ ಹೀಗೆ ಒಟ್ಟು 37.40 ಲಕ್ಷ ರೂ.ಗಳ ಮೌಲ್ಯದ ಸ್ವತ್ತನ್ನು ವಶಪಡಿಸಿಕೊಳ್ಳಲಾಗಿದೆ. ಕುಖ್ಯಾತ ಅಂತರರಾಜ್ಯ ಕಳ್ಳರನ್ನು ಬಂಧಿಸುವಲ್ಲಿ ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ ಅವರುಗಳು ಸೂಕ್ತ ನಿರ್ದೇಶನಗಳನ್ನು ಸಿಪಿಐ ವಿಶ್ವನಾಥ ಚೌಗಲಾ ಅವರಿಗೆ ನೀಡಿದರು. ಅದರಂತೆ ಸಿಪಿಐ ವಿಶ್ವನಾಥ ಚೌಗಲಾ ಅವರು ಧಾಡಸಿ ಪಿಎಸ್ಐ ಬಸಗೌಡ ನೇರ್ಲಿ ಅವರ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವನ್ನು ರಚಿಸಿದರು. ಅಂದುಕೊಂಡಂತೆ ತುಂಬಾ ಅಪಾಯಕಾರಿಯಾಗಿರುವ ಪಾಸಿ ಪಾರದಿ ಗ್ಯಾಂಗ್‌ನ ಕುಖ್ಯಾತ ಕಳ್ಳರ ಗುಂಪನ್ನು ಪಿಎಸ್ಐ ಬಸಗೌಡ ನೇರ್ಲಿ, ಹೆಚ್ಚುವರಿ ಪಿಎಸ್ಐ ಲಕ್ಷ್ಮಿ ಬಿರಾದಾರ ಮತ್ತು ಸಿಬ್ಬಂದಿಗಳು ಅತ್ಯಂತ ಯಶಸ್ವಿ ಕಾರ್ಯಾಚರಣೆ ನಡೆಸುವ ಮೂಲಕ ಹೆಡೆಮುರಿ ಕಟ್ಟಿರುವ ಪ್ರಕರಣ ಬೆಳಗಾವಿ ಜಿಲ್ಲೆ, ಚಿಕ್ಕೋಡಿ ಪೊಲೀಸ್ ಠಾಣೆಯಿಂದ ವರದಿಯಾಗಿದೆ.**

ಬೆಳಗಾವಿ
✍ ಮನ್ನಾಪೂರ

ಪಾಸಿ ಪಾರದಿ ಎಂಬ ಜನಾಂಗವೊಂದು ಮಹಾರಾಷ್ಟ್ರ ರಾಜ್ಯದ ಉಸ್ಮಾನಾಬಾದ್, ಬೀಡ್, ನಾಂದೇಡ್ ಮುಂತಾದ ಕಡೆಗಳಲ್ಲಿ ವಾಸಿಸುತ್ತಿದ್ದು, ಈ ಜನಾಂಗದ ಅನೇಕರು ತಂಡ ಮಾಡಿಕೊಂಡು ಕಳ್ಳತನ, ದರೋಡೆ, ಸುಲಿಗೆ ಮಾಡುತ್ತ ಮಹಾರಾಷ್ಟ್ರ ಮತ್ತು ಕರ್ನಾಟಕದ ಗಡಿ ಭಾಗದಲ್ಲಿ ಕಂಟಕರಾಗಿದ್ದಾರೆ. ತುಂಬಾ ಅಪಾಯಕಾರಿ ಮತ್ತು ಕ್ರೂರತೆಗೆ ಹೆಸರಾದ ಇವರಿಗೆ ಕಾನೂನಿನ ಭಯವಂತೂ ಮೊದಲೇ ಇರುವುದಿಲ್ಲ. ಇವರನ್ನು ಬಂಧಿಸಲು ಹೋದ ಪೊಲೀಸರ ಮೇಲೂ ಮಾರಣಾಂತಿಕವಾಗಿ ಹಲ್ಲೆ ಮಾಡುವ ಇವರು ಬ್ರಿಟೀಷರ ಕಾಲದಿಂದಲೂ ಮೋಸ್ಟ್ ಕ್ರಿಮಿನಲ್ ಟ್ರೈಬ್ಸ್ ಎಂದು ಗುರುತಿಸಿಕೊಂಡಿದ್ದಾರೆ. ಇಂತಹ ಅಪಾಯಕಾರಿ ಪಾರದಿ ಗ್ಯಾಂಗ್‌ನ ಕುಖ್ಯಾತ ಏಳು ಜನ ಕಳ್ಳರನ್ನು ಅತ್ಯಂತ ಚಾಣಾಕ್ಷತನದಿಂದ ಬಂಧಿಸಿ ಹೆಡೆಮುರಿ ಕಟ್ಟುವಲ್ಲಿ ಚಿಕ್ಕೋಡಿ ಸಿಪಿಐ ವಿಶ್ವನಾಥ ಚೌಗಲಾ, ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ ನಿರ್ದೇಶನದಲ್ಲಿ ಪಿಎಸ್ಐ ಬಸಗೌಡ ನೇರ್ಲಿ ಮತ್ತು ಅವರ ತಂಡ ಯಶಸ್ವಿ ಕಾರ್ಯಾಚರಣೆ ಮಾಡಿ ಬಂಧಿಸಿದ ವರದಿ ಇದಾಗಿದೆ.



ಎಸ್ಪಿ ಡಾ. ಭೀಮಾಶಂಕರ ಗುಳೇದ




ಹೆಚ್ಚುವರಿ ಎಸ್ಪಿ ಶ್ರುತಿ ಎನ್.ಎಸ್.



ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ



ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ



ಸಿಪಿಐ ವಿಶ್ವನಾಥ ಚೌಗಲಾ



ಪಿಎಸ್ಐ ಬಸಗೌಡ ನೇರ್ಲಿ



ಹೆಚ್ಚುವರಿ ಪಿಎಸ್ಐ ಲಕ್ಷ್ಮಿ ಬಿರಾದಾರ

### ಡಿಸ್ಕ್ ಸಮೇತ 8 ಟೈರ್ ಕಳ್ಳತನ...

ಇತ್ತೀಚಿಗೆ ಚಿಕ್ಕೋಡಿ ನಗರ ಮತ್ತು ಪರಿಸರಗಳಲ್ಲಿ ಕಳ್ಳತನದ ಹಾವಳಿ ಹೆಚ್ಚಾದ ಕಾರಣ ಸ್ಥಳೀಯ ಪಿಎಸ್ಐ ಬಸಗೌಡ ನೇರ್ಲಿ ಅವರು ತುಂಬಾ ಅಲರ್ಟ್ ಆಗಿದ್ದಾರೆ. ಹೆಚ್ಚುವರಿ ಪಿಎಸ್ಐ ಲಕ್ಷ್ಮಿ ಬಿರಾದಾರ ಮತ್ತು ಕ್ರೈಂ ಸಿಬ್ಬಂದಿಗಳಿಗೆ ಮೇಲಿಂದ ಮೇಲೆ ಸೂಕ್ತ ನಿರ್ದೇಶನಗಳನ್ನು ನೀಡುತ್ತಿದ್ದಾರೆ. ಆದರೂ ಕೂಡಾ ಇದರ ನಡುವೆ ದಿನಾಂಕ 20-11-2024ರಂದು ರಾತ್ರಿ ಸಮಯದಲ್ಲಿ ಕರೋಶಿ ಗ್ರಾಮದ ಸೈಯದ್‌ತಾಜುದ್ದೀನ್, ಬಾಬಾಲಾಲ ಜಮಾದಾರ ಎಂಬುವವರಿಗೆ ಸೇರಿದ್ದ ಟ್ರ್ಯಾಕ್ಟರ್ ಟ್ರಾಲಿಗಳಿಗೆ ಅಳವಡಿಸಿದ್ದ ಡಿಸ್ಕ್ ಸಮೇತ 1.60 ಲಕ್ಷ ಮೌಲ್ಯದ 8 ಟೈರ್‌ಗಳನ್ನು ಸದ್ದಿಲ್ಲದೇ ಬೇರ್ಪಡಿಸಿ ಯಾರೋ ಅನಾಮಧೇಯ ಕಳ್ಳರು ಕಳ್ಳತನ ಮಾಡಿಕೊಂಡು ಹೋಗಿದ್ದರು. ಅದೇ ದಿನ ವಿಠ್ಠಲ ಮಲ್ಲಪ್ಪ ಮಾದರ ಇವರ ಮನೆಯ ಮುಂದೆ ನಿಲ್ಲಿಸಿದ 80 ಸಾವಿರ ಮೌಲ್ಯದ ಹೊಂಡಾ ಯುನಿಕಾರ್ನ್ ಮೋಟಾರ್ ಸೈಕಲ್ ನಂ. ಕೆಎ-23 ಇಎಕ್ಸ್-7582 ನೇದ್ದನ್ನು ಸಹಿತ ಕಳ್ಳತನ ಮಾಡಿಕೊಂಡು ಹೋಗಿದ್ದರು. ಎರಡು ಕಳ್ಳತನಗಳು ಕರೋಶಿ ಗ್ರಾಮದ ಜನರಲ್ಲಿ ಆತಂಕವನ್ನು ಸೃಷ್ಟಿಸಿದವು.

### ಪೊಲೀಸರಿಗೆ ದೂರು...

ದಿನಾಂಕ 23-10-2024ರಂದು ಸೈಯದ್ ತಾಜುದ್ದೀನ್ ಬಾಬಾಲಾಲ ಜಮಾದಾರ ಮತ್ತು ವಿಠ್ಠಲ ಮಲ್ಲಪ್ಪ ಮಾದರ ಚಿಕ್ಕೋಡಿ ಪೊಲೀಸ್ ಠಾಣೆಗೆ ಧಾವಿಸಿದರು. ಅಂದು ಕರ್ತವ್ಯದ ಮೇಲಿದ್ದ ಪಿಎಸ್ಐ ಬಸಗೌಡ ನೇರ್ಲಿ ಅವರನ್ನು ಕಂಡು ಅದ್ಯಾರೋ ಕಳ್ಳರು ಡಿಸ್ಕ್ ಸಮೇತ 8 ಟೈರ್‌ಗಳು ಮತ್ತು ಮೋಟಾರ್ ಸೈಕಲ್ ಹೊಂಡಾ ಯುನಿಕಾರ್ನ್ ನಂಬರ್ ಕೆಎ-23 ಇಎಕ್ಸ್-7582 ನೇದ್ದನ್ನು ಕಳ್ಳತನ ಮಾಡಿಕೊಂಡು ಹೋಗಿದ್ದಾರೆ ಎಂದು ವಿವರವಾದ ದೂರನ್ನು ನೀಡಿದರು.

ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ ಪಿಎಸ್ಐ ಬಸಗೌಡ ನೇರ್ಲಿ ಅವರು ತಕ್ಷಣ ಸಿಪಿಐ ವಿಶ್ವನಾಥ ಚೌಗಲಾ, ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರಿಗೆ ತಿಳಿಸಿ ಅವರ ನಿರ್ದೇಶನದಂತೆ ಪ್ರಕರಣ ದಾಖಲಿಸಿಕೊಂಡರು. ಕ್ರೈಂ ಸಿಬ್ಬಂದಿಗಳ ಸಮೇತ ಘಟನಾ ಸ್ಥಳಕ್ಕೆ ಧಾವಿಸಿ ಎರಡು ಕಳ್ಳತನ ಪ್ರಕರಣಗಳಲ್ಲಿ ವಿವರವಾಗಿ ಪಂಚನಾಮೆ ಕೈಗೊಂಡರು. ಅಷ್ಟರಲ್ಲಿ ಘಟನಾ ಸ್ಥಳಕ್ಕೆ ಸಿಪಿಐ ವಿಶ್ವನಾಥ ಚೌಗಲಾ ಭೇಟಿ ನೀಡಿ ಸೂಕ್ಷ್ಮವಾಗಿ ಪರಿಶೀಲಿಸಿ ಇದೊಂದು ವೃತ್ತಿನಿರತ ಕಳ್ಳರ ಕೈಚಳಕವೆಂದು ತರ್ಕಿಸಿ ಪಿಎಸ್ಐ ಬಸಗೌಡ ನೇರ್ಲಿ ಅವರಿಗೆ ಪ್ರಕರಣ ಪತ್ತೆ ಮಾಡುವಲ್ಲಿ ಸೂಕ್ತ ನಿರ್ದೇಶನಗಳನ್ನು ನೀಡಿದರು. ಇದೇ ಸಂದರ್ಭದಲ್ಲಿ ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ ಕೂಡಾ ಕೆಲವೊಂದು ಮಹತ್ವದ ನಿರ್ದೇಶನಗಳನ್ನು ನೀಡಿದರು. ಅದರಂತೆ ಕಳ್ಳತನದ ಪ್ರಕರಣವನ್ನು ಪತ್ತೆ ಮಾಡಲು ಸವಾಲಾಗಿ ಸ್ವೀಕರಿಸುವಂತೆ ಪಿಎಸ್ಐ ನೇರ್ಲಿ ಮತ್ತು ಸಿಬ್ಬಂದಿಗಳಿಗೆ ಹೇಳಿದರು. ಘಟನಾ ಸ್ಥಳದಲ್ಲಿ ಕೆಲವೊಂದು ಮಹತ್ವದ ಸುಳಿವುಗಳು ಅದಾಗಲೇ ಕ್ರೈಂ ಸಿಬ್ಬಂದಿಗೆ ದೊರಕಿದ್ದವು.

### ವಿಶೇಷ ತನಿಖಾ ತಂಡ ರಚನೆ...

ಡೈನಾಮಿಕ್ ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ ಅವರುಗಳು ಸಿಪಿಐ ವಿಶ್ವನಾಥ ಅವರಿಗೆ ಅತ್ಯಂತ ಪ್ರಮುಖ ನಿರ್ದೇಶನಗಳನ್ನು ನೀಡಿ ಅವರ ಮಾರ್ಗದರ್ಶನದಲ್ಲಿ ಒಂದು ವಿಶೇಷ ತನಿಖಾ ತಂಡ ರಚಿಸುವಂತೆ ತಿಳಿಸಿದರು. ಅದರಂತೆ ಸಿಪಿಐ ವಿಶ್ವನಾಥ ಅವರು ಧಾಡಸಿ ಪಿಎಸ್ಐ ಬಸಗೌಡ ನೇರ್ಲಿ ನಾಯಕತ್ವದಲ್ಲಿ ಹೆಚ್ಚುವರಿ ಪಿಎಸ್ಐ ಲಕ್ಷ್ಮಿ ಬಿರಾದಾರ, ಚತುರ ಮತ್ತು ಧಾಡಸಿ ಸಿಬ್ಬಂದಿಗಳಾದ ಜಿ.ಎಸ್. ಕಾಂಬಳೆ, ಸಿದ್ದು ಗಲಗಲಿ, ನೀತಿನ ಬಡಿಗೇರ, ಸತ್ತಿಗೇರಿ, ಆರ್.ಜಿ. ಕುಳ್ಳೊಳ್ಳಿ, ಎಸ್.ಬಿ. ಚೌಗಲಾ, ಅರ್ಜುನ ಗಸ್ತಿ, ವಿಜಯ ಪಾಟೀಲ, ಭರತ ಲಕ್ಕನ್ನವರ, ಆರ್.ಆರ್. ಕರಿಗಾರ ಮತ್ತು ಬೆಳಗಾವಿಯ ತಾಂತ್ರಿಕ ವಿಭಾಗದ ಸಿಬ್ಬಂದಿ ವಿನೋದ ಠಕ್ಕನ್ನವರ ಒಳಗೊಂಡಂತೆ ಒಂದು ವಿಶೇಷ ತನಿಖಾ ತಂಡವನ್ನು ರಚಿಸಿದರು. ಪ್ರಕರಣ ಚಾಲೆಂಜ್ ಆಗಿ ತೆಗೆದುಕೊಂಡು ಶತಾಯ-ಗತಾಯ ಪತ್ತೆ ಮಾಡಲೇಬೇಕೆಂದು ಹುರುಪು ತುಂಬಿ 'ಗೋ ಅಹೆಡ್' ಎಂದರು.

### ಅಪಾಯಕಾರಿ ಕಳ್ಳರ ಗ್ಯಾಂಗ್ ಬಗ್ಗೆ ಮಾಹಿತಿ...

ಸಿಪಿಐ ವಿಶ್ವನಾಥ ಚೌಗಲಾ ಅವರ ನಿರ್ದೇಶನದಲ್ಲಿ ಅಂದುಕೊಂಡ ಹಾಗೇ ಪಿಎಸ್ಐ ಬಸಗೌಡ ನೇರ್ಲಿ ಅವರ ತಂಡ ಎಲ್ಲ ಮೂಲಗಳಿಂದ ಮಾಹಿತಿ ಸಂಗ್ರಹಿಸ ತೊಡಗಿತ್ತು. ಈ ಮೊದಲು ಭಾರತೀಯ ಸೈನ್ಯದಲ್ಲಿ ಕರ್ತವ್ಯ ನಿರ್ವಹಿಸಿ ಅತ್ಯಂತ ಅಪಾಯಕಾರಿ ಟಾಸ್ಕ್‌ಗಳನ್ನು ಯಶಸ್ವಿಯಾಗಿ ನಿಭಾಯಿಸಿದ್ದ ಪಿಎಸ್ಐ ಬಸಗೌಡ ನೇರ್ಲಿ

☞ 15

# ಲೈಂಗಿಕ ಸುಖಕ್ಕೆ ಅಡ್ಡಿ ಮಾಡಿದ ಗಾರೆ ಮಹಿಳೆಯ ಮರ್ಮಾಂಗಕ್ಕೆ ಸರಳಿನಿಂದ ತಿವಿದು ಕೊಲೆ!


ಕೊಲೆಯಾದ ಯಶೋಧಮ್ಮ

**ಗಾರೆ ಕೆಲಸ ಮಾಡುತ್ತಿದ್ದ ಮಹಿಳೆಯೊಬ್ಬಳು ತನ್ನ ಜೊತೆ ಕೆಲಸ ಮಾಡುತ್ತಿದ್ದ ಕೂಲಿ ಕಾರ್ಮಿಕನೊಂದಿಗೆ ದೇಹ ಸುಖ ಹಂಚಿಕೊಳ್ಳಲಿಲ್ಲವೆಂಬ ಕಾರಣಕ್ಕೆ ದೊಣ್ಣೆಯಿಂದ ಹಲ್ಲೆ ಮಾಡಿದನಲ್ಲದೆ ಬಲವಂತದಿಂದ ಅತ್ಯಾಚಾರ ಮಾಡಿದನು. ಈ ವಿಚಾರವನ್ನು ಗಾರೆಮೇಸ್ತ್ರಿಗೆ ಹೇಳಿಬಿಡುತ್ತಾಳೆಂಬ ಕಾರಣಕ್ಕೆ ಕಬ್ಬಿಣದ ಸರಳಿನಿಂದ ತಲೆಗೆ ಹೊಡೆದು ಮರ್ಮಾಂಗಕ್ಕೆ ತಿವಿದು ಸಾಯಿಸಿ ಪರಾರಿಯಾಗಿದ್ದ ಆರೋಪಿ ಕೂಲಿ ಕಾರ್ಮಿಕನನ್ನು ಮಾಲೂರು ಠಾಣೆ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ.**


ಆರೋಪಿ ಕೂಲಿ ಆಳು ಸಂತೋಷ್‌ಕುಮಾರ್

**ಕೋಲಾರ**

✍ ಕೋಲಾರ ಮಂಜು

ಕೋಲಾರ ಜಿಲ್ಲೆ ಮಾಲೂರು ಪಟ್ಟಣದ ಆದರ್ಶನಗರ, ಭಾರತ್ ಗ್ಯಾಸ್ ಕಚೇರಿ ಸಮೀಪ ವಾಸವಾಗಿರುವ ಮುನಿಯಪ್ಪನವರ ಮಗ ಬೇಸ್ಕಾಂನಲ್ಲಿ ಪವರ್‌ಮ್ಯಾನ್ ಆಗಿ ಕೆಲಸ ಮಾಡುತ್ತಿರುವ ಶ್ರೀನಿವಾಸ್ ಎನ್ನುವವರು ಪಟ್ಟಣದ ವೈಟ್ ಗಾರ್ಡನ್, ಧರ್ಮರಾಯನನಗರ, 8ನೇ ಕ್ರಾಸ್‌ನಲ್ಲಿ ಹೊಸದಾಗಿ ಮನೆಯೊಂದನ್ನು ನಿರ್ಮಾಣ ಮಾಡುತ್ತಿದ್ದಾರೆ. ಸದರಿ ಕಟ್ಟಡಕ್ಕೆ ಮಾಲೂರು ತಾಲ್ಲೂಕಿನ ರಾಂಪುರ ಗ್ರಾಮದ ವಾಸಿ ರಮೇಶ್ ಎಂಬುವವರು ಮೇಸ್ತ್ರಿಯಾಗಿ 8-10 ಕೂಲಿ ಕಾರ್ಮಿಕರೊಂದಿಗೆ ಕೆಲಸ ಮಾಡುತ್ತಿರುತ್ತಾರೆ. ಆಂಧ್ರಪ್ರದೇಶದ ಕುಪ್ಪಂ ತಾಲ್ಲೂಕಿನ ಸೀಗಲಪಲ್ಲಿ ಗ್ರಾಮದ ವಾಸಿ ಮೋಹನ್‌ರವರ ಮಗ ಸಂತೋಷ್ ಕುಮಾರ್ (30) ಕೆಲಸ ಹುಡುಕಿಕೊಂಡು ಮಾಲೂರಿಗೆ ಬಂದು ಪಟ್ಟಣದ ಅಶೋಕನಗರದ ರೈಲ್ವೆ ನಿಲ್ದಾಣದ ಬಳಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದು, ಕಳೆದ ಏಳು ತಿಂಗಳಿಂದ ಗಾರೆಮೇಸ್ತ್ರಿ ರಮೇಶ್ ರವರ ಬಳಿ ಕೆಲಸ ಮಾಡಿಕೊಂಡಿರುವ ಇವರು ಶ್ರೀನಿವಾಸ್‌ರವರ ಸದರಿ ಕಟ್ಟಡದಲ್ಲಿ ಕೆಲಸ ಮಾಡಿಕೊಂಡು ರಾತ್ರಿ ಅಲ್ಲಿಯೇ ಮಲಗಿಕೊಳ್ಳುತ್ತಿದ್ದರು. ಕಳೆದ ಸುಮಾರು 15 ದಿನಗಳ ಹಿಂದೆ ಯಶೋಧಮ್ಮ ಎಂಬುವವರು ಮೇಸ್ತ್ರಿ ರಮೇಶ್ ರವರ ಬಳಿ ಕೆಲಸಕ್ಕೆ ಸೇರಿಕೊಂಡಿದ್ದರು.

ಅಕ್ಟೋಬರ್ 15 ಮಂಗಳವಾರ ಎಂದಿನಂತೆ ಮೇಸ್ತ್ರಿ ರಮೇಶ್ ರವರ ಜೊತೆಯಲ್ಲಿ ಕೃಷ್ಣಪ್ಪ, ಸಂತೋಷ್‌ಕುಮಾರ್ ಮತ್ತು ಯಶೋಧಮ್ಮ ಸೇರಿದಂತೆ ನಾಲ್ಕು ಜನರು ಸಂಜೆ 6.30ರವರೆಗೂ ಕೆಲಸ ಮಾಡಿಕೊಂಡಿದ್ದರು. ಸಂಜೆ ಮಳೆ ಪ್ರಾರಂಭವಾಗಿ ಧಾರವಾಗಿ ಬೀಳುತ್ತಿದ್ದರಿಂದ ಯಶೋಧಮ್ಮ ಮಾತ್ರ ಅಲ್ಲಿಯೇ ಉಳಿದುಕೊಂಡಿದ್ದಳು.


ಎಸ್ಪಿ ನಿಖಿಲ್


ಎಎಸ್ಪಿ ರವಿಶಂಕರ್


ಡಿವೈಎಸ್ಪಿ ಎಂ.ಹೆಚ್. ನಾಗ್ತೆ


ಪಿಐ ವಸಂತ್

ಬುಧವಾರ ಬೆಳಿಗ್ಗೆ ಮನೆ ಮಾಲೀಕರಾದ ಬೇಸ್ಕಾಂ ಶ್ರೀನಿವಾಸ್‌ರವರು ನಿರ್ಮಾಣದ ಕಟ್ಟಡಕ್ಕೆ ನೀರು ಹಾಕಲು ಬಂದಾಗ ಕೆಳಭಿನ ಮನೆಯ ಮೆಟ್ಟಿಲು ಕೆಳಗೆ ಕೂಲಿ ಆಳು ಯಶೋಧಮ್ಮ (45)ನ ಮೈಮೇಲೆ ರಕ್ತಗಾಯಗಳಾಗಿ ಸತ್ತು ಬಿದ್ದಿದ್ದರು. ಶವವನ್ನು ನೋಡಿ ಗಾಬರಿಗೊಂಡ ಮನೆ ಮಾಲೀಕ ಶ್ರೀನಿವಾಸ್‌ರವರು ಮಾಲೂರು ಪೊಲೀಸ್ ಠಾಣೆಗೆ ಹಾಜರಾಗಿ ನಾನು ಹೊಸದಾಗಿ ನಿರ್ಮಾಣ ಮಾಡುತ್ತಿರುವ ಮನೆಯ ಮೆಟ್ಟಿಲುಗಳ ಕೆಳಗೆ ಕೂಲಿ ಕೆಲಸಕ್ಕೆ ಬರುತ್ತಿದ್ದ ಯಶೋಧಮ್ಮ ಎಂಬ ಮಹಿಳೆಯ ಶವ ಇರುವುದನ್ನು ನೋಡಿ ಗಾಬರಿ ಮತ್ತು ಭಯದಿಂದ ಮೊದಲನೇ ಮಹಡಿಯ ರೂಂನಲ್ಲಿ ಹೋಗಿ ನೋಡಲಾಗಿ ರಕ್ತ ಸೋರಿಕೆಯಾಗಿದ್ದು ಬಾಗಿಲು, ಮೆಟ್ಟಿಲು ಮತ್ತು ಗೋಡೆಯ ಮೇಲೆಲ್ಲ ರಕ್ತದ ಕಲೆಗಳಾಗಿದ್ದು ಕೂಡಲೇ ಮೇಸ್ತ್ರಿ ರಮೇಶ್‌ರವರಿಗೆ ಫೋನ್ ಮಾಡಿ ಸ್ಥಳಕ್ಕೆ ಕರೆಸಿಕೊಂಡು ವಿಚಾರಿಸಲಾಗಿ ಈಕೆ ಆಂಧ್ರಪ್ರದೇಶ ಕುಪ್ಪಂನ ಭುವಿಗಾನಕುಂಟೆ ಗ್ರಾಮದ ವಾಸಿ ರಾಮುಡುರವರ ಪತ್ನಿ ಯಶೋಧಮ್ಮ. ಕಳೆದ ಎರಡು ವರ್ಷದ ಹಿಂದೆ ಇವರ ಗಂಡ ಮೃತಪಟ್ಟಿದ್ದು, ಸಂಸಾರದ ಭಾರ ಹೊತ್ತ ಯಶೋಧಮ್ಮನಿಗೆ ಜೀವನ ನಡೆಸುವುದು ಕಷ್ಟವಾಗಿ ಕೆಲಸ ಹುಡುಕಿಕೊಂಡು ಮಾಲೂರಿಗೆ ಬಂದು ಕೆಲಸಕ್ಕಾಗಿ ಅಲೆದಾಡುತ್ತಿದ್ದರು. ಕೂಲಿ ಆಳು ನಿಮ್ಮ ಮನೆ ಬಳಿಗೆ ಕರೆದುಕೊಂಡು ಬಂದು ಕೆಲಸ ಕೊಡುವಂತೆ ಕೇಳಿಕೊಂಡನು. ಆಗ ನಾನು ಈ ಬಿಲ್ಡಿಂಗ್ ಸೇರಿದಂತೆ ಮೂರು ಕಡೆಗಳಲ್ಲಿ ಕೆಲಸ ಮಾಡುತ್ತಿದ್ದೇನೆ. ಎಲ್ಲಿ ಕೆಲಸ ಇರುತ್ತದೆಯೋ ಅಲ್ಲಿಗೆ ಹೋಗಿ ಕೆಲಸ ಮಾಡಬೇಕೆಂದು ಹೇಳಿದೆ. ಅದರಂತೆ ಕೆಲಸ ಮಾಡಿಕೊಂಡಿದ್ದ ಯಶೋಧಮ್ಮ ಕೆಲವೊಂದು ಸಾರಿ ನಿರ್ಮಾಣದ ಕಟ್ಟಡಗಳಲ್ಲಿಯೇ ರಾತ್ರಿ ಮಲಗಿಕೊಂಡು ಬೆಳಿಗ್ಗೆ ಬೇಗ ಎದ್ದು ಗೋಡೆಗಳಿಗೆ ನೀರು ಹಾಕಿ ಕ್ಯೂರಿಂಗ್ ಮಾಡುತ್ತಿದ್ದಳು. ಅದಕ್ಕೆ ನಾನು ಕೂಲಿಯಲ್ಲಿ ಇನ್ನು ಸ್ವಲ್ಪ ಹಣವನ್ನು ಸೇರಿಸಿಕೊಡುತ್ತಿದ್ದೆನು. ನೆನ್ನೆ ರಾತ್ರಿ ಮಳೆ ಜೋರಾಗಿ ಬರುತ್ತಿದ್ದರಿಂದ ಯಶೋಧಮ್ಮ ಮನೆಗೆ ಹೋಗದೆ ಇಲ್ಲಿಯೇ ಮಲಗಿಕೊಂಡಿದ್ದಳೆಂದು ತಿಳಿಸಿದ್ದು, ಸಂತೋಷ್‌ರವರು ನೆನ್ನೆ ದಿನ ತಮ್ಮ ಹೊಸ ಮನೆಯಲ್ಲಿ ರಾತ್ರಿ ಮಲಗಿದ್ದು, ಯಶೋಧಮ್ಮರವರನ್ನು ರಾತ್ರಿ ಯಾವುದೋ ವೇಳೆಯಲ್ಲಿ ತಮ್ಮ ಹೊಸ ಮನೆಗೆ ಕರೆಸಿ ಮೇಲಿನ ಮನೆಯಲ್ಲಿ ಯಾವುದೋ ವಿಚಾರಕ್ಕೆ ಜಗಳ ಮಾಡಿ ಯಶೋಧಮ್ಮಳ ತಲೆ ಮತ್ತು ಇತರ ಕಡೆ ಯಾವುದೋ ಆಯುಧದಿಂದ ಹೊಡೆದು ಕೊಲೆ ಮಾಡಿದ್ದು ಈ ಕೊಲೆಯನ್ನು ಸಂತೋಷ್ ಮತ್ತು ಇತರರು ಸೇರಿಕೊಂಡು ಮಾಡಿರುವ ಸಂಶಯವಿದ್ದು, ಈ ಬಗ್ಗೆ ಮುಂದಿನ ಕಾನೂನು ಕ್ರಮ ಜರುಗಿಸಲು ಕೊಟ್ಟ ದೂರನ್ನು ಪಡೆದು ಮಾಲೂರು ಪೊಲೀಸ್ ಠಾಣೆಯಲ್ಲಿ ಮೊ.ಸಂ. 284/2024 ಕಲಂ 103(1) ರೆಡ್‌ವಿತ್ 3(5) ಐಪಿಸಿ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ತನಿಖೆಗಾಗಿ ಮೇಲಾಧಿಕಾರಿಗಳಿಗೆ ಮಾಹಿತಿಯನ್ನು ನೀಡುತ್ತಾರೆ.

**ಆರೋಪಿ ಬಂಧನ**

ಕೂಲಿ ಕಾರ್ಮಿಕ ಮಹಿಳೆಯನ್ನು ಬರ್ಬರವಾಗಿ ಕೊಲೆ ಮಾಡಿ ಪರಾರಿಯಾಗಿರುವ ಆರೋಪಿಗಳು ಯಾರು, ಈ ಕೊಲೆಯನ್ನು ಯಾತಕ್ಕಾಗಿ ಮಾಡಿದ್ದಾರೆ ಎನ್ನುವುದನ್ನು ಪತ್ತೆ ಮಾಡಬೇಕಾಗಿದ್ದು, ಸ್ಥಳಕ್ಕೆ ಎಸ್ಪಿ ನಿಖಿಲ್, ಎಸ್ಪಿಗಳಾದ ರವಿಶಂಕರ್ ಮತ್ತು ಜಗದೀಶ್, ಡಿವೈಎಸ್ಪಿ ನಾಗ್ತೆ, ಪಿಐ ವಸಂತ್, ಬೆರಳಚ್ಚು ತಜ್ಞರು, ಶ್ವಾನದಳ ಮತ್ತು ಸಿಬ್ಬಂದಿ ವರ್ಗದವರು ಭೇಟಿ ನೀಡಿ ಸ್ಥಳ ಮತ್ತು ಶವದ ಮಹಜರನ್ನು ಪಂಚರ ಸಮಕ್ಷಮದಲ್ಲಿ ನಡೆಸಿದ ಮೇಲೆ ಶವವನ್ನು ಮಾಲೂರು ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಲಾಯಿತು. ವಾರಸುದಾರರ ಸಮ್ಮುಖದಲ್ಲಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಶವಪರೀಕ್ಷೆ

☞10


ಶ್ವಾನದೊಂದಿಗೆ ಪರಿಶೀಲಿಸುತ್ತಿರುವ ಪೊಲೀಸರು


ಶವ ಇಟ್ಟಿದ್ದ ಸ್ಥಳ

# ಮೋಸ್ಟ್ ವಾಂಟೆಡ್ ನಕ್ಸಲ್ ವಿಕ್ರಂಗೌಡ ಎನ್‌ಕೌಂಟರ್


ವಿಕ್ರಂ ಗೌಡ

**ದಕ್ಷಿಣ ಭಾರತದಲ್ಲಿ ನಕ್ಸಲ್ ಚಟುವಟಿಕೆಯ ನೇತೃತ್ವ ವಹಿಸಿಕೊಂಡು ಕಳೆದ ಇಪ್ಪತ್ತು ವರ್ಷಗಳಿಂದ ಕರ್ನಾಟಕ, ತಮಿಳುನಾಡು, ಕೇರಳದ ಅರಣ್ಯ ಪ್ರದೇಶದಲ್ಲಿ ಅಡ್ಡಾಡುತ್ತಾ ಹಲವು ಪ್ರಕರಣಗಳಲ್ಲಿ ಪೊಲೀಸರಿಗೆ ಮೋಸ್ಟ್ ವಾಂಟೆಡ್ ಆಗಿದ್ದ ನಕ್ಸಲ್ ನಾಯಕ ವಿಕ್ರಂ ಗೌಡ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಹೆಬ್ರಿ ಕಬ್ಬಿನಾಲೆಯ ಸೀತಂಬೈಲುವಿನಲ್ಲಿ ನಡೆದ ಗುಂಡಿನ ಕಾಳಗದಲ್ಲಿ ನಕ್ಸಲ್ ನಿಗ್ರಹ ಪಡೆಯ ಗುಂಡೇಟಿಗೆ ಉಸಿರು ಚೆಲ್ಲಿದ್ದಾನೆ. ಅಲ್ಲಿಗೆ ನಕ್ಸಲ್ ಚಟುವಟಿಕೆಯ ಮೂಲ ಬೇರೊಂದನ್ನು ಕಿತ್ತು ಎಸೆದಂತಾಗಿದೆ.**


✍ ಬಿ.ಎಂ. ಲವಕುಮಾರ್

ಇತ್ತೀಚೆಗಿನ ವರ್ಷಗಳಲ್ಲಿ ನಕ್ಸಲ್‌ನ ತಂಡದಲ್ಲಿದ್ದವರ ಸಂಖ್ಯೆ ಇಳಿಮುಖವಾಗಿತ್ತು. ಕೆಲವರು ಗುಂಡೇಟಿಗೆ ಸಾವನ್ನಪ್ಪಿದ್ದರೆ, ಮತ್ತೆ ಕೆಲವರನ್ನು ಬಂಧಿಸಲಾಗಿತ್ತು. ಇನ್ನು ಕೆಲವರು ಪೊಲೀಸರಿಗೆ ಶರಣಾಗಿದ್ದರು. ಆದರೆ ನಕ್ಸಲ್ ನಾಯಕತ್ವ ವಹಿಸಿಕೊಂಡಿದ್ದ ವಿಕ್ರಂಗೌಡ ಮಾತ್ರ ನಕ್ಸಲ್ ಚಟುವಟಿಕೆಗಳಲ್ಲಿ ಸಕ್ರಿಯನಾಗಿದ್ದನು. ಈತನ ಸೆರೆ ಹಿಡಿಯಬೇಕೆಂದು ನಡೆಸಿದ ಕಾರ್ಯಾಚರಣೆಗಳಲ್ಲಿ ಕೂದಲೆಳೆಯಲ್ಲಿ ತಪ್ಪಿಸಿಕೊಂಡಿದ್ದನು. ತಮಿಳುನಾಡು, ಕೇರಳಗಳಲ್ಲಿ ತನ್ನ ಚಟುವಟಿಕೆ ನಡೆಸುತ್ತಾ ಅಲ್ಲಿ ಸಕ್ರಿಯನಾಗಿದ್ದನಾದರೂ ಅಲ್ಲಿನ ಸರ್ಕಾರಗಳು ಈತನ ಚಟುವಟಿಕೆ ಮೇಲೆ ಕಣ್ಣಿಟ್ಟಿದ್ದಲ್ಲದೆ ನಕ್ಸಲ್ ತಂಡದ ಮೇಲೆ ಕಾರ್ಯಾಚರಣೆ ನಡೆಸಿತ್ತು.

ತಮಿಳುನಾಡು ಮತ್ತು ಕೇರಳದಲ್ಲಿ ತಮಗೆ ಉಳಿಗಾಲವಿಲ್ಲ ಎಂದರಿತ ವಿಕ್ರಂಗೌಡ ಮತ್ತೆ ಕರ್ನಾಟಕದ ಕಡೆಗೆ ಮುಖ ಮಾಡಿದ್ದನು. ಕೇರಳ ಕೊಡಗು ದಕ್ಷಿಣ ಕನ್ನಡದ ಮೂಲಕ ಉಡುಪಿ ಕಡೆಗೆ ಈತ ತನ್ನ ತಂಡದೊಂದಿಗೆ ತೆರಳಿದ್ದನು. ಹೀಗೆ ತೆರಳುವ ವೇಳೆ ಕಳೆದ ಮಾರ್ಚ್‌ನಲ್ಲಿ (ಲೋಕಸಭಾ ಚುನಾವಣೆ ವೇಳೆ) ಈತ ಕೊಡಗಿನಲ್ಲಿ ಕಾಣಿಸಿಕೊಂಡಿದ್ದನು. ಇದಾದ ನಂತರ ಈಗ್ಗೆ ಕೆಲವು ದಿನಗಳ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯ ಕಡಬ, ಸುಳ್ಯ ಭಾಗದಲ್ಲಿ ಕೆಲವು ಗ್ರಾಮಗಳಿಗೆ ನಕ್ಸಲರು ಭೇಟಿ ನೀಡಿದ ಬಗ್ಗೆ ಸುದ್ದಿಗಳು ಹರಡಿದ್ದವು.

ಆ ನಂತರ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿನ ಕೆಲವೆಡೆ ನಕ್ಸಲರು ಭೇಟಿ ನೀಡಿದ ಸುಳಿವು ದೊರೆತಿತ್ತು. ಕೊಪ್ಪ ತಾಲೂಕಿನ ಕಡೆಗುಂಡಿ ಗ್ರಾಮದ ಸುಬ್ಬೆಗೌಡ ಎಂಬವರ ಮನೆಯಲ್ಲಿ 3 ಬಂದೂಕುಗಳು ಪತ್ತೆಯಾಗಿದ್ದವು. ಆ ಮನೆಗೆ ನಕ್ಸಲ್ ನಾಯಕಿ ಮುಂಗಾರು ಲತಾ ಮತ್ತು ಆಕೆಯ ತಂಡ ಭೇಟಿ ನೀಡಿದ್ದರು ಎಂಬುದು ಬೆಳಕಿಗೆ ಬಂದಿತ್ತು. ಇದೆಲ್ಲವನ್ನು ಗಮನಿಸಿದ ನಕ್ಸಲ್ ನಿಗ್ರಹ ಪಡೆಗೆ ನಕ್ಸಲರು ಸಕ್ರಿಯರಾಗಿರುವುದು ಗೊತ್ತಾಗಿತ್ತು. ಹೀಗಾಗಿಯೇ ಅವರನ್ನು ಹೆಡೆಮುರಿಕಟ್ಟಲು ಕಾಯುತ್ತಲೇ ಇದ್ದರು.

ಈ ನಡುವೆ ನವೆಂಬರ್ 18ರ ಸೋಮವಾರದ ಮಧ್ಯೆ ರಾತ್ರಿ ವಿಕ್ರಂಗೌಡ ಸೇರಿದಂತೆ ಐದು ಮಂದಿಯಿದ್ದ ನಕ್ಸಲರ ತಂಡ ರೇಷನ್ ಖರೀದಿಗಾಗಿ ಹೆಬ್ರಿ ಕಬ್ಬಿನಾಲೆಯ ಸೀತಂಬೈಲು ಸಮೀಪ ಬಂದಿದ್ದರು. ಈ ವಿಚಾರ ಗೊತ್ತಾಗುತ್ತಿದ್ದಂತೆಯೇ ಕೂಂಬಿಂಗ್ ಶುರುವಾಗಿದೆ. ಹೀಗಾಗಿ ನಕ್ಸಲ್ ನಿಗ್ರಹ ಪಡೆಯ ಗುಂಡೇಟಿಗೆ ಉಸಿರು ಚೆಲ್ಲಿದ್ದಾನೆ ಈ ವೇಳೆ ಜತೆಗಿದ್ದವರು ಪರಾರಿಯಾಗಿದ್ದು, ಅವರಿಗಾಗಿ ಕೂಂಬಿಂಗ್ ಮುಂದುವರೆದಿದೆ. ಮೃತ ವಿಕ್ರಂಗೌಡ ಮೂರು ಬಾರಿ ಕರ್ನಾಟಕ ಪೊಲೀಸರ ಕೈಯಿಂದ ಪರಾರಿಯಾಗಿದ್ದ, 2016ರಲ್ಲಿ ಕೇರಳ ಪೊಲೀಸರಿಗೂ ಚಳ್ಳೆಹಣ್ಣು ತಿನ್ನಿಸಿದ್ದನು. ಈತನ ಮೇಲೆ ಸುಮಾರು 61 ಪ್ರಕರಣಗಳು ದಾಖಲಾಗಿದ್ದವು.






ಐಜಿಪಿ ಡಿ. ರೂಪಾ

ಎನ್‌ಕೌಂಟರ್ ಕುರಿತಂತೆ ಮಾತನಾಡಿರುವ ರಾಜ್ಯ ಆಂತರಿಕ ಭದ್ರತಾ ವಿಭಾಗದ ಐಜಿಪಿ ರೂಪಾ.ಡಿ. ಅವರು ಪೊಲೀಸರು ಹಾಗೂ ನಕ್ಸಲ್‌ರ ನಡುವೆ ಗುಂಡಿನ ಚಕಮಕಿ ನಡೆದಿದ್ದು, ಇದರಲ್ಲಿ ವಿಕ್ರಂಗೌಡ ಎನ್‌ಕೌಂಟರ್‌ನಲ್ಲಿ ಹತರಾಗಿದ್ದಾರೆ. ಈ ಬಗ್ಗೆ ತನಿಖೆ ಮುಂದುವರಿದಿದೆ. ವಿಕ್ರಂ ಗೌಡ ವಿರುದ್ಧ ಕೇರಳದಲ್ಲಿ 19 ಸೇರಿದಂತೆ ಕೊಲೆ ಸುಲಿಗೆ ಸಂಬಂಧ ಒಟ್ಟು 61 ಪ್ರಕರಣಗಳು ದಾಖಲಾಗಿವೆ. ನಕ್ಸಲ್ ನಿಗ್ರಹ ಪಡೆ ಈ ಕಾರ್ಯಾಚರಣೆ ನಡೆಸಿದೆ. ನಕ್ಸಲ್ ನಿಗ್ರಹ ಪಡೆಯ ಪೊಲೀಸ್ ಅಧೀಕ್ಷಕ ಜಿತೇಂದ್ರ ದಯಾಮಾ ನೇತೃತ್ವದಲ್ಲಿ ಅರಣ್ಯದಲ್ಲಿ ಸತತ 10 ದಿನಗಳಿಂದ ನಿರಂತರ ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಗಿದೆ. ಈ ಸಂಬಂಧ ನ. 10ರಿಂದ ನಿರಂತರ ಪ್ರಯತ್ನ ಜಾರಿಯಲ್ಲಿತ್ತು. ನಕ್ಸಲರ ಬಗ್ಗೆ ಮಾಹಿತೆ ಕಲೆ ಹಾಕಿ ಯಶಸ್ವಿ ಕಾರ್ಯಾಚರಣೆ ನಡೆಸಿದ್ದೇವೆ ಎಂದು ತಿಳಿಸಿದ್ದಾರೆ.

ನಮ್ಮ ಅಂತರಿಕ ವಿಭಾಗದ ಡಿಜಿಪಿ ಗಣಮೋಹನ್ ಇತ್ತೀಚೆಗೆ ಅರಣ್ಯದಲ್ಲಿ ಕೂಂಬಿಂಗ್ ಕಾರ್ಯಾಚರಣೆಯಲ್ಲಿ ಭಾಗವಹಿಸಿ ಮಾರ್ಗದರ್ಶನ ನೀಡಿದ್ದರು. ಈ ಕಾರ್ಯಾಚರಣೆ ಗುಪ್ತಚರ ವಿಭಾಗ ಹಾಗೂ ಉಡುಪಿ ಜಿಲ್ಲಾ ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ನಡೆದಿದೆ. ಇದು ಎಎನ್‌ಎಫ್ ನ ಮುಕುಟಕ್ಕೆ ದೊರೆತ ಗರಿ




ಎಂದ ಅವರು, ಎಎನ್‌ಎಫ್ 2005 ಮೇ ತಿಂಗಳಿನಲ್ಲಿ ಸ್ಥಾಪನೆಗೊಂಡಿದ್ದು, ಆ ಬಳಿಕ ನಡೆದ ನಾಲ್ಕನೇ ಎನ್ ಕೌಂಟರ್ ಇದಾಗಿದೆ. ವಿಕ್ರಂ ಗೌಡ ಜತೆಗೆ ಇನ್ನು ಐದಾರು ಮಂದಿ ಇದ್ದಾರೆ. ಅವರು ಹೇಗೆ ಮುಂದೆ ಸ್ಪಂದಿಸುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ. ನಮ್ಮ ಕೂಂಬಿಂಗ್ ಕಾರ್ಯಾಚರಣೆ ಮುಂದೆ ಕೂಡಾ ನಿರಂತರವಾಗಿ ಮುಂದುವರಿಸಯುತ್ತದೆ ಎಂದು ಅವರು ಹೇಳಿದರು.

ಈ ಕಾರ್ಯಾಚರಣೆಗೆ ಬೆಂಗಳೂರಿನ ಕೆಎಸ್‌ಐಎಸ್ ಎಫ್‌ನ 75 ಮತ್ತು ಶಿವಮೊಗ್ಗದಿಂದ 25 ಮಂದಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು. ಈ ಪ್ರಕರಣದ ಬಗ್ಗೆ ತನಿಖೆ ನಡೆಯುತ್ತಿದೆ. ವಿಕ್ರಂ ಗೌಡ ನಕ್ಸಲರ ಕಬಾನಿ ದಳಂ 2 ಎಂಬ ತಂಡವನ್ನು ಮುನ್ನಡೆಸುತ್ತಿದ್ದ ಎಂದು ಅವರು ಮಾಹಿತಿ ನೀಡಿದ್ದಾರೆ.

### ನಕ್ಸಲ್ ನಾಯಕ ವಿಕ್ರಂಗೌಡ ಯಾರು?

ರಾಜ್ಯದ ಮಟ್ಟಿಗೆ ನಕ್ಸಲ್ ನಾಯಕ ಸಾಕೇತ್ ರಾಜನ್ ಎನ್‌ಕೌಂಟರ್ ಬಳಿಕ ಆತನ ಗರಡಿಯಲ್ಲಿ ಪಳಗಿದ್ದ ವಿಕ್ರಂಗೌಡ ದಕ್ಷಿಣ ಭಾರತದಲ್ಲಿ ನಕ್ಸಲರನ್ನು ಮುನ್ನಡೆಸುತ್ತಿದ್ದ ನಾಯಕನಾಗಿದ್ದನು. ಈತ ತನ್ನ ನಾಯಕನ ಹತ್ಯೆಗೆ ರಿವೇಂಜ್ ತೀರಿಸುವ ಸಲುವಾಗಿ ಹೊಂಚು ಹಾಕುತ್ತಿದ್ದನಲ್ಲದೆ, ತಮಿಳುನಾಡು, ಕೇರಳದಲ್ಲಿಯೂ ಆಕ್ಟೀವ್ ಆಗಿದ್ದನು.

ಈತನ ಗುರು ಸಾಕೇತ್ ರಾಜನ್ ಗರಡಿಯಲ್ಲಿ ಬೆಳೆದಿದ್ದನು. ಹಾಗೆ ನೋಡಿದರೆ ಸಾಕೇತ್ ರಾಜನ್ ಕಾಲದಲ್ಲಿ ನಕ್ಸಲ್ ಚಟುವಟಿಕೆ ಉತ್ತುಂಗದಲ್ಲಿತ್ತು. ಹಲವರು ಇವನೊಂದಿಗೆ ಗುರುತಿಸಿಕೊಂಡು ತಮ್ಮನ್ನು ನಕ್ಸಲ್ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದರು. 19 ವರ್ಷಗಳ ಹಿಂದೆ ಅಂದ್ರೆ 2005ರ ಫೆಬ್ರವರಿ 5ರ ಮಧ್ಯ ರಾತ್ರಿ ಚಿಕ್ಕಮಗಳೂರು ಜಿಲ್ಲೆಯ ಕಳಸ ತಾಲೂಕಿನ ಮೆಣಸಿನ ಹಾಡ್ಯದಲ್ಲಿ ಎನ್‌ಕೌಂಟರ್ ನಡೆದಿತ್ತು. ಈ ಎನ್ ಕೌಂಟರ್‌ನಲ್ಲಿ ನಕ್ಸಲ್ ಮುಖಂಡ ಸಾಕೇತ್ ರಾಜನ್

☞ 10



## ನಕ್ಸಲರ ಜಂಘಾಬಲವೇ ಅಡಗಿ ಹೋಯಿತಾ?

ಮೊದಲಿಗೆ ಹೋಲಿಸಿದರೆ ನಕ್ಸಲರ ಜಂಘಾಬಲ ಅಡಗಿದೆ. ಆದರೂ ಕೆಲವೊಮ್ಮೆ ಅಲ್ಲಲ್ಲಿ ಕಾಣಿಸಿಕೊಳ್ಳುವುದರ ಮೂಲಕ ನಾವಿನ್ನು ಫೀಲ್ಡ್‌ನಲ್ಲಿದ್ದೇವೆ ಎಂಬ ಸಂದೇಶವನ್ನು ಸಾರುತ್ತಾ ಬಂದಿದ್ದರು. ಅರಣ್ಯದಂಚಿನ ಬಡ ರೈತರ ಮನೆಗಳಿಗೆ ತೆರಳಿ ದಿನಸಿ ಪದಾರ್ಥಗಳನ್ನು ಪಡೆದುಕೊಳ್ಳುವುದು, ಯಾರಿಗಾದರೂ ಹೇಳಿದರೆ ಮುಗಿಸಿ ಬಿಡುತ್ತೇನೆಂದು ಧಮಕಿ ಹಾಕಿ ಜಾಗ ಖಾಲಿ ಮಾಡುವುದು ಇಷ್ಟಕ್ಕೆ ಸೀಮಿತರಾಗಿದ್ದರು. ಈಗಾಗಲೇ ಕರ್ನಾಟಕದ ನೆರೆಯ ರಾಜ್ಯಗಳಾದ ಕೇರಳ, ತಮಿಳುನಾಡು, ಆಂಧ್ರಪದೇಶ ವ್ಯಾಪ್ತಿಯ ಗಡಿಪ್ರದೇಶದಲ್ಲಿದ್ದುಕೊಂಡು ಹಲವು ಕುಕೃತ್ಯಗಳನ್ನು ನಡೆಸಿದ್ದು ಹಲವು ನಾಯಕರು ಹತರಾಗಿದ್ದರೆ, ಇನ್ನು ಕೆಲವರು ಜೈಲ್ ಸೇರಿದ್ದಾರೆ. ಇದರ ನಡುವೆ ಇನ್ನೊಂದಷ್ಟು ಮಂದಿ ಅಲ್ಲಲ್ಲಿ ಕಾಣಿಸಿಕೊಂಡು ಭಯ ಹುಟ್ಟಿಸುವ ಕೆಲಸದಲ್ಲಿ ತೊಡಗಿಸಿಕೊಂಡಿದ್ದರು.

ಇತ್ತೀಚೆಗಿನ ದಿನಗಳಲ್ಲಿ ದಕ್ಷಿಣಕನ್ನಡ, ಉಡುಪಿ, ಚಿಕ್ಕಮಗಳೂರು ವ್ಯಾಪ್ತಿಯಲ್ಲಿ ಅದರಲ್ಲೂ ಪಶ್ಚಿಮಘಟ್ಟ ಪ್ರದೇಶದಲ್ಲಿ ಇವರ ಚಲನವಲನ ಹೆಚ್ಚಾಗಿ ಕಂಡು ಬಂದಿದೆ. ನಕ್ಸಲರು ಕೆಲವು ದಿನಗಳ ಹಿಂದೆ ಉಡುಪಿ ಜಿಲ್ಲೆಯ ಬೈಂದೂರು, ಜಡ್ಕಲ್ ಭಾಗದಲ್ಲಿ ಕಾಣಿಸಿಕೊಂಡಿದ್ದರು. ಇದು ದೊಡ್ಡ ಸುದ್ದಿಯಾಗಿತ್ತು. ಇದಾದ ಬಳಿಕ ಕೊಡಗು ಗಡಿಪ್ರದೇಶದ ಕೂಜಿಮಲೆ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಕಾಣಿಸಿಕೊಂಡಿದ್ದರು. ಇನ್ನು ಕೊಡಗಿನಲ್ಲಿ ನಕ್ಸಲರ ಹೆಜ್ಜೆಗುರುತುಗಳನ್ನು ನೋಡುವುದಾದರೆ 2012ರಲ್ಲಿ ಮಡಿಕೇರಿ ಸನಿಹದ ಕಾಲೂರು ಗ್ರಾಮದಲ್ಲಿ ಪ್ರತ್ಯಕ್ಷರಾಗಿದ್ದರು. ಇದಾದ ನಂತರ 2018ರ ಫೆಬ್ರವರಿ ತಿಂಗಳಿನಲ್ಲಿ ಇದೇ ವ್ಯಾಪ್ತಿಯ ಸಂಪಾಜೆ ಗುಡ್ಡೆಗದ್ದೆಯಲ್ಲಿ ಕಾಣಿಸಿಕೊಂಡಿದ್ದರು. ಇದಾದ ನಂತರ 2024ರ ಮಾರ್ಚ್‌ನಲ್ಲಿ ಗಡಿಭಾಗದ ಕಡಮುಕಲ್ ರಬ್ಬರ್ ಎಸ್ಟೇಟ್ ಬಳಿ ಕಾಣಿಸಿಕೊಂಡಿದ್ದರು.

ಹಲವು ಪ್ರಕರಣದಲ್ಲಿ ನಕ್ಸಲರಿಗೆ ಗತಿ ಕಾಣಿಸುತ್ತಾ ಬರಲಾಗಿದ್ದು, ಇದರಿಂದ ಅವರ ಸಾಮರ್ಥ್ಯವೂ ತಗ್ಗಿದೆ. 1990 ರಿಂದ 2012ರವರೆಗೆ ರಾಜ್ಯದಲ್ಲಿ ನಕ್ಸಲ್ ಚಟುವಟಿಕೆ ಉತ್ತುಂಗದಲ್ಲಿತ್ತು. ಈ ವೇಳೆ ಸುಮಾರು 40 ರಿಂದ 45 ಸಕ್ರಿಯ ಸಶಸ್ತ್ರ ನಕ್ಸಲರು ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ, ಬೀದರ್, ರಾಯಚೂರು, ಬಳ್ಳಾರಿ ಮತ್ತು ತುಮಕೂರು ಜಿಲ್ಲೆಗಳಲ್ಲಿ ಪ್ರದೇಶಗಳಲ್ಲಿ ಆಶ್ರಯ ಪಡೆದಿದ್ದರು. 2005 ಮತ್ತು 2012ರ ನಡುವೆ ನಕ್ಸಲ್ ನಿಗ್ರಹಪಡೆ 11 ಎನ್ ಕೌಂಟರ್‌ಗಳಲ್ಲಿ 19 ನಕ್ಸಲರನ್ನು ಮುಗಿಸಿದ್ದಾರೆ. ಜತೆಗೆ ಹಲವು ಸಿಬ್ಬಂದಿಯೂ ಹುತಾತ್ಮರಾಗಿದ್ದಾರೆ. ☯

## ರಕ್ತಪಾತ ನಡೆಸಿದ್ದ ನಕ್ಸಲರು

ರಾಜ್ಯದಲ್ಲಿ ಸುಮಾರು 19 ವರ್ಷಗಳ ಹಿಂದೆ ಅಂದರೆ 2005ರಲ್ಲಿ ನಕ್ಸಲರು ಭೀಕರ ರಕ್ತಪಾತ ನಡೆಸಿದ್ದರು. ಆ ಘಟನೆ ಇವತ್ತಿಗೂ ಮೈಬೆವರಿಳಿಸುತ್ತದೆ. ಆಂಧ್ರಪ್ರದೇಶ-ಕರ್ನಾಟಕದ ಗಡಿ ಭಾಗದಲ್ಲಿ ಹೆಚ್ಚಾಗಿದ್ದ ನಕ್ಸಲರ ಹಾವಳಿ ನಿಗ್ರಹಿಸಲು ನಕ್ಸಲ್ ನಿಗ್ರಹ ಪಡೆ ವೆಂಕಟಮ್ಮನ ಹಳ್ಳಿಯಲ್ಲಿ ಬಿಡಾರ ಹೂಡಿತ್ತು. ಈ ಸಂದರ್ಭ 2005ರ ಫೆಬ್ರವರಿ 11ರಂದು ರಾತ್ರಿ ಲಾರಿಯಲ್ಲಿ ಬಂದಿಳಿದ ನಕ್ಸಲರ ಗುಂಪು ವೆಂಕಟಮ್ಮನಹಳ್ಳಿ ಶಾಲೆಯ ಆವರಣದಲ್ಲಿದ್ದ ಪೊಲೀಸ್ ಕ್ಯಾಂಪ್ ಮೇಲೆ ಏಕಾಏಕಿ ದಾಳಿ ನಡೆಸಿತ್ತು. ಈ ವೇಳೆ ಕ್ಯಾಂಪ್ಗೆ ನುಗ್ಗಿದ ನಕ್ಸಲೀಯರು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ದೋಚಿದ ನಂತರ ಪೊಲೀಸರ ಮೇಲೆ ಗುಂಡಿನ ಮಳೆಗರೆದಿದ್ದರು. ದಾಳಿಯಲ್ಲಿ ಏಳು ಪೊಲೀಸರು ಮತ್ತು ಒಬ್ಬ ನಾಗರಿಕ ಸ್ಥಳದಲ್ಲಿಯೇ ಸಾವನ್ನಪ್ಪಿದ್ದರು. ಈ ಸಂಬಂಧ ಪೊಲೀಸರು ನ್ಯಾಯಾಲಯಕ್ಕೆ ಹೊಸದಾಗಿ ಸಲ್ಲಿಸಿದ್ದ ದೋಷಾರೋಪ ಪಟ್ಟಿಯಲ್ಲಿ 42 ಆರೋಪಿಗಳನ್ನು ಹೆಸರಿಸಲಾಗಿತ್ತು.

ಈ ಪ್ರಕರಣದ 11ನೇ ಆರೋಪಿ, ಕ್ರಾಂತಿಕಾರಿ ಗಾಯಕ ಗದ್ದರ್ 2019ರ ನವೆಂಬರ್‌ನಲ್ಲಿ ಪಾವಗಡ ನ್ಯಾಯಾಲಯಕ್ಕೆ ಹಾಜರಾಗಿದ್ದರು. ಆ ನಂತರ ಅವರು ಮೃತಪಟ್ಟಿದ್ದಾರೆ. ಪ್ರಕರಣದ ಮತ್ತೊಬ್ಬ ಆರೋಪಿ ವರವರರಾವ್ ಅವರನ್ನು ಮಹಾರಾಷ್ಟ್ರದ ಜೈಲಿನಿಂದ ಕರೆತಂದು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಈ ಪ್ರಕರಣದಲ್ಲಿ ಇತ್ತೀಚೆಗೆ ಆಂಧ್ರಪ್ರದೇಶದ ಗಂತಿಮೇರಿಯ ನಾಗರಾಜು (40), ಧರ್ಮಾವರಂನ ಪದ್ಮ (35), ರಾಮಗಿರಿ ತಲ್ಲಿಮಡುಗುವಿನ ಬೋಯ ಓಬಳೇಶ್ (40), ರಾಮಮೋಹನ್ (42) ಮತ್ತು ಆಂಜನೇಯುಲು (44) ಅವರನ್ನು ಆಂಧ್ರಪ್ರದೇಶದಲ್ಲಿ ಬಂಧಿಸಿದ್ದರು. ☯

## ಪಶ್ಚಿಮಘಟ್ಟ ನಕ್ಸಲರ ಆವಾಸ ಸ್ಥಾನವಾಗಿದ್ದು ಹೇಗೆ?

ಕರಾವಳಿಯ ಉಡುಪಿಯಿಂದ ಆರಂಭವಾಗಿ ಚಿಕ್ಕಮಗಳೂರು, ದಕ್ಷಿಣ ಕನ್ನಡ, ಹಾಸನ, ಕೊಡಗು, ಶಿವಮೊಗ್ಗ ಹೀಗೆ ಪಶ್ಚಿಮಘಟ್ಟದ ಅರಣ್ಯ ಪ್ರದೇಶಗಳು ಇವತ್ತಿಗೂ ನಕ್ಸಲ್ ಚಟುವಟಿಕೆಗೆ ಆವಾಸ ತಾಣವಾಗಿ ಗುರುತಿಸಿಕೊಂಡಿದೆ. ಇಲ್ಲಿದ್ದುಕೊಂಡೇ ಇವರು ತಮ್ಮ ಚಟುವಟಿಕೆಯನ್ನು ಮಾಡುತ್ತಾ ಬಂದಿದ್ದಾರೆ. ಇವತ್ತಿಗೂ ಮಲೆನಾಡಿದ ಒಂಟಿ ಮನೆಗೆ ನುಗ್ಗಿ ಬೆದರಿಸಿ ಅಗತ್ಯ ಸಾಮಾನುಗಳನ್ನು ಹೊತ್ತೊಯ್ಯುವುದು ನಡೆಯುತ್ತಲೇ ಬರುತ್ತಿದೆ.

ನಕ್ಸಲ್ ಹೋರಾಟ ಆರಂಭವಾಗಿದ್ದು ಕೂಡ ಪಶ್ಚಿಮ ಘಟ್ಟದಿಂದಲೇ... ಪಶ್ಚಿಮ ಘಟ್ಟದ ಅರಣ್ಯ ಪ್ರದೇಶಗಳಲ್ಲಿ ವಾಸವಾಗಿರುವ ಜನರನ್ನು ಒಕ್ಕಲೆಬ್ಬಿಸುವರ ವಿರುದ್ಧ ಹಾಗೂ ಭಾರೀ ಕೈಗಾರಿಕೆಗಳು ಅರಣ್ಯ ಪ್ರದೇಶವನ್ನು ನಾಶ ಮಾಡುವುದರ ವಿರುದ್ಧ ಮೊದಲಿಗೆ ನಕ್ಸಲ್ ಹೋರಾಟ ಆರಂಭವಾಗಿತ್ತು. ಇದೇ ಸಮಯದಲ್ಲಿ ಆಂಧ್ರ ಪ್ರದೇಶದಲ್ಲಿ ತೀವ್ರಗೊಂಡಿದ್ದ ನಕ್ಸಲ್ ಚಳವಳಿಯನ್ನು ಕರ್ನಾಟಕಕ್ಕೆ ವಿಸ್ತರಣೆ ಮಾಡಬೇಕು ಎಂದು ಆಂಧ್ರ ಪೀಪಲ್ಸ್ ವಾರ್ ಗ್ರೂಪ್ 1980ರಲ್ಲಿ ತೀರ್ಮಾನ ಕೈಗೊಂಡು ಅದರ ಉಸ್ತುವಾರಿಯನ್ನು ಚುರುಕುರಿ ರಾಜಕುಮಾರ್ ಅಲಿಯಾಸ್ ಆಝಾದ್‌ಗೆ ವಹಿಸಿತ್ತು.

ತದನಂತರದಲ್ಲಿ ಕರ್ನಾಟಕದಲ್ಲಿ ನಕ್ಸಲ್ ಚಟುವಟಿಕೆ ತೀವ್ರತೆ ಪಡೆಯಿತು. ಈ ವೇಳೆ ಬಹಳಷ್ಟು ಜನ ಯುವಕ ಯುವತಿಯರು ಈ ಹೋರಾಟದಲ್ಲಿ ಭಾಗಿಯಾದರು. ಅವರ ಬ್ರೈನ್ ವಾಸ್ ಮಾಡಿ ತಮ್ಮ ತೆಕ್ಕೆಗೆ ತೆಗೆದು ಕೊಂಡ ನಾಯಕರು ಕಾಡಿನಲ್ಲಿದ್ದುಕೊಂಡೇ ಹೋರಾಟ ಆರಂಭಿಸಿದರು. ಇವರನ್ನು ಹತ್ತಿಕ್ಕಲು ಸರ್ಕಾರ ಮುಂದಾಯಿತು. ಹೀಗಾಗಿ ನಕ್ಸಲ್ ಮತ್ತು ಪೊಲೀಸರ ನಡುವೆ ಗುಂಡಿನ ಚಕಮಕಿಗಳು ಶುರುವಾದವು.

2002ರಲ್ಲಿ ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಜಿಲ್ಲೆಗೆ ಸೇರುವ ಪಶ್ಚಿಮ ಘಟ್ಟದಲ್ಲಿ ನಕ್ಸಲ್ ಚಟುವಟಿಕೆ ತೀವ್ರಗೊಂಡಿರುವುದು ಬೆಳಕಿಗೆ ಬಂದಿತ್ತು. ಹೀಗಾಗಿಯೇ ಪೊಲೀಸರು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದ ಮೆಣಸಿನ ಹಾಡ್ಯದಲ್ಲಿದ್ದ ನಕ್ಸಲರ ಮೇಲೆ ದಾಳಿ ಮಾಡಿದ್ದರು. ಈ ಸಂದರ್ಭ ನಡೆದ ಗುಂಡಿನ ಚಕಮಕಿಯಲ್ಲಿ ಮಹಿಳೆಯೊಬ್ಬರ ಕಾಲಿಗೆ ಗುಂಡೇಟು ಬಿದ್ದಿತ್ತು. ಇದಾದ ನಂತರ 2003ರಲ್ಲಿ ಪೊಲೀಸರು ನಡೆಸಿದ ಎನ್‌ಕೌಂಟರ್‌ನಲ್ಲಿ ರಾಯಚೂರು ಜಿಲ್ಲೆಯ ಹಾಜಿಮಾ ಮತ್ತು ಪಾರ್ವತಿ ಎಂಬಿಬ್ಬರು ಪೊಲೀಸರ ಗುಂಡಿಗೆ ಬಲಿಯಾಗಿದ್ದರು. ಅಷ್ಟರಲ್ಲಿಯೇ ಪಶ್ಚಿಮ ಘಟ್ಟದಲ್ಲಿ ನಕ್ಸಲ್ ಚಟುವಟಿಕೆಯನ್ನು ನಡೆಸುವುದರಲ್ಲಿ ಸಾಕೇತ್ ರಾಜನ್ ಮಾಸ್ಟರ್ ಮೈಂಡ್ ಆಗಿದ್ದನು. ಈತನ ಬೆನ್ನಿಗೆ ಒಂದಷ್ಟು ಯುವಕರು ಮತ್ತು ಯುವತಿಯರು ನಿಂತಿದ್ದರು.

ಆ ಹೊತ್ತಿಗಾಗಲೇ ಸಾಕೇತ್ ರಾಜನ್ ಮನೆ ಬಿಟ್ಟು ಕಾಡು ಸೇರಿದ್ದನು. ಈತ ಹೋರಾಟ ಯುವಕ, ಯುವತಿಯರಿಗೆ ಸ್ಫೂರ್ತಿಯಾಗಿತ್ತು. ಏಕೆಂದರೆ ಮಾಜಿ ಆರ್ಮಿ ಅಧಿಕಾರಿಯ ಮಗನಾಗಿದ್ದ ಈತ ಮೈಸೂರಿನ ಮಹರಾಜ ಕಾಲೇಜಿನಲ್ಲಿ ಬಿ.ಎ. ಓದಿ ಬಳಿಕ ಜೆಎನ್ಯು ವಿವಿಯಲ್ಲಿ ಸ್ನಾತಕೋತ್ತರ ಪದವಿ ಪಡೆದುಕೊಂಡು ಆ ವೇಳೆಗಾಗಲೇ ಕ್ರಾಂತಿಕಾರಿಯಾಗಿ ಬಿಟ್ಟಿದ್ದನಲ್ಲದೆ, ಮೇಕಿಂಗ್ ಆಫ್ ಹಿಸ್ಟರಿ ಎಂಬ ಪುಸ್ತಕ ಬರೆದು ಗಮನ ಸೆಳೆದಿದ್ದನು.


ಸಾಕೇತ್ ರಾಜನ್

ಕುದುರೆಮುಖ ಗಣಿಗಾರಿಕೆ, ಕೈಗಾ ಅಣು ವಿದ್ಯುತ್ ಸ್ಥಾವರ ಸೇರಿದಂತೆ ಹಲವು ಹೋರಾಟಗಳ ಮುಂಚೂಣಿಯಲ್ಲಿದ್ದ ಈತನ ಹೋರಾಟ ಕ್ರಮೇಣ ಹಿಂಸಾ ರೂಪ ತಾಳಿತ್ತು. ಅದು ಯಾವ ಮಟ್ಟಕ್ಕೆ ಹೋಯಿತೆಂದರೆ 2004ರಲ್ಲಿ ಶೃಂಗೇರಿ ತಾಲ್ಲೂಕಿನ ಕಿಗ್ಗಾ ಸಮೀಪ ಪೊಲೀಸ್ ಪೇದೆಯನ್ನು ಅಪಹರಣ ಮಾಡಿ ಬಂದೂಕು ಕಸಿದುಕೊಂಡು ಬಿಡುಗಡೆ ಮಾಡಿದ್ದನು. ಹೀಗಾಗಿ ಈತನ ಮೇಲೆ ಪೊಲೀಸ್ ಕಣ್ಣು ಬಿದ್ದಿತ್ತಲ್ಲದೆ, ಆತನನ್ನು ಬಂಧಿಸಬೇಕು ಅಥವಾ ಎನ್‌ಕೌಂಟರ್ ಮಾಡಲೇಬೇಕೆಂಬ ತೀರ್ಮಾನಕ್ಕೂ ಬರಲಾಗಿತ್ತು.

ಈ ನಡುವೆ ಗೌರಿ ಲಂಕೇಶ್ ನಕ್ಸಲ್ ಚಟುವಟಿಕೆ ಕಾಣಿಸಿಕೊಂಡಿದ್ದ ಪ್ರದೇಶಗಳಿಗೆ ತೆರಳಿದ ಪತ್ರಕರ್ತೆ ಗೌರಿ ಲಂಕೇಶ್ ಅವರು ನಕ್ಸಲರನ್ನು ಮುಖ್ಯವಾಹಿನಿಗೆ ತರುವ ಮತ್ತು ಶರಣಾಗಿಸುವ ಸಲುವಾಗಿ ಮನವೊಲಿಸುವ ಪ್ರಯತ್ನಗಳನ್ನು ಮಾಡಿದ್ದರು. ಈ ಕುರಿತಂತೆ ಲೇಖನಗಳನ್ನು ಬರೆದಿದ್ದರು. ಆದರೆ ಅವರ ಪ್ರಯತ್ನಗಳು ಫಲಕೊಡಲಿಲ್ಲ. ಅಷ್ಟರಲ್ಲಿಯೇ ಅಂದರೆ 2005ರಲ್ಲಿ ಸಾಕೇತ್ ರಾಜನ್ ಮೇಲೆ ಗುಂಡಿನ ದಾಳಿ ನಡೆಸಲಾಯಿತಲ್ಲದೆ ಎನ್‌ಕೌಂಟರ್‌ನಲ್ಲಿ ಆತ ಬಲಿಯಾದನು. ಇವನ ಜತೆಗಿದ್ದ ಸಹಚರ ಶಿವಲಿಂಗು ಉಸಿರು ಚೆಲ್ಲಿದ್ದನು. ಈ ವೇಳೆ ಮೆಣಸಿನ ಹಾಡ್ಯದಲ್ಲಿ ಪೊಲೀಸ್ ಮಾಹಿತಿದಾರ ಎಂಬ ಆರೋಪದಲ್ಲಿ ಶೇಷಯ್ಯ ಎಂಬಾತನನ್ನು ನಕ್ಸಲರು ಹತ್ಯೆಗೈದಿದ್ದರು.

ಸಾಕೇತ್ ರಾಜನ್ ಹತ್ಯೆ ಬಳಿಕ ನಕ್ಸಲ್ ಚಟುವಟಿಕೆಗೆ ನಾಯಕತ್ವದ ಕೊರತೆ ಕಾಣಿಸಿತ್ತಲ್ಲದೆ, ಆತನ ಜತೆಗಿದ್ದ ಸಿರಿಮನೆ ನಾಗರಾಜ್, ನೂರ್ ಶ್ರೀಧರ್, ಹೊಸಗದ್ದೆ ಪ್ರಭಾ ಸೇರಿದಂತೆ ಹಲವರು ಪೊಲೀಸರಿಗೆ ಶರಣಾದರು.

ದಕ್ಷಿಣ ಕನ್ನಡ ಜಿಲ್ಲೆಯ ಕುತ್ಲೂರು ನಿವಾಸಿಗಳಾದ ದಿನಕರ್ ಹಾಗೂ ವಸಂತ ಎಂಬಿಬ್ಬರು ಯುವಕರು ಪೊಲೀಸರ ಗುಂಡಿಗೆ ಬಲಿಯಾದರು. ಅಲ್ಲದೆ, ಅಜಿತ್ ಕುಸುಬಿ, ಸುಂದರೇಶ್, ಗೌತಮ್ ಪರಮೇಶ್ವರ್, ಎಲ್ಲಪ್ಪ ಸೇರಿದಂತೆ 15ರಷ್ಟು ನಕ್ಸಲರು ಪೊಲೀಸರ ಗುಂಡಿಗೆ ಬಲಿಯಾಗಿ ಹೋದರು. ನೇತ್ರಾವತಿ, ತುಂಗಾಭದ್ರಾ, ಶರಾವತಿ ಎಂಬ ಹೆಸರಿನ ತಂಡಗಳಲ್ಲಿ ನಕ್ಸಲರು ಚಟುವಟಿಕೆ ನಡೆಸುತ್ತಿದ್ದಾರೆ.

ಚಿಕ್ಕಮಗಳೂರಿನ ಕೊಪ್ಪ ತಾಲೂಕು ಹಾಗಲಗಂಚಿ ಗ್ರಾಮದ ವೆಂಕಟೇಶ್ 2010 ಸೆಪ್ಟಂಬರ್ 28ರಂದು ಶರಣಾಗಿದ್ದರೆ, 2010 ಅಕ್ಟೋಬರ್ 15ರಂದು ಗ್ರೀನ್ ಕೆಟಗರಿಯಲ್ಲಿದ್ದ ಕೊಪ್ಪ ತಾಲೂಕು ದೂಬಳದ ಮಲ್ಲಿಕಾ, ಮೇಗೂರು ಗ್ರಾಮದ ಹೊರಲೆ ಜಯ ಹಾಗೂ ಯಡಗುಂದ ಗ್ರಾಮದ ಕೋಮಲ ಶರಣಾಗಿದ್ದರು. ನೂರ್ ಶ್ರೀಧರ್ ಹಾಗೂ ಸಿರಿಮನೆ ನಾಗರಾಜ್ 2014 ಡಿಸೆಂಬರ್ 8ರಂದು ಶರಣಾದರೆ, 2017 ಜೂನ್ 5ರಂದು ಶಿವು, ಕನ್ಯಾಕುಮಾರಿ ಮತ್ತು ಚೆನ್ನಮ್ಮ ಶರಣಾಗಿದ್ದಾರೆ. 2016 ನವೆಂಬರ್ 14ರಂದು ರಿಜ್ವಾನ ಬೇಗಂ ಹಾಗೂ ಆಕೆಯ ಪತಿ ರಾಜು ಅಲಿಯಾಸ್ ಪರಶುರಾಮ ಪೊಲೀಸರ ಮುಂದೆ ಶರಣಾಗಿದ್ದರು. ಇತ್ತೀಚೆಗೆ ಅನಿರುದ್ಧ ಎಂಬಾತನನ್ನು ಬೆಂಗಳೂರಿನಲ್ಲಿ ಪೊಲೀಸರು ಬಂಧಿಸಿದ್ದರು.

ಪೊಲೀಸರು ನಕ್ಸಲರನ್ನು ಹುಡುಕಿ ಹುಡುಕಿ ಹೊಡೆಯುತ್ತಿರುವುದರಿಂದ ಹೊಸದಾಗಿ ತಂಡಕಟ್ಟಲು ಸಾಧ್ಯವಾಗಿಲ್ಲವಾದರೂ ಹಳೆಯ ಒಂದಷ್ಟು ಮಂದಿ ಇನ್ನು ಕಾಡಲ್ಲೇ ಕಳೆಯುತ್ತಿದ್ದಾರೆ, ಆ ಪೈಕಿ ನೇತ್ರಾವತಿ ತಂಡದಲ್ಲಿದ್ದ ವಿಕ್ರಂಗೌಡನ ಹೆಣಬಿದ್ದಿದೆ. ಮುಂದೇನು ಎಂಬುದನ್ನು ಕಾದು ನೋಡಬೇಕಿದೆ. ☯

## ನಕ್ಸಲ್ ಹುಟ್ಟಿದ್ದೆಲ್ಲಿ? ವಿಸ್ತರಿಸಿದ್ದೇಗೆ?

ಪಶ್ಚಿಮ-ಬಂಗಾಳದ ನಕ್ಸಲ್ ಬರಿ ಎಂಬಲ್ಲಿ ಭಾರತದ ಮಾವೊವಾದಿ ಚಳವಳಿಯು ಆರಂಭವಾಗಿದ್ದು ಆ ಪಟ್ಟಣದ ಹೆಸರೇ ನಕ್ಸಲೆಟ್ ಆಗಿ ಪರಿಚಿತವಾಯಿತು ಎನ್ನಲಾಗಿದೆ. 1960 ರ ಉತ್ತರಾರ್ಧದಲ್ಲಿ ಭಾರತೀಯ ಕಮ್ಯುನಿಸ್ಟ್ ಪಕ್ಷ ಭಾರತದಲ್ಲಿ ಕಮ್ಯೂನಿಸ್ಟ್ ಕ್ರಾಂತಿಯನ್ನು ತೀವ್ರವಾಗಿ ತರುವ ಬಗ್ಗೆ ಹೇಗೆ ಎಂದು ವಿಭಿನ್ನ ಯೋಜನೆ ಹೊಂದಿತ್ತು. ಆ ಪಕ್ಷವು ಎರಡು ಬಣಗಳಾಗಿ ಒಡೆದು ಹೋಯಿತು. ಒಂದು ಕಮ್ಯುನಿಸ್ಟ್ ಸರ್ಕಾರ ತರಲು ಚುನಾವಣೆಯ ಮೂಲಕ ಗಳಿಸಿದ ಶಕ್ತಿಯ ಪರವಾಗಿ, ಮತ್ತೊಂದು ಆ ಪಕ್ಷದ ಒಂದು ದೊಡ್ಡ ನಗರ ದಂಗೆಯೇಳುವಂತೆ ಆವೇಗ ಒದಗಿಸಲು ಪ್ರಭಾವವನ್ನು ಬೀರುವುದು. ಅದಕ್ಕೆ ದೇಶದ ದೊಡ್ಡ ರೈತ ವರ್ಗವನ್ನು ಬಳಸಿಕೊಂಡು ಸಶಸ್ತ್ರ ಬಂಡಾಯದ ಮೂಲಕ ಸರ್ಕಾರವನ್ನು ಉರುಳಿಸುವುದರ ಪರವಾಗಿ ಇತ್ತು.

ಈ ಎರಡನೇ ಗುಂಪಿನಲ್ಲಿದ್ದ ಕಮ್ಯುನಿಸ್ಟ್ ಪಕ್ಷದ ಸದಸ್ಯರಾದ ಚಾರು ಮಜುಮ್ದಾರ್ ಅವರು ಸ್ಥಳೀಯ ಗುಂಪಿನ ತೀವ್ರತರ ಚಿಂತನೆ ಮತ್ತು ಚರ್ಚೆಗಳಿಂದ ಹೈರಾಣಾಗಿದ್ದರು. 1967ರಲ್ಲಿ ಅವರು ಸ್ವತಃ ಕ್ರಾಂತಿ ಆರಂಭಿಸಲು ಹೊರಟರು. ನಕ್ಸಲ್ ಬರಿ ದಂಗೆ ಅಥವಾ ಕ್ರಾಂತಿಗಳು ಆ ಪ್ರಯತ್ನಗಳ ಫಲವಾಗಿತ್ತು.

ಮಜುಮ್ದಾರ್ ತನ್ನ ಹೊಸ ಚಳುವಳಿಗೆ ಕಮ್ಯುನಿಸ್ಟ್ ಕ್ರಾಂತಿಕಾರರ ಆಲ್ ಇಂಡಿಯಾ ಸಹಯೋಗ ಸಮಿತಿ ಎಂದು ಕರೆದರು. ಆದರೆ ಅನೇಕ ಭಾರತೀಯರು ಆ ಸಂಘವನ್ನು ಅದರ ಮೂಲ ಸ್ಥಳದ ಮೂಲಕ ಗರುತಿಸಿ. ನಕ್ಸಲರು, ಮತ್ತು ಮಾವೋವಾದಿ ಶೈಲಿಯ ಗೆರಿಲ್ಲಾಗಳು ಎಂದು ಕರೆಯಲು ಪ್ರಾರಂಭಿಸಿದರು. ನಕ್ಸಲೀಯರ, ಎಡಪಂಥೀಯ ಕಾಲೇಜು ವಿದ್ಯಾರ್ಥಿಗಳು (ಹೆಚ್ಚಾಗಿ ಕಲ್ಕತ್ತದಿಂದ) ಮತ್ತು ಕೆಳಮಟ್ಟದ ಬಡ ದಲಿತರು ಮತ್ತು ಆದಿವಾಸಿಗಳು ಬೆಂಬಲಿಸಿದರು.

ಅವರು 20ನೇ ಶತಮಾನದಲ್ಲಿ ಅನುಭವಿಸಿದ ಕೆಟ್ಟ ಬರಗಾಲದಲ್ಲಿ ಎಲುಬು - ಚರ್ಮವಷ್ಟೇ ಉಳಿಯುವುದರ ಮೂಲಕ ಬದುಕುಳಿದರು. ಈ ಚಳುವಳಿಯನ್ನು ಮೇಲಿನ ಎರಡು ವಿಭಿನ್ನ ಗುಂಪುಗಳು ಬೆಂಬಲಿಸಿದವು. ಚೀನಾದಿಂದ ಏಕಪ್ರಕಾರವಾಗಿ ಬಂದ ನೆರವು ಯೋಜನೆಯ ಹರಿವು ಈ ಚಳುವಳಿಗೆ ಶಕ್ತಿ ನೀಡಿತು. ಈ ನೆರವಿನ ಕಾರಣ ಇದು ನಕ್ಸಲ್ ಬರಿ ಪ್ರದೇಶ ಮೀರಿ ಹರಡಲು ಅವಕಾಶ ದೊರೆತು ಆಂಧ್ರ ಪ್ರದೇಶ, ಚತ್ತೀಸ್‌ಗಢ, ಜಾರ್ಖಂಡ್ ಮಾತ್ರವಲ್ಲದೆ ದಕ್ಷಿಣ ಭಾರತದತ್ತವೂ ಹರಡಿತು. ಇವತ್ತು ದೇಶದ ಎಲ್ಲಾದರೂ ಒಂದು ಕಡೆ ನಕ್ಸಲರು ಒಂದಲ್ಲ ಒಂದು ಕಡೆಯಲ್ಲಿ ವಿಧ್ವಂಸದ ಕೃತ್ಯಗಳನ್ನು ನಡೆಸುತ್ತಲೇ ಬಂದಿದ್ದಾರೆ. ಅವರತ್ತ ಹದ್ದಿನ ಕಣ್ಣಿಟ್ಟು ಕಾಯಬೇಕಾದ ಅನಿವಾರ್ಯತೆ ಎದುರಾಗಿದೆ. ಆದರೆ ಎಲ್ಲೋ ಒಂದು ಕಡೆ ಅವರ ಪ್ರಭಾವವೂ ಕುಗ್ಗಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ಅವರನ್ನು ಸದೆ ಬಡಿಯುವುದು ಕಷ್ಟವೇನಲ್ಲ. ☯

# ಮರ್ಮಾಂಗಕ್ಕೆ ಸರಳಿನಿಂದ ತಿವಿದು ಕೊಲೆ!

7 ☞

ನಡೆಸಿದ ಮೇಲೆ ಶವವನ್ನು ವಾರಸುದಾರರಿಗೆ ನೀಡಲಾಯಿತು. ಯಶೋಧಮ್ಮನನ್ನು ಕೊಲೆ ಮಾಡಿ ಪರಾರಿಯಾಗಿರುವ ಆರೋಪಿಯನ್ನು ಪತ್ತೆ ಮಾಡಲು ಎಸ್ಪಿ ನಿಖಿಲ್, ಡಿವೈಎಸ್ಪಿ ನಾಗ್ತೆರವರ ಮಾರ್ಗದರ್ಶನದಲ್ಲಿ ಪಿಐ ವಸಂತ್‌ರವರ ನೇತೃತ್ವದಲ್ಲಿ ಪಿಎಸ್‌ಐ ವರಲಕ್ಷ್ಮಮ್ಮ, ಎಎಸ್‌ಐ ರಮೇಶ್‌ಬಾಬು ಮತ್ತು ಆನಂದ್, ಸಿಬ್ಬಂದಿಯವರಾದ ರೇಣುಪ್ರಸಾದ್, ವೀಣಾ, ತೋದಂಡಪಾಣಿ, ಅನಂತಮೂರ್ತಿ, ವೆಂಕಟೇಶ್, ಮೂರ್ತಿ, ಮೋಹನ್ ಮುಂತಾದವರ ತಂಡವನ್ನು ರಚಿಸಲಾಗಿದ್ದು, ಯಶೋಧಮ್ಮ ಕೆಲಸ ಮಾಡುತ್ತಿದ್ದ ಗಾರೆಮೇಸ್ತ್ರಿ ರಮೇಶ್‌ರವರ ಬಳಿ ಮೃತಳ ಬಗ್ಗೆ ವಿಚಾರಿಸಲಾಗಿ ಗಾರೆ ಕೆಲಸಕ್ಕೆ ಬರುತ್ತಿದ್ದ ಸಂತೋಷ್‌ಕುಮಾರ್ ಎನ್ನುವವರು ಯಶೋಧಮ್ಮ ಕೆಲಸ ಮಾಡುವಾಗ ಆಗಾಗ ಕೀಟಲೆ ಮಾಡುತ್ತಿದ್ದನು. ಈ ಬಗ್ಗೆ ಯಶೋಧಮ್ಮ ತಿಳಿಸಿ ಕಣ್ಣೀರಿಟ್ಟಳು. ಆಗ ನಾನು ಮತ್ತು ಕೃಷ್ಣಪ್ಪ ಎನ್ನುವವರು ಸೇರಿಕೊಂಡು ಸಂತೋಷ್‌ಕುಮಾರ್‌ಗೆ ಬುದ್ಧಿ ಹೇಳಿದರಲ್ಲದೆ ಯಶೋಧಮ್ಮನ ತಂಟೆಗೆ ಹೋಗದಂತೆ ಎಚ್ಚರಿಕೆಯನ್ನು ಕೊಟ್ಟಿದ್ದೆವು. ಆದರೆ ಸಂತೋಷ್‌ಕುಮಾರ್ ಮಾತ್ರ ತನ್ನ ಚಾಳಿಯನ್ನು ಬಿಡದೆ ಯಶೋಧಮ್ಮನನ್ನು ತನ್ನ ಬುಟ್ಟಿಗೆ ಹಾಕಿಕೊಳ್ಳಲು ನೋಡುತ್ತಿದ್ದನು ಎಂದು ಅವರಿಬ್ಬರು ನೀಡಿದ ಹೇಳಿಕೆ ಆಧಾರದ ಮೇಲೆ ಸಂತೋಷ್‌ಕುಮಾರ್ ಕೃತ್ಯವೆಸಗಿರಬಹುದೇ ಎನ್ನುವುದನನ್ನು ಪತ್ತೆ ಮಾಡಲು ಕಟ್ಟಡದ ಸುತ್ತಮುತ್ತಲಿನ ರಸ್ತೆಗಳಲ್ಲಿನ ಸಿಸಿ ಕ್ಯಾಮರಾಗಳನ್ನು ಪರಿಶೀಲಿಸಿದರು. ಆದರೆ ಯಾವುದೇ ಮಾಹಿತಿ ಸಿಗಲಿಲ್ಲ. ಈ ಸಂತೋಷ್‌ಕುಮಾರ್ ಯಾರು, ಎಲ್ಲಿಯವನು ಎನ್ನುವುದರ ಬಗ್ಗೆ ಮಾಹಿತಿ ಕಲೆ ಹಾಕಲು ಹೋದಾಗ ಮೂಲತಃ ಆಂಧ್ರಪ್ರದೇಶದ ಕುಪ್ಪಂ ಜಿಲ್ಲೆಯವನಾಗಿದ್ದು, ಈತನ ಮೇಲೆ ಈ ಮೊದಲು ಬೆಂಗಳೂರು ನಗರದಲ್ಲಿ ಕೇಸು ದಾಖಲಾಗಿದ್ದು, ಜೈಲಿನಲ್ಲಿ ಸುಮಾರು ನಾಲ್ಕು ವರ್ಷಗಳ ಕಾಲ ಶಿಕ್ಷೆಯನ್ನು ಅನುಭವಿಸಿ ಹೊರಗಡೆ ಬಂದಿರುತ್ತಾನೆಂದು ತಿಳಿದು ಬಂದಿರುತ್ತದೆ. ಈತನ ಬಳಿ ಯಾವುದೇ ಮೊಬೈಲ್ ಫೋನ್, ಆಧಾರ್ ಕಾರ್ಡ್ ಇಲ್ಲದೆ ಇರುವುದರಿಂದ ವ್ಯಕ್ತಿಯನ್ನು ಪತ್ತೆ ಮಾಡಲು ಸುಲಭದ ಮಾತಲ್ಲ. ಆಗ ಪೊಲೀಸರು ಜೈಲಿಗೆ ಹೋಗಿ ಸಂತೋಷ್‌ಕುಮಾರನ ಫೋಟೋವನ್ನು ಪಡೆದುಕೊಂಡು ತನಿಖೆ ಕೈಗೊಂಡರು. ಪೊಲೀಸ್ ಬಾತ್ಮೀದಾರರು ನೀಡಿದ ಮಾಹಿತಿ ಮೇರೆಗೆ ಅಕ್ಟೋಬರ್ 19ರಂದು ಮಾಲೂರು ಹೊಸೂರು ರಸ್ತೆ ಆಕ್ಸಿಸ್ ಬ್ಯಾಂಕ್ ಪಕ್ಕದ ರಸ್ತೆಯಲ್ಲಿ ಓಡಾಡುತ್ತಿದ್ದ ವ್ಯಕ್ತಿಯನ್ನು ಫೋಟೋ ಆಧಾರದ ಮೇಲೆ ಗುರ್ತಿಸಿ ವಶಕ್ಕೆ ಪಡೆದು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ ಮಹತ್ವದ ಸುಳಿವು ನೀಡಿದನು.

### ದೇಹ ಸುಖಕ್ಕೆ ಸ್ಪಂದಿಸದಕ್ಕೆ ಕೊಲೆ

ರಾಂಪುರ ಮೇಸ್ತ್ರಿ ರಮೇಶ್‌ರವರ ಬಳಿ 6-7 ತಿಂಗಳುಗಳಿಂದ ಕೂಲಿ ಕೆಲಸ ಮಾಡಿಕೊಂಡು ಇದ್ದೆನು. ಗಾರೆಕೆಲಸಕ್ಕೆ ಕೃಷ್ಣಪ್ಪ ಮತ್ತು ಕೂಲಿಯಾಳಾಗಿ ಯಶೋಧಮ್ಮರವರು ಬರುತ್ತಿದ್ದರು. ಗಂಡನಿಲ್ಲದ ಯಶೋಧಮ್ಮನನ್ನು ಹೇಗಾದರೂ ಮಾಡಿ ಅವಳನ್ನು ಒಲಿಸಿಕೊಳ್ಳಬೇಕೆಂದು ಯೋಚಿಸಿ, ಕೆಲಸದ ಸಮಯದಲ್ಲಿ ಆಗಾಗ ಯಶೋಧಮ್ಮನ ಮೈಮುಟ್ಟಿ ಮಾತನಾಡಿಸಿ ನಿನ್ನ ಮೇಲೆ ಆಸೆಯಾಗಿದೆ ನನ್ನ ಜೊತೆ ಮಲಗಿಕೊಳ್ಳಲು ಬರುವಂತೆ ಕರೆದ್ದನು. ಅದಕ್ಕೆ ಈ ವಿಚಾರವನ್ನು ಮೇಸ್ತ್ರಿ ರಮೇಶ್, ಕೃಷ್ಣಪ್ಪ ಹಾಗೂ ಮನೆ ಮಾಲೀಕರಾದ ಶ್ರೀನಿವಾಸ್‌ರವರಿಗೆ ವಿಚಾರವನ್ನು ತಿಳಿಸಿದ್ದು, ಸದರಿಯವರು ನನಗೆ ಬುದ್ಧಿ ಹೇಳಿ ಇನ್ನೊಮ್ಮೆ ಯಶೋಧಮ್ಮನ ತಂಟೆಗೆ ಹೋಗಬಾರದೆಂದು ಎಚ್ಚರಿಕೆಯನ್ನು ಕೊಟ್ಟಿದ್ದರು. ಇದರಿಂದ ಯಶೋಧಮ್ಮನ ಮೇಲೆ ಬೇಸರ ಮತ್ತು ಕೋಪವಿತ್ತು. ಆದರೂ ಸಹ ಯಶೋಧಮ್ಮನಿಗೆ ಕೀಟಲೆ ಮಾಡುವುದನ್ನು ಮುಂದುವರೆಸಿದ್ದು, ಯಶೋಧಮ್ಮ ಆಗಾಗ ಕೆಲಸದ ನಂತರ ಹೊಸ ಮನೆಯಲ್ಲಿಯೇ ಉಳಿದುಕೊಳ್ಳುತ್ತಿದ್ದಳು. ಒಂಟಿಯಾಗಿರುವ ಸಮಯ



ನೋಡಿಕೊಂಡು ಅವಳೊಂದಿಗೆ ದೇಹಸುಖ ಹೊಂದಬೇಕೆಂದು ಅವಕಾಶಕ್ಕಾಗಿ ಕಾಯುತ್ತಿದ್ದೆನು. ಯಶೋಧಮ್ಮ ದಸರಾಹಬ್ಬಕ್ಕೆ ತನ್ನ ಗ್ರಾಮಕ್ಕೆ ಹೋಗಿ ಅಕ್ಟೋಬರ್ 15ರಂದು ಮಾಲೂರಿಗೆ ಬರುವ ವಿಚಾರವನ್ನು ತಿಳಿದುಕೊಂಡಿದ್ದೆನು. ಅದರಂತೆ ಯಶೋಧಮ್ಮ ಊರಿನಿಂದ ಬಂದು ಕೆಲಸ ಮಾಡಿ ರಾತ್ರಿ ಮಳೆ ಬಂದಿದ್ದರಿಂದ ಅಲ್ಲಿಯೇ ಮಲಗುವುದಾಗಿ ಹೇಳಿದರು. ನಾನು ರಾತ್ರಿ 7.30ರಲ್ಲಿ ಮದ್ಯಪಾನ ಮಾಡಿ ಊಟ ಮಾಡಿಕೊಂಡು ಬಂದು ಹೊಸ ಮನೆಯಲ್ಲಿ ಉಳಿದುಕೊಂಡಿದ್ದೆನು. ರಾತ್ರಿ ಸುಮಾರು 8 ಗಂಟೆ ಸಮಯದಲ್ಲಿ ಯಶೋಧಮ್ಮ ಊಟಕ್ಕೆ ಹೋಗಿದ್ದವಳು ಹೊಸ ಮನೆಗೆ ಬಂದು ಮೊದಲನೇ ಮಹಡಿಯ ರೂಂನಲ್ಲಿ ಮಲಗಿಕೊಂಡಳು. ಈ ಸಮಯದಲ್ಲಿ ಅವಕಾಶಕ್ಕಾಗಿ ಕಾಯುತ್ತಿದ್ದ ನಾನು ಯಶೋಧಮ್ಮನ ಬಳಿಗೆ ಹೋಗಿ ಅವಳನ್ನು ಹಿಡಿದುಕೊಂಡು ಲೈಂಗಿಕ ದೌರ್ಜನ್ಯ ನಡೆಸಲು ಪ್ರಯತ್ನ ಮಾಡಿದ್ದು, ಯಶೋಧಮ್ಮ ಇದಕ್ಕೆ ತುಂಬಾ ವಿರೋಧ ಮಾಡಿ ಕೂಗಾಡುವುದಾಗಿ ಹೇಳಿದ್ದು, ಇದರಿಂದ ಕೋಪ ಬಂದು ಅಲ್ಲೇ ಇದ್ದ ಕಬ್ಬಿಣದ ಪೈಪ್ ಮತ್ತು ಮರದ ರೀಪೀಸ್‌ನಿಂದ ಯಶೋಧಮ್ಮನ ತಲೆ ಮತ್ತು ಮುಖದ ಮೇಲೆ ಹೊಡೆದಾಗ ಆಕೆ ಕೆಳಗೆ ಬಿದ್ದುಬಿಟ್ಟಳು. ಆಗ ನಾನು ಬಲವಂತದಿಂದ ಆಕೆಯ ಮೇಲೆ ಅತ್ಯಾಚಾರ ಮಾಡಿ ನನ್ನ ಆಸೆಯನ್ನು ತೀರಿಸಿಕೊಂಡೆನು. ಆದರೆ ಈ ವಿಚಾರವನ್ನು ಮೇಸ್ತ್ರಿ ರಮೇಶ್ ಮತ್ತು ಮನೆ ಮಾಲೀಕ ಶ್ರೀನಿವಾಸ್‌ರವರಿಗೆ ಹೇಳಿದರೆ ಅವರಿಂದ ನನಗೆ ತೊಂದರೆಯಾಗುವುದೆಂದು ಅರಿತುಕೊಂಡು ಇವಳನ್ನು ಉಳಿಸಬಾರದೆಂದು ಅಲ್ಲಿಯೇ ಬಿದ್ದಿದ್ದ ಕಬ್ಬಿಣದ ಸಲಾಕೆಯನ್ನು ತೆಗೆದುಕೊಂಡು ಯಶೋಧಮ್ಮನ ತಲೆ ಮತ್ತು ಮುಖಕ್ಕೆ ಹೊಡೆದೇನಲ್ಲದೆ ಮರ್ಮಾಂಗಕ್ಕೆ ತಿವಿದು ಸಾಯಿಸಿ ಶವವನ್ನು ಮೆಟ್ಟಿಲ ಕೆಳಗೆ ಹಾಕಿ ಅಲ್ಲಿಂದ ರೈಲ್ವೆ ನಿಲ್ದಾಣದ ಬಳಿ ಇರುವ ಹುಣಸೇ ಮರದ ಕೆಳಗೆ ಮಲಗಿಕೊಂಡಿದ್ದು, ಬೆಳಿಗ್ಗೆ ಎಲ್ಲಿಯಾದರೂ ಹೋಗಿ ತಲೆಮರೆಸಿಕೊಳ್ಳಬೇಕೆಂದು ತಿರುಗಾಡುತ್ತಿದ್ದಾಗ ನಿಮ್ಮಗಳ ಕೈಗೆ ಸಿಕ್ಕಿಹಾಕಿಕೊಂಡ ಬಗ್ಗೆ ತಿಳಿಸಿದನು.

ಆರೋಪಿ ಸಂತೋಷ್‌ಕುಮಾರ್‌ನಿಂದ ಹೇಳಿಕೆ ಪಡೆದ ನಂತರ ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳದ ಮಹಜರ್ ನಡೆಸಿದ ಮೇಲೆ ಸ್ಥಳದಲ್ಲಿಯೇ ಇದ್ದ ಕಬ್ಬಿಣದ ಸರಳು, ಪೈಪ್ ಮತ್ತು ಮರದ ರೀಪೀಸ್‌ನ್ನು ತೆಗೆದುಕೊಟ್ಟಿದ್ದು, ಪಂಚರ ಸಮಕ್ಷಮದಲ್ಲಿ ಅವುಗಳನ್ನು ವಶಕ್ಕೆ ಪಡೆದ ನಂತರ ಆರೋಪಿ ಕೂಲಿ ಕಾರ್ಮಿಕನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ☯

# ಮೋಸ್ಟ್ ವಾಂಟೆಡ್ ನಕ್ಸಲ್ ವಿಕ್ರಂಗೌಡ ಎನ್‌ಕೌಂಟರ್

9 ☞

ಹತನಾಗಿದ್ದನು. ಈ ವೇಳೆ ಸಾಕೇತ್ ರಾಜನ್ ಜೊತೆಯಲ್ಲಿದ್ದ ವಿಕ್ರಮ್ ಗೌಡ ಅಲ್ಲಿಂದ ತಪ್ಪಿಸಿಕೊಂಡಿದ್ದನು

ಇದಾದ ನಂತರ ಆತನ ಸಾವಿಗೆ ಪ್ರತಿಕಾರಕ್ಕಾಗಿ ಕಾಯುತ್ತಲೇ ಬರುತ್ತಿದ್ದ ವಿಕ್ರಂಗೌಡ ಸಾಕೇತ್ ರಾಜನ್ ಬಳಿಕ ನಾಯಕನಾಗಿ ಬೆಳೆದಿದ್ದನು. ಈ ಹಿಂದೆ ಸಾಕೇತ್ ರಾಜನ್ ಸಾವಿಗೆ ರೆಡ್ ಸೆಲ್ಯೂಟ್ ದಿನ ಆಚರಿಸಲು ನಕ್ಸಲರು ತಯಾರಿ ನಡೆಸಿದ್ದರು. ಇದರ ಜತೆಗೆ ಸಾಕೇತ್ ರಾಜನ್ ನೆನಪಿಗಾಗಿ ಪ್ರತಿ ವರ್ಷ ನಕ್ಸಲರು ಹುತಾತ್ಮ ದಿನಾಚರಣೆ ನಡೆಸುತ್ತಾ ಬಂದಿದ್ದರು. ಬಹಳಷ್ಟು ಸಲ ಈತ ಕೂದಲೆಳೆ ಅಂತರದಲ್ಲಿ ಪಾರಾಗಿದ್ದನು.



ಇನ್ನು ಇವತ್ತು ನಕ್ಸಲ್ ನಿಗ್ರಹ ಪಡೆಯ ಗುಂಡೇಟಿಗೆ ಬಲಿಯಾದ ವಿಕ್ರಂಗೌಡನ ಬಗ್ಗೆ ಹೇಳಬೇಕೆಂದರೆ, ಈತ ಉಡುಪಿ ಜಿಲ್ಲೆಯ ಹೆಬ್ರಿ ತಾಲೂಕಿನ ಕೂಡ್ಲ ಸಮೀಪದ ನಾಡ್ವಾಲು ಗ್ರಾಮದವನು. ಸದ್ಯಕ್ಕೆ ಈತ ಸುಮಾರು 20ಕ್ಕೂ ಹೆಚ್ಚು ಪ್ರಕರಣದಲ್ಲಿ ಪೊಲೀಸರಿಗೆ ಬೇಕಾಗಿದ್ದಾನೆ. ಕಳೆದ 20 ವರ್ಷಗಳಿಂದ ನಕ್ಸಲೈಟ್ ಆಗಿದ್ದು, ಕೇರಳದಲ್ಲಿ ಈತ ತನ್ನ ಚಟುವಟಿಕೆಗಳನ್ನು ನಡೆಸುತ್ತಿದ್ದನಾದರೂ ಅಲ್ಲಿ ಎನ್‌ಕೌಂಟರ್ ನಡೆಸಿ ಒಂದಷ್ಟು ಜನರನ್ನು ಹೊಡೆದು ಹಾಕಲಾಗಿತ್ತು. ಅಲ್ಲಿ ಇನ್ನುಮುಂದೆ ಉಳಿಗಾಲವಿಲ್ಲ ಎಂದರಿತ ಈತ ಮತ್ತೆ ಕರ್ನಾಟಕದತ್ತ ಮುಖ ಮಾಡಿದ್ದನು.


ಬೇಸಿಗೆಯಲ್ಲಿ ಕೊಡಗಿನಲ್ಲಿ ಕಾಣಿಸಿಕೊಂಡಿದ್ದ ಈತ ತದನಂತರ ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಮೊದಲಾದ ಅರಣ್ಯ ಪ್ರದೇಶಗಳಲ್ಲಿ ಅಡ್ಡಾಡುತ್ತಿದ್ದನು. ಆಗೊಮ್ಮೆ ಈಗೊಮ್ಮೆ ಜನರಿಗೆ ಕಾಣಿಸಿಕೊಂಡಿದ್ದ ಈತನಿಗಾಗಿ ನಕ್ಸಲ್ ಪಡೆ ಹುಡುಕಾಟ ನಡೆಸುತ್ತಲೇ ಇತ್ತು. ಅಂತು ಇಂತು ಕೊನೆಗೂ ವಿಕ್ರಂಗೌಡ ಗುಂಡೇಟಿಗೆ ಬಲಿಯಾಗುವುದರೊಂದಿಗೆ ನಕ್ಸಲ್ ಚಟುವಟಿಕೆಗೆ ಅಂತ್ಯ ಹೇಳಿದ್ದಾನೆ. ಸದ್ಯ ನಾಯಕನೇ ಅಂತ್ಯ ಕಂಡ ಮೇಲೆ ಜತೆಗಿರುವವರು ಶೀಘ್ರವೇ ಸೆರೆ ಸಿಕ್ಕರೂ ಅಚ್ಚರಿಯಿಲ್ಲ. ಹೀಗೆ ಬೇಟೆಯಾಡುತ್ತಾ ಹೋದರೆ ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ನಕ್ಸಲರ ಹುಟ್ಟಡಗುವುದರಲ್ಲಿ ಎರಡು ಮಾತಿಲ್ಲ.


### ಗೃಹಸಚಿವ ಪರಮೇಶ್ವರ್ ಹೇಳಿದ್ದೇನು?


ಗೃಹ ಸಚಿವ ಡಾ. ಜಿ. ಪರಮೇಶ್ವರ್

ನಕ್ಸಲ್ ನಿಗ್ರಹ ಪಡೆ ವಿಕ್ರಮ್ ಗೌಡನನ್ನು ಎನ್‌ಕೌಂಟರ್ ಮೂಲಕ ಹೊಡೆದುರುಳಿಸಿದ ಬೆನ್ನಲ್ಲೇ ಪ್ರತಿಕ್ರಿಯೆ ನೀಡಿರುವ ಗೃಹಸಚಿವ ಡಾ.ಜಿ. ಪರಮೇಶ್ವರ್ ಅವರು ವಿಕ್ರಂಗೌಡನ ಮೇಲೆ ಎನ್‌ಕೌಂಟರ್ ಅನಿವಾರ್ಯವಾಗಿತ್ತು ಎಂದಿದ್ದಾರೆ. ಈತನಿಗಾಗಿ ಕಳೆದ 20 ವರ್ಷಗಳಿಂದ ಪೊಲೀಸರು ಹುಡುಕಾಟ ನಡೆಸುತ್ತಿದ್ದರು. ಆದರೆ, ಆತ ತಪ್ಪಿಸಿಕೊಂಡು ಓಡಾಡುತ್ತಿದ್ದ. ಈ ಹಿಂದೆ ನಡೆದ ಅನೇಕ ಎನ್ಕೌಂಟರ್‌ಗಳಲ್ಲಿ ವಿಕ್ರಮ್ ಗೌಡ ತಪ್ಪಿಸಿಕೊಂಡಿದ್ದ. ಇದೀಗ ಆತನ ಎನ್‌ಕೌಂಟರ್ ಆಗಿದೆ. ಆತನ ಚಲನವಲನಗಳನ್ನು ಪೊಲೀಸರು ಗಮನಿಸುತ್ತಿದ್ದರು. ಆತನ ಚಲನವಲನಗಳ ಮೇಲೆ ನಿಗಾ ಇಟ್ಟಿದ್ದರು. ಸೋಮವಾರ ರಾತ್ರಿ(ನ.18) ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ಮಾಡಿದ್ದಾರೆ.

ಮೊದಲಿಗೆ ವಿಕ್ರಮ್ ತಂಡ ಪೊಲೀಸರ ಮೇಲೆ ದಾಳಿ ನಡೆಸಿದ್ದು, ಪೊಲೀಸರು ಪ್ರತಿ ದಾಳಿ ನಡೆಸಿದ್ದಾರೆ. ಜೊತೆಯಲ್ಲಿದ್ದ ಇಬ್ಬರು-ಮೂವರು ಪರಾರಿಯಾಗಿದ್ದಾರೆ. ರಾಜ್ಯದಲ್ಲಿ ನಕ್ಸಲರನ್ನು ಮುಖ್ಯ ವೇದಿಕೆಗೆ ಕರೆತರುವ ಪ್ರಯತ್ನಗಳು ನಡೆಯುತ್ತಿವೆ. ಹಿಂದೆ ಪಾವಗಡ ಭಾಗದಲ್ಲಿ ನಕ್ಸಲರನ್ನು ಮಾತನಾಡಿ ಮುಖ್ಯವೇದಿಕೆಗೆ ಕರೆತರಲಾಗಿತ್ತು. ಈಗಲೂ ಈ ಪ್ರಯತ್ನ ನಡೆಯುತ್ತಿದೆ. ಶರಣಾಗಲು ಬಯಸುವ ನಕ್ಸಲರಿಗೆ ಸಾಮಾನ್ಯ ಬದುಕು ನಡೆಸಲು ಸರ್ಕಾರ ಅವಕಾಶ ಮಾಡಿಕೊಡಲಿದೆ. ಅದು ಇದ್ದಿದ್ದೇ. ಆದರೆ ಅರಣ್ಯ ಭಾಗದಲ್ಲಿದ್ದು, ಪೊಲೀಸರ ಮೇಲೆ ತಪ್ಪಿಸಿಕೊಂಡು ಹೋಗಲು ಪ್ರಯತ್ನ ಮಾಡಿದರೆ ಎನ್‌ಕೌಂಟರ್ ಅನಿವಾರ್ಯ ಎಂದಿದ್ದಾರೆ.



☯

# ಟೈಲ್ಸ್ ಫ್ಯಾಕ್ಟರಿಯಲ್ಲಿ ಜಾರ್ಖಂಡ್ ಮೂಲದ ಬಾಲಕಿಯ ಅತ್ಯಾಚಾರದ ಕೊಲೆ; ಮೂವರು ಕಾರ್ಮಿಕರಿಗೆ ಗಲ್ಲು ಶಿಕ್ಷೆ, ಒಬ್ಬ ಆರೋಪಿ ನಾಪತ್ತೆ!

ಉಳಾಯಿಬೆಟ್ಟು ಬಳಿಯ ರಾಜ್ ಟೈಲ್ಸ್ ಫ್ಯಾಕ್ಟರಿಯಲ್ಲಿ ಜಾರ್ಖಂಡ್ ಮೂಲದ ಕುಟುಂಬಕ್ಕೆ ಸೇರಿದ ಎಂಟು ವರ್ಷದ ಬಾಲಕಿಯನ್ನು ಅತ್ಯಾಚಾರಗೈದು ಹತ್ಯೆಗೈದ ಪ್ರಕರಣದಲ್ಲಿ ಮೂವರು ಅಪರಾಧಿಗಳಿಗೆ ಮಂಗಳೂರಿನ ಜಿಲ್ಲಾ ವಿಶೇಷ ಪೋಕ್ಸೋ ನ್ಯಾಯಾಲಯ ಗಲ್ಲು ಶಿಕ್ಷೆ ವಿಧಿಸಿದೆ.



ರಾಜ್ ಟೈಲ್ಸ್ ಫ್ಯಾಕ್ಟರಿಯಲ್ಲಿ ಕಾರ್ಮಿಕರಾಗಿದ್ದ ಮಧ್ಯಪ್ರದೇಶದ ರಾಜ್ಯದ ಪನ್ನಾ ಜಿಲ್ಲೆ ಪನಾಯಿ ತೆಹ್ಸಿಲ್ ನಿವಾಸಿ ಜಯಸಿಂಗ್ ಆದಿವಾಸಿ (21), ಅದೇ ಜಿಲ್ಲೆಯ ನಿವಾಸಿ ಮುಕೇಶ್ ಸಿಂಗ್ (20) ಮತ್ತು ಜಾರ್ಖಂಡ್ ರಾಜ್ಯದ ರಾಂಚಿ ನಿವಾಸ ಮನೀಶ್ ತಿರ್ಕಿ (33) ಗಲ್ಲು ಶಿಕ್ಷೆಗೊಳಗಾದವರು.

2021ರ ನವೆಂಬರ್ 20ರಂದು ಉಳಾಯಿಬೆಟ್ಟು ಟೈಲ್ಸ್ ಫ್ಯಾಕ್ಟರಿಯಲ್ಲಿ ಘಟನೆ ನಡೆದಿತ್ತು. ಸಂಜೆಯ ವೇಳೆಗೆ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ ಜಾರ್ಖಂಡ್ ಮೂಲದ ಕುಟುಂಬದ ಎಂಟು ವರ್ಷದ ಬಾಲಕಿ ಕಾಣೆಯಾಗಿದ್ದರಿಂದ ಗ್ರಾಮಾಂತರ ಠಾಣೆ ಪೊಲೀಸರಿಗೆ ದೂರು ನೀಡಲಾಗಿತ್ತು. ಬಳಿಕ ಹುಡುಕಾಟ ನಡೆಸಿದಾಗ, ರಾತ್ರಿ ವೇಳೆ ಫ್ಯಾಕ್ಟರಿ ಹಿಂಭಾಗದ ಚರಂಡಿಯಲ್ಲಿ ಬಾಲಕಿ ಶವ ಪತ್ತೆಯಾಗಿತ್ತು. ಬಾಲಕಿಯನ್ನು ಫ್ಯಾಕ್ಟರಿಯಲ್ಲಿದ್ದವರೇ ಅತ್ಯಾಚಾರಗೈದು ಕೊಲೆಗೈದಿದ್ದ ಬಗ್ಗೆ ಅನುಮಾನ ಬಂದು ತನಿಕೆ ನಡೆಸಲಾಗಿತ್ತು. ತನಿಖೆ ಸಂದರ್ಭದಲ್ಲಿ ಶಂಕಿತ ಆರೋಪಿಗಳು ನಾಪತ್ತೆಯಾಗಿದ್ದು, ಬಳಿಕ ನಾಲ್ವರನ್ನು ಬಂಧಿಸಲಾಗಿತ್ತು. ಜಯಸಿಂಗ್, ಮುಕೇಶ್ ಸಿಂಗ್ ಮತ್ತು ಮನೀಶ್ ತಿರ್ಕೆ ಕೃತ್ಯ ಎಸಗಿದ್ದರೆ, ಇವರಿಗೆ ಮಧ್ಯಪ್ರದೇಶ ಪನ್ನಾ ಜಿಲ್ಲೆಯ ನಿವಾಸಿ ಮುನೀಮ್ ಸಿಂಗ್ ಸಹಕಾರ ನೀಡಿದ್ದ.

ಭಾನುವಾರ ಶಾಲೆಗೆ ರಜೆ ದಿನವಾಗಿದ್ದರಿಂದ ಟೈಲ್ಸ್ ಫ್ಯಾಕ್ಟರಿಯ ಹೊರಗಡೆ ಆಟವಾಡುತ್ತಿದ್ದ ಬಾಲಕಿಯನ್ನು ಚಾಕೋಲೇಟ್ ಕೊಡಿಸುವ ಆಮಿಷವೊಡ್ಡಿ ಕಟ್ಟಿಗೆಯನ್ನು ರಾಶಿ ಹಾಕಿದ್ದ ಕೊಠಡಿಗೆ ಆರೋಪಿಗಳು ಕರೆದೊಯ್ದಿದ್ದರು. ಅಲ್ಲಿ ಸಿಸಿಟಿವಿ ಇಲ್ಲದ ಕಾರಣ ಅದೇ ಜಾಗವನ್ನು ಆರೋಪಿಗಳು ಆಯ್ದುಕೊಂಡಿದ್ದರು. ಅಲ್ಲಿ ಯಾರೂ ಇಲ್ಲದ ಸಮಯ ನೋಡಿಕೊಂಡು ಒಬ್ಬರ ನಂತರ ಮತ್ತೊಬ್ಬರಂತೆ ಸಂಭೋಗ ನಡೆಸಿದ್ದು, ಆಕೆ ನೋವಿನಿಂದ ಚೀರಾಡಿದರೂ ಬಿಟ್ಟಿರಲಿಲ್ಲ. ಬಾಲಕಿಯ ಬೊಬ್ಬೆ ಹೊರಗಿನವರಿಗೆ ಕೇಳುತ್ತದೆ ಎಂದು ಆಕೆಯ ಬಾಯಿಗೆ ಕೈಯಲ್ಲಿ ಮುಚ್ಚಿದ್ದರು. ಈ ವೇಳೆ, ನಾಲ್ಕನೇ ಆರೋಪಿ ಮುನೀಮ್ ಸಿಂಗ್ ಹೊರಗಡೆಯಿಂದ ಯಾರಾದರೂ ಬರುತ್ತಾರೆಯೇ ಎಂದು ಬಾಗಿಲಿನಲ್ಲಿ ಕಾದು ನಿಂತಿದ್ದ. ಆನಂತರ, ಬಾಲಕಿ ಚೀರಾಡುತ್ತಾಳೆ ಮತ್ತು ಹೊರಗೆ ಬಂದು ಕೃತ್ಯದ ಬಗ್ಗೆ ಬಾಯಿ ಬಿಟ್ಟಲ್ಲಿ ತಮಗೆ ಅಪಾಯ ಎಂದು ಆಕೆಯ ಕುತ್ತಿಗೆ ಹಿಚುಕಿ ಕೊಲೆ ಮಾಡಿದ್ದರು.





ಟೈಲ್ಸ್ ಫ್ಯಾಕ್ಟರಿಯಲ್ಲಿ ಉತ್ತರ ಭಾರತೀಯರೇ ಹೆಚ್ಚು ಕಾರ್ಮಿಕರಾಗಿದ್ದು ಫ್ಯಾಕ್ಟರಿ ಬಳಿಯಲ್ಲೇ ಅವರಿಗೆ ಉಳಿದುಕೊಳ್ಳಲು ಕೊಠಡಿ ವ್ಯವಸ್ಥೆ ಮಾಡಿಕೊಟ್ಟಿದ್ದರು. ಅಕ್ಕಪಕ್ಕದಲ್ಲಿ ಕೊಠಡಿ ಇದ್ದುದರಿಂದ ಬಾಲಕಿ ಎಲ್ಲರಿಗೂ ಪರಿಚಿತಳಾಗಿದ್ದಳು. ಬಾಲಕಿಯ ಹೆತ್ತವರು ಕೆಲಸಕ್ಕೆ ಹೋಗಿದ್ದರಿಂದ ಇದೇ ಸಂದರ್ಭದಲ್ಲಿ ಕೆಲಸಕ್ಕೆ ರಜೆಯನ್ನು ಪಡೆದಿದ್ದ ಕಾರ್ಮಿಕರು ಅತ್ಯಾಚಾರ ಎಸಗುವ ಉದ್ದೇಶದಿಂದ ಬಾಲಕಿಯನ್ನು ಪುಸಲಾಯಿಸಿ ಕೊಠಡಿಗೆ ಕರೆದೊಯ್ದು ಕೃತ್ಯ ಎಸಗಿದ್ದರು. ಘಟನೆ ಬಗ್ಗೆ ಮಂಗಳೂರು ಗ್ರಾಮಾಂತರ ಠಾಣೆಯಲ್ಲಿ ಪೋಕ್ಸೋ ಕಾಯ್ದೆಯಡಿ ಕೇಸು ದಾಖಲಾಗಿತ್ತು. ತನಿಖೆ ನಡೆಸಿದ ಇನ್ಸ್‌ಪೆಕ್ಟರ್ ಜಾನ್ಸನ್ ಡಿಸೋಜ ನೇತೃತ್ವದ ಪೊಲೀಸರು ಆರೋಪ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದಲ್ಲಿ 30 ಸಾಕ್ಷಿಗಳು, 75 ದಾಖಲೆಗಳನ್ನು ಪರಿಗಣಿಸಿ ಮೂವರು ಆರೋಪಿಗಳಿಗೆ ಮರಣ ದಂಡನೆ ಶಿಕ್ಷೆ ಜೊತೆಗೆ ಸಂತ್ರಸ್ತ ಬಾಲಕಿಯ ಕುಟುಂಬಕ್ಕೆ 1.20 ಲಕ್ಷ ರೂಪಾಯಿ ದಂಡ ತೆರುವಂತೆ ನ್ಯಾಯಾಧೀಶರು ತೀರ್ಪು ನೀಡಿದ್ದಾರೆ. ನಾಲ್ಕನೇ ಆರೋಪಿ ಮುನೀಮ್ ಸಿಂಗ್ ಪ್ರಕರಣದ ವಿಚಾರಣೆ ನಡೆಸುತ್ತಿದ್ದಾಗ ಜಾಮೀನಿನಲ್ಲಿ ಹೊರಬಂದು ತಲೆಮರೆಸಿಕೊಂಡಿದ್ದಾನೆ. ಹಾಗಾಗಿ, ಆತನಿಗೆ ಶಿಕ್ಷೆ ವಿಧಿಸಲಾಗಿಲ್ಲ. ಇದಲ್ಲದೆ, ದಂಡ ಪ್ರಕ್ರಿಯೆ ಸಂಹಿತೆ ಕಲಂ 357(ಎ) ಪ್ರಕಾರ ಮತ್ತು ಸಂತ್ರಸ್ತರ ಪರಿಹಾರ ಯೋಜನೆಯಡಿ ಮೃತ ಬಾಲಕಿಯ ತಾಯಿಗೆ ಹೆಚ್ಚುವರಿಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ 3.80 ಲಕ್ಷ ರೂ. ಪರಿಹಾರ ನೀಡುವಂತೆ ಕೋರ್ಟ್ ಆದೇಶ ಮಾಡಿದೆ.

ಆರಂಭದಲ್ಲಿ ನಿವೃತ್ತ ಪಬ್ಲಿಕ್ ಪ್ರಾಸಿಕ್ಯೂಟರ್ ವೆಂಕಟರಮಣ ಸ್ವಾಮಿ ಸಂತ್ರಸ್ತರ ಪರವಾಗಿ ವಾದ ಮಂಡಿಸಿದ್ದರು. ಆನಂತರ, ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರ್ ಕೆ. ಬದರಿನಾಥ ನಾಯರಿ ಅವರು ಸಂತ್ರಸ್ತರ ಪರವಾಗಿ ವಾದಿಸಿದ್ದು, ಗರಿಷ್ಠ ಶಿಕ್ಷೆಯಾಗುವಂತೆ ಮಾಡಿಸಿದ್ದಾರೆ. ಮಂಗಳೂರಿನ ಪೋಕ್ಸೋ ನ್ಯಾಯಾಲಯದಲ್ಲಿ ಮರಣ ದಂಡನೆ ಶಿಕ್ಷೆ ವಿಧಿಸಲ್ಪಟ್ಟ ಮೊದಲ ಪ್ರಕರಣ ಇದಾಗಿದೆ. ಪೋಕ್ಸೋ ವಿಶೇಷ ನ್ಯಾಯಾಲಯದ ಜಿಲ್ಲಾ ನ್ಯಾಯಾಧೀಶೆ ಮಾನು ಕೆ.ಎಸ್. ಅವರು ಶಿಕ್ಷೆ ವಿಧಿಸಿದ್ದಾರೆ.

# ರಾಜ್ಯವನ್ನೇ ಬೆಚ್ಚಿಬೀಳಿಸುವ ಕಹಾನಿ: ಗೋರಿಯಿಂದ ಹೊರ ಬಂದ 6 ತಿಂಗಳ ಹಿಂದೆ ಹೂತಿದ್ದ ಶವ!



ಆ ಬಾಲಕಿ ಹಾವು ಕಚ್ಚಿ ಸಾವನ್ನಪ್ಪಿದ್ದಾಳೆ ಅಂತಾ ಹೆತ್ತವರು ಮಣ್ಣು ಮಾಡಿದ್ದರು. ಆದರೆ ಎರಡು ತಿಂಗಳ ಬಳಿಕ ಬಾಲಕಿ ತಾಯಿಗೂ ವಿಷ ಹಾಕಿ ಕೊಲೆ ಮಾಡಲು ಯತ್ನ ನಡೆದಿತ್ತು. ಆಗ ಮತ್ತೊಂದು ಭಯಾನಕ ವಿಚಾರ ಬಯಲಾಗಿತ್ತು. ಆ ವಿಚಾರ ತಿಳಿದು ಇಡೀ ಕುಟುಂಬವೇ ಬೆಚ್ಚಿ ಬಿದ್ದಿದೆ. ಆರು ತಿಂಗಳ ಹಿಂದೆ ಗೋರಿಯಲ್ಲಿ ಹೂತಿದ್ದ ಬಾಲಕಿ ಶವವನ್ನ ಹೊರ ತೆಗೆದು ಮರು ಶವಪರೀಕ್ಷೆ ನಡೆಸಲಾಗಿದೆ.





**ಆರು ತಿಂಗಳು ಹಿಂದೆ ಹೂತಿಟ್ಟ ಶವ ಮೇಲಕ್ಕೆ**

ವಿಜಯಪುರ ಜಿಲ್ಲೆಯ ಚಡಚಣ ತಾಲೂಕಿನ ಬರಡೋಲ ಗ್ರಾಮದಲ್ಲಿ ಕಳೆದ ಮೇ 12 ರಂದು ಸಾಪ್ರೀನ್ ವಂಟಿ ಎನ್ನುವ 10 ವರ್ಷದ ಬಾಲಕಿ ಹಾವು ಕಚ್ಚಿ ಸಾವನ್ನಪ್ಪಿದ್ದಾಳೆ ಎಂದು ಅಂತ್ಯ ಸಂಸ್ಕಾರ ಮಾಡಲಾಗಿತ್ತು. ಕುಟುಂಬಸ್ಥರು ತಮ್ಮದೆ ಜಮೀನಿನಲ್ಲಿ ಶವವನ್ನ ಹೂತು ಅಂತ್ಯಕ್ರಿಯೆ ನೆರವೇರಿಸಿದ್ದರು. ಆದರೆ ಇದಾಗ ಆರು ತಿಂಗಳ ಬಳಿಕ ಮತ್ತೆ ಬಾಲಕಿಯ ಶವವನ್ನ ಹೊರ ತೆಗೆದು ಶವಪರೀಕ್ಷೆ ಪಡೆಸಲಾಗಿದೆ. ವಿಜಯಪುರ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಂಕರ್ ಮಾರಿಹಾಳ, ಇಂಡಿ ಉಪವಿಭಾಗಾಧಿಕಾರಿ ಹಬೀದ್ ಗದ್ಯಾಳ ನೇತೃತ್ವದಲ್ಲಿ ಬಾಲಕಿಯ ಶವ ಪರೀಕ್ಷೆ ನಡೆಸಲಾಯಿತು.

☞ 12


# ಅಮರ್ ಆಳ್ವ ಕೊಲೆ ಕೇಸಿಗೆ ಪೂರ್ಣ ವಿರಾಮ

2 ☞
ಕರ್ತವ್ಯದಲ್ಲಿದ್ದಾಗ ಮತ್ತು ನಿವೃತ್ತಿಯ ನಂತರವೂ ಗೌರವಕ್ಕೆ ಪಾತ್ರರಾಗುತ್ತಲೇ ಇದ್ದಾರೆ. ಗೆಲುವು ಇನ್ನೂ ಅವರೊಂದಿಗಿನ ಇದು ನಿರಂತರವಾಗಿರಲಿ.

**ಯತೀಶ್ ಶೆಟ್ಟಿ**

ಅಮರ್ ಆಳ್ವ ಹತ್ಯೆಗಾಗಿ ಒಂದೇ ಒಂದು ಬಾರಿ ರಿವಾಲ್ವರ್ ಕೈಗೆತ್ತಿಕೊಂಡ ಯತೀಶ್ ಶೆಟ್ಟಿ, ಜೈಲಿನಿಂದ ಹೊರಬಂದ ಬಳಿಕ ಬೆಂಗಳೂರು, ಮುಂಬೈ ಹಾದಿಯಾಗಿ ಸಾಗಿ ನೆಲೆನಿಂತದ್ದು ದುಬೈನಲ್ಲಿ. ಅಲ್ಲೊಂದು ಉದ್ಯಮ ಸಾಮ್ರಾಜ್ಯವನ್ನೇ ಸ್ಥಾಪಿಸಿಬಿಟ್ಟರು. ಎರಡು ಕ್ಯಾಸಿನೋ, ಮೂರು ಹೋಟೆಲ್, ಡ್ಯಾನ್ಸ್ ಬಾರವ, ರಿಯಲ್ ಎಸ್ಟೇಟ್, ಕುಳಿತು ವ್ಯವಹಾರ ಮಾಡಿಕೊಳ್ಳಲಿಕ್ಕೊಂದು ಸುಸಜ್ಜಿತ ಆಫೀಸು, ಮಂಗಳೂರು, ಉಡುಪಿಯಿಂದ ಆಗಾಗ ದುಬೈಗೆ ಬಂದು ಹೋಗುವ ಅತಿಥಿಗಳಿಗೆ ಪಾರ್ಟಿ ಕೊಡಲಿಕೆಂದೇ ಒಂದು ಗೆಸ್ಟ್‌ಹೌಸ್. ಹೀಗೆ ನೋಡ ನೋಡುತ್ತಿದ್ದಂತೆಯೇ ಶಿರ್ವ ಮೂಲದ ಈ ಬಂಟರ ಹುಡುಗನ ಲಕ್ ಮತ್ತು ಲುಕ್ ದುಬೈನಲ್ಲಿ ಬದಲಾಗಿತ್ತು.

ಯಾವುದೋ ಕೆಟ್ಟಗಳಿಗೆಯೊಂದರಲ್ಲಿ ಯತೀಶ್, ಶ್ರೀಕರ್, ಮುರಳಿಯವರನ್ನು ಭೂಗತ ಜಗತ್ತು ಸೆಳೆದುಕೊಂಡದ್ದು ಎಷ್ಟು ಸತ್ಯವೋ, ಬಂದಷ್ಟೇ ವೇಗವಾಗಿ ಅವರೆಲ್ಲರೂ ಅದರಿಂದ ಹಿಂದೆ ಸರಿದದ್ದು ಕೂಡ ಅಷ್ಟೇ ಸತ್ಯ. ಸಾವಿನೊಂದಿಗೆ ಬೇಕಾದರೂ ಕಾದಾಡಬಲ್ಲ ನಿರ್ಭೀತ ಮನಸ್ಥಿತಿಯ ಶ್ರೀಕರ್ ಮತ್ತು ಮುರಳಿ ಕೂಡ ಹಿಂದಿನದೆಲ್ಲವನ್ನು ಮರೆತು ಸಹಜ ಜೀವನ ನಡೆಸುತ್ತಿದ್ದಾರೆ. ಸಾಮಾಜಿಕ-ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಬದುಕಿನ ದಿಕ್ಕು ಬದಲಾಯಿಸಿಕೊಂಡಿದ್ದಾರೆ.


ಯತೀಶ್ ಶೆಟ್ಟಿ

"ಅಮರ್ ಆಳ್ವ ಸತ್ತದ್ದೂ ನಿಜ. ಸಾಯಿಸಿದ್ದೂ ನಿಜ. ಅವತ್ತಿನ ದಿನಕ್ಕೆ ಅದು ಅನಿವಾರ್ಯವಾಗಿತ್ತು. ನಾನು ದುಡ್ಡಿಗಾಗಿ ಕೊಲ್ಲಲಿಲ್ಲ. ದೌಲತ್ತಿಗಾಗಿ ರಿವಾಲ್ವರ್ ಹಿಡಿಯಲಿಲ್ಲ. ಮಂಗಳೂರು ಅಂಡರ್‌ವರ್ಲ್ಡ್ ಅನ್ನು ಆಳಬೇಕೆಂಬ ಚಿಕ್ಕ ಕನಸೂ ನನಗಿರಲಿಲ್ಲ. ತಾಯಿ-ಸಹೋದರಿಗಾದ ಅವಮಾನ ನನ್ನಿಂದ ಆ ಕೆಲಸ ಮಾಡಿಸಿತು. ಮತ್ತ್ಯಾವತ್ತು ಕ್ರೈಂ ಫೀಲ್ಡ್‌ನಲ್ಲಿ ಮುಂದುವರೆಯಲೇಬಾರದು ಅಂತ ಜೈಲಿನಲ್ಲಿರುವಾಗಲೇ ನಿರ್ಧರಿಸಿದೆ. ನಾನು ಇವತ್ತು ಕಷ್ಟಪಡ್ಡು ದುಡಿಯುತ್ತಿದ್ದೇನೆ. ದುಡಿಯುತ್ತಿರುವ ಪ್ರತಿ ದುಡ್ಡು ಕೂಡ ಪ್ರಾಮಾಣಿಕವಾದದ್ದು. ಅನ್ಯಾಯದ ದುಡ್ಡಿಗೆ, ಅಕ್ರಮ ವ್ಯವಹಾರಗಳಿಗೆ ಯಾವತ್ತೂ ಕೈ ಹಾಕಿಲ್ಲ. ಹಾಕುವುದೂ ಇಲ್ಲ' ಇದು ಯತೀಶ್ ಶೆಟ್ಟಿ ಮಾತು.

ಬಂದೂಕು ಕೆಳಗಿಟ್ಟು ಬದುಕು ಕಟ್ಟಿಕೊಂಡವರು ಯತೀಶ್. ಅವರ ಮಾತಿನಲ್ಲಿನ ಪ್ರಾಮಾಣಿಕತೆಯನ್ನು ಗುರುತಿಸದಿರುವುದಾದರೂ ಹೇಗೆ?

ಇವೆಲ್ಲದರ ಮಧ್ಯೆ ದುಬೈಗೆ ಸಾಗುವ ಹಾದಿ ಮಧ್ಯದಲ್ಲೊಮ್ಮೆ ಮುಂಬೈನಲ್ಲಿ ಯತೀಶ್ ಅಂಧೇರಿ ಕ್ರೈಂ ಬ್ರಾಂಚ್ ಅಧಿಕಾರಿ ದಯಾನಾಯಕ್ ಕೈಗೆ ಸಿಕ್ಕಿಬಿದ್ದಿದ್ದರು. ಮಾಹಿತಿ ಕೊಟ್ಟ ವ್ಯಕ್ತಿ ಯತೀಶ್‌ನ ಅತ್ಯಂತ ನಿಕಟವರ್ತಿಯಾಗಿದ್ದರು!

ದುಬೈನಲ್ಲೂ ಅಷ್ಟೇ. ಎಷ್ಟು ಹಿತೈಷಿಗಳಿದ್ದರೋ, ಅವರ ನಡುವೆಯೇ ಅವರದೇ ಸಂಬಂಧಿಕರೂ ಸೇರಿ ಕೆಲ ಹಿತಶತ್ರುಗಳೂ ಅವರದೇ ಸಂಬಂಧಿಕರೂ ಸೇರಿ ಕೆಲ ಹಿತಶತ್ರುಗಳೂ ಇದ್ದಾರೆ. ಸಕ್ಸಸ್ ಎಂಬ ಮೆಟ್ಟಿಲುಗಳ ಮೇಲೆ ನಿರಂತರವಾಗಿ ಸಾಗುತ್ತಿದ್ದ ಯತೀಶ್ ಇದ್ಯಾವುದನ್ನು ಗಮನಿಸಲೇ ಇಲ್ಲ. ಸದ್ಯ ಅವರ ಉದ್ಯಮ-ವ್ಯವಹಾರ ಸ್ವಲ್ಪಗೊಂದಲಕ್ಕೊಳಗಾದಂತಿದೆ. ಅವರ ಪಾಸ್ ಪೋರ್ಟ್ ವಿವರಗಳನ್ನು ಜೊತೆಗಿರುವವರೇ ಭಾರತೀಯ ವಲಸೆ ಅಧಿಕಾರಿಗಳಿಗೆ ರವಾನಿಸಲು ಪ್ರಯತ್ನ ನಡೆಸಿದ್ದಾರೆ ಅಂತ ಇತ್ತೀಚೆಗಷ್ಟೇ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ನನಗೆ ಹೇಳಿದ ನೆನಪು.

ಮೆಟ್ಟಿಲು ಜಾರುವುದನ್ನೇ ನೋಡಲು ಕಾದು ಕುಳಿತವರು ಇದ್ದಾರೆ ಎಂಬುದು ಯತೀಶ್‌ಗೆ ಈಗ ಅರ್ಥವಾದಂತಿದೆ. ಆದರೆ 'ಬೆಳೆಯುತ್ತೇನೆ' ಅಂತ ತೀರ್ಮಾನಿಸಿಯೇ ಯತೀಶ್ ದುಬೈಗೆ ಬಂದವರು. ಅವರನ್ನು ಅವಮಾನಿಸಿದವರೆದುರು ಮತ್ತು ಹಿತಶತ್ರುಗಳೆದುರು ನಿಬ್ಬೆರಗಾಗುವಂತೆ ಬೆಳೆಯುವ ತಾಕತ್ತು ಇನ್ನೂ ಅವರಲ್ಲಿದೆ. ಕಷ್ಟದಲ್ಲಿದ್ದಾಗ ಜೊತೆಗಿದ್ದವರು ಯಾರು? ಸುಖದಲ್ಲಿದ್ದಾಗ ಬೆನ್ನಿಗಿರಿದವರು ಯಾರು? ಎಂಬುದನ್ನು ಅವರು ಅರ್ಥ ಮಾಡಿಕೊಂಡರೆ ಸಾಕು. ಮತ್ತೆ ಯಶಸ್ಸೆಂಬ ಕುರ್ಚಿಯ ಮೇಲೆ ಕುಳಿತುಕೊಳ್ಳುವುದು ಎಷ್ಟುಮಾತ್ರದ ಕೆಲಸ?

ಒಂದು ಸೋಲಿನಿಂದ ಹೇಗೆ ಮತ್ತು ಯಾಕೆ ಸೋತೆ ಎಂಬುದು ಗೊತ್ತಾಗುತ್ತದೆ ತಾನೇ? ನಂತರ ಆ ಸೋಲನ್ನೇ ಸೋಲಿಸುವ ನಿರ್ಧಾರದೊಂದಿಗೆ ಬಾಳುವುದಿದೆಯಲ್ಲ? ಅದುವೇ ನಿಜವಾದ ಹೋರಾಟದ ಬದುಕು. ಬಹುಶ ತಡವಾಗಿಯಾದರೂ ಯತೀಶ್ ಇದನ್ನು ತಿಳಿದುಕೊಂಡಿದ್ದಾರೆ. ಗೆಲುವಿನ ಮೆಟ್ಟಲಲ್ಲಿರುವ ಎರಡನೇ ಪ್ರಯತ್ನ ಮುಂದುವರಿಸಿದ್ದಾರೆ.

# ಗಂಡನಿಂದಲೇ ಹೆಂಡತಿ ಕೊಲೆ!?

3 ☞
ದಿಂದ ಅಂಬ್ಲಿಗೋಳಕ್ಕೆ ಬಂದು ತನ್ನ ಸೊಸೆ ಗೌರಿ ಮತ್ತು ಗೌರಿಯ ತಂದೆತಾಯಿ ಬಂಧು ಬಳಗದವರನ್ನು ಭೇಟಿಯಾಗಿ ನನ್ನ ಮಗ ಗೌರಿ ಇಲ್ಲದಿದ್ದರೆ ಬದುಕುವುದೇ ಇಲ್ಲ. ಗೌರಿ ಬಿಟ್ಟರೆ ಮನುಗೆ ಯಾರೂ ಗತಿನೇ ಇಲ್ಲ. ದಯವಿಟ್ಟು ನೀವೆಲ್ಲಾ ದೊಡ್ಡ ಮನಸ್ಸು ಮಾಡಿ ಗೌರಿಯನ್ನು ಮನು ಇರೋ ಮನೆಗೆ ಕಳಿಸಿ ಇನ್ನು ಮುಂದೆ ಗಂಡ ಹೆಂಡತಿ ಚೆನ್ನಾಗಿರುತ್ತಾರೆ ಅಂತಾ ಊರ ಹಿರಿಯರನ್ನು ಆ ಭಾಗದ ಗ್ರಾಮಪಂಚಾಯ್ತಿ ಸದಸ್ಯ ಹನುಮಂತಪ್ಪ ಇವರನ್ನೆಲ್ಲಾ ಒಪ್ಪಿಸಿ ಗೌರಿಯನ್ನು ಮತ್ತೆ ಮನು ಇದ್ದಲ್ಲಿ ಕಳಿಸೋ ಕಾರ್ಯದಲ್ಲಿ ಯಶಸ್ವಿಯಾಗಿದ್ದಾರೆ.


ಗಂಡ ಮನು ಜೊತೆ ಗೌರಮ್ಮ

ಆಯ್ತು ಹೆಣ್ಣಿಗೆ ಎಷ್ಟಂದ್ರೂ ತಾಳಿಕಟ್ಟಿದ ಗಂಡ ತಾನೇ ಸರ್ವಸ್ವ ಅಂತಾ ಗೌರಿ ತನ್ನ ಗಂಡನ ಮನೆಗೆ ಮಕ್ಕಳನ್ನು ಕರೆದುಕೊಂಡು ಹೋಗಿದ್ದಾಳೆ. ಅಷ್ಟೇ ಒಂದೆರಡು ದಿನ ಮನು ಸರಿಯಾಗಿಯೇ ಇದ್ದ. ನಂತರ ಮತ್ತೆ ಕುಡಿ ಹೊಡಿ ಬಡಿ ಶುರುಹಚ್ಚಿಕೊಂಡ. ಇದೆಲ್ಲಾ ಸರಿ ಹೊಂದಲ್ಲಾಂತ ಮತ್ತೆ ಗೌರಿ ತನ್ನ ತವರುಮನೆಗೆ ಹೋಗಿದ್ದಾಳೆ. ಆಗ ಮತ್ತೆ ಗೌರಿ ತಂದೆ, ತಾಯಿ ಸಂಬಂಧಿಕರು ಮನುಗೆ ಯಾಕೆ ಗಿರೆಗಮ ಎ್ತ ಹೊಡಿ ಬಡಿಯೋದು ಮಾಡುತ್ತಿದ್ದೀಯಾಂತ ಕೇಳಿದರೆ ಮನು ನನ್ನ ಹೆಂಡತಿ ನಾನು ಹೊಡಿತೀನಿ ಬಡೀತೀನಿ ನೀವ್ಯಾರು ಅದ್ನ ಕೇಳೋಕೆ ಅಂತ ಅವರನ್ನೇ ಗದರಿಸಿ ಕಳಿಸಿದ್ದಾನೆ.

ಅವತ್ತು 9-11-2024 ಮಧ್ಯಾಹ್ನ ಅಂದಾಜು ಎರಡು ಗಂಟೆ ಆಗಿರಬಹುದು. ಗೌರಿ ಮನು ಇದ್ದ ಮನೆಯಿಂದ ಜೋರಾಗಿ ಕಿರುಚಾಡೋ ಶಬ್ದ ಕೇಳಿ ಆ ಕೇರಿಯ ಎಲ್ಲ ಜನ ಹೋಗಿ ನೋಡಿದರೆ ಮನು ಒಂದು ಬಟ್ಟೆಯಿಂದ ಗೌರಿ ಕತ್ತಿಗೆ ಬಲವಾಗಿ ಬಿಗಿದು ಎಳೆದಿದ್ದ. ಅಲ್ಲಿದ್ದ ಗೌರಿ ಮಗು ವರ್ಷಾ ಜೋರಾಗಿ ಅಮ್ಮನ್ನ ಬಿಡು ಅಂತ ಗೋಗರೆಯುತ್ತಿದ್ದಳು. ತಕ್ಷಣ ಊರವರೆಲ್ಲಾ ಹೋಗಿ ಬಿಡಿಸಿ ನೋಡಿ ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಗೌರಿಯ ಪ್ರಾಣಪಕ್ಷಿ ಹಾರಿಹೋಗಿತ್ತು.


ಗ್ರಾಮ ಪಂಚಾಯಿತಿ ಸದಸ್ಯ
ಹನುಮಂತಪ್ಪ

ಒಂದು ಕ್ಷಣ ತಬ್ಬಿಬ್ಬಾದ ಮನು ಅಲ್ಲಿಂದ ಓಡಿ ಹೋಗಿದ್ದಾನೆ. ಆ ಕೂಡಲೇ ಅಲ್ಲಿಯ ಗ್ರಾಮಪಂಚಾಯಿತಿ ಸದಸ್ಯ ಹನುಮಂತಪ್ಪ ಮತ್ತು ಅಲ್ಲಿದ್ದವರೆಲ್ಲಾ ಡಾಕ್ಟರ್‌ಗೆಲ್ಲಾ ತೋರಿಸಿದ್ದಾರೆ. ಏನೂ ಪ್ರಯೋಜನವಾಗಿಲ್ಲ. ಅಷ್ಟರಲ್ಲೇ ಸುದ್ದಿ ತಿಳಿದ ಶಿಕಾರಿಪುರ ಗ್ರಾಮಾಂತರ ಠಾಣೆಯ ಸಿಪಿಐ ಆರ್.ಆರ್. ಪಾಟೀಲ ತಮ್ಮ ಸಿಬ್ಬಂದಿಗಳೊಂದಿಗೆ ಸ್ಥಳಕ್ಕೆ ಧಾವಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ. ನಂತರ ಶಿವಮೊಗ್ಗ ಜಿಲ್ಲಾ ಎಸ್ಪಿ ಮಿಥುನ್‌ಕುಮಾರ್, ಹೆಚ್ಚುವರಿ ಎಸ್ಪಿಗಳಾದ ಅನಿಲ್‌ಕುಮಾರ್ ಭೂಮರೆಡ್ಡಿ ಹಾಗೂ ಕಾರಿಯಪ್ಪ ಇವರ ನಿರ್ದೇಶನ, ಶಿಕಾರಿಪುರ ಡಿವೈಎಸ್ಪಿ ಕೇಶವರವರ ಮಾರ್ಗದರ್ಶನದಲ್ಲಿ ಶಿಕಾರಿಪುರ ಗ್ರಾಮಾಂತರ ಠಾಣೆಯ ಸಿಪಿಐ ಆರ್.ಆರ್. ಪಾಟೀಲ ಹಾಗೂ ಸಿಬ್ಬಂದಿಗಳು ಅಂಬ್ಲಿಗೋಳದಲ್ಲೇ ಅವಿತು ಕುಳಿತಿದ್ದ ಆರೋಪಿ ಮನುಕುಮಾರನನ್ನು ಬಂಧಿಸಿ ನ್ಯಾಯಾಂಗ ವಶಕ್ಕೊಪ್ಪಿಸಿದ್ದಾರೆ.

# ರಾಜ್ಯವನ್ನೇ ಬೆಚ್ಚಿಬೀಳಿಸುವ ಕಹಾನಿ

11 ☞

**ಬಾಲಕಿ ಬಳಿಕ, ತಾಯಿಯ ಹತ್ಯೆಗೂ ಯತ್ನ?**

ಮೇ 12 ರಂದು ಬಾಲಕಿ ಸಾಫ್ರೀನ್ ಸಾವನ್ನಪ್ಪಿದ್ದಳು. ಆದರೆ ಹಾವು ಕಚ್ಚಿದೆ ಎಂದು ಭಾವಿಸಿ ಕುಟುಂಬಸ್ಥರು ಮಣ್ಣು ಮಾಡಿದ್ದರು. ಆದರೆ ಎರಡು ತಿಂಗಳ ಬಳಿಕ ಅಂದ್ರೆ ಜುಲೈ 7 ರಂದು ಬಾಲಕಿಯ ತಾಯಿ ಶಾಬಾನಾಗೆ ಸಹೋದರ ಸಂಬಂಧಿಗಳಿಂದ ಒತ್ತಾಯಪೂರ್ವಕವಾಗಿ ವಿಷ ಉಣಿಸಲು ಯತ್ನ ನಡೆದಿತ್ತಂತೆ. ಈ ವೇಳೆ ವಿಷ ಹಾಕುತ್ತಿದ್ದ ಸಹೋದರ ಸಂಬಂಧಿಕ ಮಹಮ್ಮದ್ ವಂಟಿ ಹಾಗೂ ಆತನ ತಾಯಿ ರಜಾಕ್ಕಾ ನಿನ್ನ ಮಗಳಿಗೆ ಕರೆಂಟ್ ಕೊಟ್ಟು ಸಾಯಿಸಿದ್ದೇವೆ. ಅಂದೇ ನಿನ್ನನ್ನು ಕೊಲ್ಲುತ್ತಿದ್ದೆವು, ಆಗಲಿಲ್ಲ ಈಗ ಸಮಯ ಸಿಕ್ಕಿದೆ ಎಂದು ಹೇಳುತ್ತಲೇ ಬಾಟಲಿಯಲ್ಲಿದ್ದ ವಿಷ ಉಣಿಸಿದ್ದಾರಂತೆ. ಬಳಿಕ ಬಾಗಿಲು ಹಾಕಿಕೊಂಡು ಹೋಗಿದ್ದಾರೆ. ಆದರೆ ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾದ ಶಾಬಾನಾ ನಡೆದ ಘಟನೆ ವಿವರಿಸಿದ್ದಳು. ಈ ವೇಳೆ ಮಗಳು ಸತ್ತಿದ್ದು ಹಾವು ಕಚ್ಚಿದ್ದರಿಂದಲ್ಲ ಬದಲಿಗೆ ಕರೆಂಟ್ ಶಾಕ್ ನೀಡಿ ಕೊಲೆ ಮಾಡಿದ್ದಾರೆ ಎನ್ನುವ ವಿಚಾರವನ್ನ ಶಾಬಾನಾ ಬಾಯ್ಬಿಟ್ಟಿದ್ದಳು. ಶಾಬಾನ ವಿಷ ಪ್ರಾಶನವಾದ ಸಮಯ ಮಾತನಾಡಿದ ವಿಡಿಯೋ ದೃಶ್ಯಗಳನ್ನ ಪತಿ ಸಲೀಂ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದ.



**ಬಾಲಕಿ ಶವ ಪರೀಕ್ಷೆಗೆ ಡಿಜಿ ಆದೇಶ**

ಬಾಲಕಿ ಸಾಫ್ರೀನ್ ಸಾವು ಅಸಹಜ ಎನ್ನುವ ವಿಚಾರವಾಗಿ ಸಂಬಂಧಿಕರ ವಿರುದ್ಧ ದೂರು ನೀಡಲು ಚಡಚಣ ಠಾಣೆಗೆ ತಂದೆ ಸಲೀಂ ತಾಯಿ ಶಾಬಾನಾ ಹೋಗಿದ್ದರು. ಆದರೆ ಪೊಲೀಸರು ದೂರು ಸ್ವೀಕರಿಸಿಲ್ಲ, ಸರಿಯಾಗಿ ತನಿಖೆ ನಡೆಸಿಲ್ಲ ಎಂದು ಸಲೀಂ ದೂರಿದ್ದಾರೆ. ಬಳಿಕ ಮಗಳ ಸಾವಿನ ಬಗ್ಗೆ ಇದ್ದ ಅನುಮಾನ ಹಾಗೂ ಪತ್ನಿಯ ಹತ್ಯೆಗೆ ನಡೆದ ಯತ್ನ ಬಗ್ಗೆ ಬೆಂಗಳೂರು ಪೊಲೀಸ್ ಮಹಾನಿರ್ದೇಶಕರಿಗೆ ದೂರು ನೀಡಿದ್ದಾರೆ. ಪ್ರಕರಣವನ್ನ ಗಂಭೀರವಾಗಿ ಪರಿಗಣಿಸಿದ ಪೊಲೀಸ್ ಮಹಾನಿರ್ದೇಶಕರು ಸಾಫ್ರೀನ್ ಶವ ಪರೀಕ್ಷೆಗೆ ಆದೇಶ ನೀಡಿದ್ದರು. ಈ ಆದೇಶದ ಅನ್ವಯ ಮೊನ್ನೆಯಷ್ಟೆ ಶವ ಪರೀಕ್ಷೆ ನಡೆದಿದೆ. ಶವ ಪರೀಕ್ಷೆಯ ವರದಿ ಬಂದ ಮೇಲೆ ಅಸಲಿ ವಿಚಾರ ಬಯಲಿಗೆ ಬರಲಿದೆ.



-ರಾಜೀವ್ ಭೈರಿ

# ಪಾತಕ ಪ್ರಪಂಚ

# ಸೈಕೋ ಸ್ಯಾಂಡ್ರಮ್!

ಸ್ಥಳ-ಪಂಜಾಬ್ ರಾಜ್ಯ

ವಿಲಕ್ಷಣಗಾರ-ಕೇವಲ್‌ಸಿಂಗ್

ಕಾಲಾವಧಿ-2010ರಿಂದ 2012

●●●

ನ್ಯಾಯಾಲಯ ಅವನಿಗೆ ಕಡಿಮೆ ಪ್ರಮಾಣದಲ್ಲಿ ಶಿಕ್ಷೆ ನೀಡಿದೆ. ಅವನೇನು ಮಹತ್ತರವಾದ ಅಪರಾಧ ಮಾಡಿರಲಿಲ್ಲ.

ಅವನು ನಿರಪರಾಧಿ. ಆದರೂ ಅವನಿಗೆ ಶಿಕ್ಷೆ ಆಗಿದೆ. ಶಿಕ್ಷೆಗೆ ಕಾರಣ ಏನು? ಯಾವ ತಪ್ಪಿಗೆ ಈ ಶಿಕ್ಷೆ?

●●●

ಆ ರಾಜ್ಯದ ಮುಖ್ಯ ಕೇಂದ್ರದಲ್ಲಿರುವ ಪೊಲೀಸ್ ಸ್ಟೇಷನ್‌ಗೆ ಪಾರ್ಸಲ್ ಬಂದಿತು. ಅಂಚೆ ಇಲಾಖೆಯಿಂದ ಬಂದಿಲ್ಲ. ಕೋರಿಯರ್ ಮೂಲಕ ಬಂದಿಲ್ಲ.

ಪೊಲೀಸರಿಗೆ ತಿಳಿಯದಂತೆ ಯಾರೋ ಒಬ್ಬರು ಆ ಕವರ್ ಅನ್ನು ತಂದು ಸ್ಟೇಷನ್‌ನಲ್ಲಿರುವ ಟೇಬಲ್ ಮೇಲೆ ಇಟ್ಟು ಹೋಗಿದ್ದರು.

ಪೊಲೀಸ್ ಅಧಿಕಾರಿ ರತನ್‌ಸಿಂಗ್ ಗಡುಸಾಗಿ ವಿಚಾರಣೆ ಮಾಡಿದನು.

''ಈ ಕವರ್ ತಂದಿಟ್ಟವರು ಯಾರು?''

''ಯಾರೂ ಅಂತ ಗೊತ್ತಿಲ್ಲ ಸಾರ್.''

''ಸಿ.ಸಿ. ಕ್ಯಾಮರಾ ವರ್ಕ್ ಆಗುತ್ತಿದೆ ತಾನೇ?''

''ಆಗುತ್ತಿದೆ ಸಾರ್.''

''ಹಾಗಾದರೆ ಈಗಲೇ ಕ್ಯಾಮರಾದಲ್ಲಿರೋ ಆ ವೀಡಿಯೋ ಕ್ಲಿಪ್ ತೆಗೆದು ನೋಡಿ'' ಎಂದಾಗ ಹೆಡ್‌ಕಾನ್ ಸ್ಟೇಬಲ್ ಪಿ.ಸಿ.ಗಳ ಸಹಾಯದಿಂದ ಆ ಕೆಲಸ ಮಾಡಿದರು ಮತ್ತು ಪ್ಲೇ ಮಾಡಿ ನೋಡಿದರು. ಸುಮಾರು ಹನ್ನೆರಡು ವರ್ಷದ ಹುಡುಗ ಒಳಗೆ ಬಂದು ಟೇಬಲ್ ಮೇಲೆ ಕವರ್ ಇಟ್ಟು ಬೇಗ ಬೇಗ ಹೊರಗೆ ಹೋದರು.

ಪೊಲಿಸರು ಆ ಬಾಲಕನನ್ನು ಕೇವಲ ಎರಡು ಗಂಟೆಗಳಲ್ಲಿ ಪತ್ತೆ ಮಾಡಿದರು. ಪಾಪ... ಬಾಲಕ ನಡುಗುತ್ತಿದ್ದಾನೆ. ಅವನ ಹೇಳಿಕೆ ಏನು? ಇವನು ಆಟ ಆಡುತ್ತಿದ್ದಾಗ ಯಾರೋ ಕಾರಲ್ಲಿ ಬಂದು, ಇವನಿಗೆ ನೂರು ರೂಪಾಯಿ ಹಣ ಕೊಟ್ಟು ಕವರ್ ಅನ್ನು ಪೊಲೀಸ್ ಸ್ಟೇಷನ್‌ನಲ್ಲಿ ಇಟ್ಟು ಬರಲು ಹೇಳಿದ್ದರೆ'' ಎಂದನು.

ಅವರ್‍ಯಾರು, ಹೇಗಿದ್ದರು ಮತ್ತು ಕಾರಿನ ನಂಬರ್ ಏನು ಅಂತ ಪ್ರಶ್ನೆ ಮಾಡಿದರು. ಆಟದ ಗಮನದಲ್ಲಿದ್ದ ಆ ಬಾಲಕ ಇದ್ಯಾವುದನ್ನು ಗಮನಿಸಿರಲಿಲ್ಲ.

ಬಾಲಕನನ್ನು ಬಿಡುಗಡೆ ಮಾಡಲಾಯಿತು. ಪೊಲೀಸ್ ಅಧಿಕಾರಿ ಕವರ್ ಓಪನ್ ಮಾಡಿ ನೋಡಿದ ಕೂಡಲೇ ಗಾಬರಿಯಾದನು. ಎಂಟು ಫೋಟೋಗಳಿವೆ!

●●●

''ನಮಸ್ಕಾರ ಸಾರ್.''

ಯಾವುದೋ ಕೇಸಿನ ವಿಚಾರವಾಗಿ ಫೈಲ್‌ಗಳನ್ನು ನೋಡುತ್ತಿದ್ದ ಅಧಿಕಾರಿ ರತನ್‌ಸಿಂಗ್ ಧ್ವನಿ ಕೇಳಿ ಈಗ ತಲೆ ಎತ್ತಿ ನೋಡಿದರು.

ವೃದ್ಧ ದಂಪತಿಗಳು ಮತ್ತು ಮತ್ತೊಬ್ಬ ಯುವಕ ನಿಂತಿದ್ದಾರೆ. ಎಲ್ಲರೂ ಆತಂಕಗೊಂಡಿದ್ದಾರೆ. ಅವರನ್ನು ಕುಳಿತುಕೊಳ್ಳಲು ಹೇಳಿ ಕಾರಣ ಏನು ಅಂತ ಕೇಳಿದನು. ಮಿಸ್ಸಿಂಗ್ ಕಂಪ್ಲೆಂಟ್ ಕೊಡಲು ಬಂದಿದ್ದಾರೆ ಎಂದು ಅವರಿಂದ ತಿಳಿಯಿತು.

''ಕಣ್ಮರೆಯಾಗಿರೋದು ಯಾರು?''

''ಮಗಳು ಶ್ರೀಮಲ್ಲಿಕ.''

''ಅವಳು ಕಣ್ಮರೆಯಾಗಿದ್ದು ಯಾವಾಗ?''

''ಅವಳ ಫ್ರೆಂಡ್ ಬರ್ತ್‌ಡೇ ಅಂತ ಸಂಜೆ ಅಂದರೆ ಭಾನುವಾರ ಹೋಗಿದ್ಲು. ಪುನಹ ಮನೆಗೆ ಬರಲಿಲ್ಲ ಸಾರ್.''

''ಯಾವ ಫ್ರೆಂಡ್ ಮನೆಗೆ ಹೋಗಿದ್ಲು? ಅವರನ್ನ ವಿಚಾರಿಸಿದ್ರಾ?''

''ಇವಳ ಜೊತೆ ಕಾಲೇಜಿನಲ್ಲಿ ಓದುತ್ತಿದ್ದ ರೇವತಿ ಮನೇಲಿ ಅವಳ ಬರ್ತ್‌ಡೇ ಫಂಕ್ಷನ್ ಇತ್ತು. ಫಂಕ್ಷನ್ ಮುಗಿದ ಮೇಲೆ ಮಲ್ಲಿಕ ಗೆಳತಿಗೆ ಹೇಳಿ ಮನೆಗೆ ಹೊರಟಳು ಅಂತ ಹೇಳಿದ್ಲು.''

''ಅವಳ ಜೊತೆ ಯಾರಿದ್ರು?''

''ಯಾರೂ ಇರಲಿಲ್ಲ ಸಾರ್.''

''ರೇವತಿಯ ಫೋನ್ ನಂಬರ್ ಮತ್ತು ಅಡ್ರೆಸ್ ಕೊಡಿ'' ಎಂದು ಹೇಳಿದಾಗ ಪಿ.ಸಿ. ಎಲ್ಲರನ್ನೂ ಸಹ ನೋಟ್ ಮಾಡಿಕೊಂಡನು.

''ನಿಮ್ಮ ಮಗಳು ಲವ್ ಮಾಡಿದ್ಲಾ?''

''ಯಾಕೆ ಸಾರ್ ಈ ರೀತಿ ಕೇಳ್ತಾ ಇದ್ದೀರ?''

''ಈ ಕಾಲದ ಯುವತಿಯರು ಮನೆಯವರು ಮದುವೆಗೆ ಒಪ್ಪಲಾರರು ಅಂತ ಪ್ರಿಯತಮನ ಜೊತೆ ಓಡಿ ಹೋಗ್ತಾರೆ.''

''ನಮಗೆ ತಿಳಿದಂತೆ ಮಲ್ಲಿಕ ಯಾರನ್ನೂ ಲವ್ ಮಾಡುತ್ತಿರಲಿಲ್ಲ.''

''ನಿಮಗೆ ತಿಳಿಯದಂತೆ ಮಾಡಿರಬಹುದಲ್ಲ.''

ಮನೆಯವರು ಚಡಪಡಿಸಿದರು.

''ಅವಳ ಆತ್ಮೀಯ ಗೆಳತಿಯರು ಮತ್ತು ಹತ್ತಿರದ ಸಂಬಂಧಿಕರ ಡೀಟೈಲ್ಸ್ ಕೊಡಿ. ಮನೆಯವರ ಹತ್ತಿರ ಹೇಳಲಾಗದ್ದನ್ನು ಆತ್ಮೀಯರ ಹತ್ತಿರ ಹೇಳಿಕೊಂಡಿರು ತ್ತಾರೆ.''

ಮಲ್ಲಿಕಾಳ ತಂದೆ-ತಾಯಿ ಮತ್ತು ಅಣ್ಣ ಮಾತಾಡಿ ಕೊಂಡ ನಂತರ ಕೆಲವರ ವಿಳಾಸ ಮತ್ತು ಫೋನ್ ನಂಬರ್ ಕಟ್ಟರು. ನಂತರ ಪೊಲೀಸ್ ಅಧಿಕಾರಿ ''ನಿಮ್ಮ ಮಗಳ ಫೋಟೋ ಕೊಟ್ಟು ಕಂಪ್ಲೆಂಟ್ ಬರೆದುಕೊಡಿ'' ಎಂದನು.

ಇದನ್ನು ನಿರೀಕ್ಷೆ ಮಾಡಿದ್ದರಿಂದ ಮಲ್ಲಿಕಾಳ ಪಾಸ್ ಪೋರ್ಟ್ ಮತ್ತು ಪೋಸ್ಟ್‌ಕಾರ್ಡ್ ಸೈಜ್ ಫೋಟೋಗಳನ್ನು ಕೊಟ್ಟರು. ಪೊಲೀಸ್ ಅಧಿಕಾರಿ ರತನ್‌ಸಿಂಗ್ ಆ ಫೋಟೋ ನೋಡಿದನು. ಏನೋ ಅನುಮಾನ ಬಂದಿತು. ಮತ್ತೊಮ್ಮೆ ನೋಡಿದನು.

ಟೇಬಲ್ ಲಾಕರ್‌ನಲ್ಲಿದ್ದ ಕವರ್ ಹೊರಗೆ ತೆಗೆದನು. ಯಾರೋ ಅನಾಮಿಕ ಆಟ ಆಡುತ್ತಿದ್ದ ಹುಡುಗನಿಗೆ ನೂರು ರೂಪಾಯಿ ಕೊಟ್ಟು ಈ ಕವರ್‌ನ ಪೊಲೀಸ್ ಸ್ಟೇಷನ್‌ಗೆ ತಲುಪಿಸು ಎಂದು ಹೇಳಿ ಪ್ರಚೋದಿಸಿದ್ದನು. ಆ ಹುಡುಗ ತಂದುಕೊಟ್ಟಿದ್ದ ಕವರ್‌ನಲ್ಲಿ ಎಂಟು ಫೋಟೋಗಳಿವೆ.

ರತನ್‌ಸಿಂಗ್ ತುಂಬಾ ಮೆಲ್ಲಗೆ ''ನೀವು ಈಗ ಧೈರ್ಯ ತಂದುಕೊಳ್ಳಬೇಕು'' ಎಂದು ಹೇಳಿ ಮಲ್ಲಿಕಾಳ ಅಣ್ಣನನ್ನು ಕರೆದು ''ನೀನು ಈ ಫೋಟೋಗಳನ್ನು ನೋಡು'' ಎಂದನು.

ಎಲ್ಲರಿಗೂ ಆತಂಕವಾಗುತ್ತಿದೆ. ಅಣ್ಣ ಫೋಟೋಗಳನ್ನು ನೋಡಿದನು. ಅವನ ಮುಖ ಬಿಳುಚಿಕೊಳ್ಳುತ್ತಿದೆ.

ಮತ್ತೊಮ್ಮೆ ಸರಿಯಾಗಿ ನೋಡಿದನು.

''ಡ್ಯಾಡಿ... ಮಮ್ಮಿ... ಮಲ್ಲಿಕ... ಮಲ್ಲಿಕ ಬದುಕಿಲ್ಲ...'' ಎಂದು ಹೇಳಿ ಅವರಿಗೆ ಈ ಎಲ್ಲಾ ಫೋಟೋಗಳನ್ನು ತೋರಿಸಿದನು.

ಕೊಲೆಯ ದೃಶ್ಯದ ಫೋಟೋಗಳು!

ಮಲ್ಲಿಕಾಳ ದೇಹ ನೆಲದ ಮೇಲೆ ಬಿದ್ದಿದೆ. ಅವಳ ಎದೆ ಭಾಗದಿಂದ ರಕ್ತ ಹರಿದು ನೆಲ ಸೇರಿದೆ. ಡೆಡ್‌ಬಾಡಿಯ ಬಲಭಾಗದಲ್ಲಿ ರಕ್ತದ ಕಲೆ ಆಗಿರುವ ಉದ್ದವಾದ ಮತ್ತು ದಪ್ಪ ಹಿಡಿಯ ಚಾಕು ಕಂಡು ಬರುತ್ತಿದೆ.

ತಂದೆ ದುಃಖ, ಭಾವೋನ್ಮಾದದಿಂದ ''ಸಾರ್... ಸಾರ್... ನನ್ನ ಮಗಳನ್ನು ಕೊಲೆ ಮಾಡಿರೋದು ಯಾರು? ಯಾಕೆ ಕೊಲೆ ಮಾಡಿದ್ದಾರೆ'' ಎಂದು ಪರಿತಪಿಸುತ್ತಾ ಅಳುತ್ತಿದ್ದಾರೆ.

ಆ ತಾಯಿಯ ಕರುಳ ಸಂಕಟ ಕಂಬನಿ ರೂಪದಲ್ಲಿ ಬರುತ್ತಿದೆ. ಅಣ್ಣ ಮಂಕಾಗಿದ್ದಾನೆ.

ಪೊಲೀಸ್ ಅಧಿಕಾರಿ ರತನ್‌ಸಿಂಗ್ ''ಕೊಲೆ ಎಲ್ಲಿ ನಡೆದಿದೆ? ಡೆಡ್‌ಬಾಡಿ ಎಲ್ಲಿದೆ ಅಂತ ಗೊತ್ತಿಲ್ಲ. ಅವಳ ಫೋಟೋಗಳನ್ನು ಮಾತ್ರ ಕಳಿಸಿದ್ದಾನೆ ಕೊಲೆಗಾರ. ನಾವು ತನಿಖೆ ಪ್ರಾರಂಭ ಮಾಡಿ ಬೇಗ ರಹಸ್ಯ ಪತ್ತೆ ಮಾಡ್ತೀನಿ'' ಎಂದನು.

ಹೆತ್ತವರು ದುಃಖದಿಂದ ಪ್ರಲಾಪಿಸುತ್ತಲೇ ಪೊಲೀಸ್ ಸ್ಟೇಷನ್‌ನಿಂದ ಹೊರಟರು.

ರತನ್‌ಸಿಂಗ್ ಚಿಂತಿಸುತ್ತಿದ್ದಾನೆ. ಫೋಟೋಗಳನ್ನು ಗಮನಿಸುತ್ತಿದ್ದಾನೆ. ಈ ಪ್ರಕರಣದ ಬಗ್ಗೆ ಸಣ್ಣ ಸುಳಿವೂ ಸಹ ಪತ್ತೆ ಆಗಿಲ್ಲ.

●●●

ಎರಡು ದಿನಗಳ ನಂತರ ಬೆಳಗಿನ ಹನ್ನೊಂದು ಗಂಟೆ ಸಮಯದಲ್ಲಿ ಸುಮಾರು ಐವತ್ತರ ಪ್ರಾಯದ ವ್ಯಕ್ತಿ ಬಂದು ಸೀಲ್ ಮಾಡಿರುವ ಕವರ್ ಅನ್ನು ಕೊಡುತ್ತಾ ''ಸಾರ್... ನಿಮ್ಮ ಇಲಾಖೆಯ ಅಧಿಕಾರಿಯೊಬ್ಬರು ನಿಮಗೆ ತಲುಪಿಸಲು ಹೇಳಿ ನನಗೆ ಕೊಟ್ಟಿದ್ದಾರೆ ಸಾರ್.''

ರತನ್‌ಸಿಂಗ್‌ಗೆ ಆಶ್ಚರ್ಯವಾಯಿತು. ಅವನು ''ನಿಮ್ಮ ಹೆಸರೇನು?''

''ಧೀರಜ್‌ಸಿಂಗ್.''

''ಈ ಕವರ್ ನಿಮಗೆ ಎಲ್ಲಿ, ಯಾವಾಗ ಕೊಟ್ಟರು'' ಎಂದು ಕೇಳಿದನು.

''ಜೋಗಿಂದರ್ ಸರ್ಕಲ್‌ನಲ್ಲಿ ಹತ್ತು ನಿಮಿಷಗಳ ಹಿಂದೆ ಕೊಟ್ಟರು.''

ರತನ್‌ಸಿಂಗ್ ಆಶ್ಚರ್ಯದಿಂದ ''ಅರೆ... ಆ ಸರ್ಕಲ್ ನಿಂದ ಇಲ್ಲಿಗೆ ಬರಲು ಕೇವಲ ಹತ್ತು ನಿಮಿಷ ಸಾಕು. ಇಲ್ಲಿಯತನಕ ಬಂದಿದ್ದ ಇಲಾಖೆಯವರು ಸ್ಟೇಷನ್‌ಗೆ ಬಂದು ಕವರ್ ಕೊಡದೆ ನಿಮ್ಮ ಹತ್ತಿರ ಯಾಕೆ ಕೊಟ್ಟು ಕಳಿಸಿದ್ರು?''

''ನನಗೇನು ಗೊತ್ತು ಸಾರ್.''

''ಅವರು ಕಾರಲ್ಲಿ ಬಂದಿದ್ರಾ?''

''ಹೌದು ಸಾರ್.''

''ನಂಬರ್ ನೋಡಿದ್ರಾ?''

''ಪೊಲೀಸ್ ಅಧಿಕಾರಿ ಅಂತ ಹೇಳಿದ್ದರಿಂದ ನಾನು ಆ ಕಾರಿನ ನಂಬರ್ ಗಮನಿಸಲಿಲ್ಲ.''

''ಆ ವ್ಯಕ್ತಿ ಹೇಗಿದ್ರು?''

''ನಲವತ್ತರ ಪ್ರಾಯ ಆಗಿರಬಹುದು. ಅವರ ಉಡುಪು ಮತ್ತು ಚಿನ್ನದ ಸರ, ಬ್ರೇಸ್‌ಲೆಟ್ ಮತ್ತು ಉಂಗುರಗಳನ್ನು ಹಾಕಿಕೊಂಡಿದ್ರು. ಬೆಲೆಬಾಳುವ ಕಾರಲ್ಲಿ ಬಂದಿದ್ರು?''

''ರೋಸ್ ಕಲರ್ ಇನೋವಾ ಕಾರ್.''

''ಬೇರೆ ಏನಾದ್ರು ನೆನಪಾದ್ರೆ, ಹೇಳಿ'' ಎಂದು ಪಿ.ಸಿ.ಯನ್ನು ಕರೆದು ಅವರಿಗೆ ಟೀ ತರಿಸಿಕೊಡಲು ಹೇಳಿದ ನಂತರ 'ಇವರು ಹೇಳುವುದನ್ನು ರೆಕಾರ್ಡ್ ಮಾಡಿಕೋ'' ಎಂದಾಗ ಆ ವ್ಯಕ್ತಿ ಅಲ್ಲಿಂದ ಹೊರಟನು.

ರತನ್‌ಸಿಂಗ್‌ಗೆ ಅನುಮಾನ ಬರುತ್ತಿದೆ. ಆದರೆ ಆ ಪಾರ್ಸಲ್ ಸ್ವಲ್ಪ ಭಾರವಾಗಿತ್ತು. ಅದನ್ನು ಓಪನ್ ಮಾಡಿದನು. ಅದರಲ್ಲಿ ಆಡಿಯೋ ಸಿ.ಡಿ. ಇದೆ! ಚೇಂಬರ್ ನ ಡೋರ್‌ಲಾಕ್ ಮಾಡಿ ಆಡಿಯೋ ಪ್ಲೇ ಮಾಡಿ ಕೇಳುತ್ತಿದ್ದಾರೆ. ಹೆಣ್ಣಿನ ಧ್ವನಿ ಕೇಳುತ್ತಿದೆ.

''ಬೇಡ... ಬೇಡ... ನನಗೇನೂ ಮಾಡ್ಬೇಡ'' ಎಂದು ಕಿರುಚುವ ರೀತಿ ಹೇಳುತ್ತಿದ್ದಾಳೆ.

ಗಂಡಸಿನ ನಗು ಕೇಳಿಬರುತ್ತಿದೆ. ಗಹಿಗಹಿ ನಗುತ್ತಿದ್ದಾನೆ.

ಕಿಟಾರನೆ ಕಿರುಚಿದಳು.

ಬಳೆಗಳ ಶಬ್ದ... ಗೆಜ್ಜೆಗಳ ಶಬ್ದ ಕೇಳಿ ಬರುತ್ತಿದೆ.

''ಏ... ಏ... ಬೇಡ... ನನ್ನನ್ನು ಕೊಲೆ ಮಾಡ್ಬೇಡ...'

''ನಾನು... ನಾನು... ಟಿ.ವಿ. ಚಾನಲ್‌ನ ಆ್ಯಂಕರ್. 'ಸಂಡೆ ಸ್ಪೆಷಲ್' ಎಂಬ ಪ್ರೋಗ್ರಾಂ ಆ್ಯಂಕರ್ ಮಾಡ್ತೀನಿ. ನಾನು ನಾಳೆ ಚಾನಲ್ ಶೂಟಿಂಗ್‌ಗೆ ಹೋಗಬೇಕು. ನನ್ನನ್ನು ಕೊಲೆ ಮಾಡ್ಬೇಡ. ಪ್ಲೀಸ್ ಬಿಟ್ಟುಬಿಡು.''

ಗಂಡಸಿನ ಗೊಗ್ಗರು ಧ್ವನಿ ಕೇಳಿ ಬಂದಿತು. ''ನೀನು ಆ್ಯಂಕರ್ ಪ್ರಲಂಗನ ಅಲ್ವ? ನಿನಗೆ ಅಹಂಕಾರ ಜಾಸ್ತಿ. ನೀನು ಬದುಕಿರಬಾರದು.''

ಕ್ಷಣಗಳು ಉರುಳುತ್ತಿದೆ. ಆಗ ಕೇಳಿ ಬಂದಿತು. ಪ್ರಾಣಾಂತಿಕ ಕೂಗು!

ಪೊಲೀಸ್ ಅಧಿಕಾರಿ ಟೇಪ್ ರೆಕಾರ್ಡರ್ ಆಫ್ ಮಾಡಿದನು. ಇಂತಹ ವಿಲಕ್ಷಣ ಪ್ರಕರಣಗಳು ಅವನ ಸರ್ವೀಸ್‌ನಲ್ಲಿ ನಡೆದಿರಲಿಲ್ಲ. ಈಗ ತಲೆ ಬಿಸಿಯಾಗಿದೆ.

ಕೂಡಲೇ 'Z' ಚಾನಲ್‌ಗೆ ಫೋನ್ ಮಾಡಿ ಪ್ರಲಂಗನ ಎಂಬ ಆ್ಯಂಕರ್ ಬಗ್ಗೆ ಕೇಳಿದನು. ಪ್ರೋಗ್ರಾಂ ಡೈರೆಕ್ಟರ್ ''ಸಾರ್... ನಾಳೆ ಶೂಟಿಂಗ್ ಇದೆ. ಬೆಳಿಗ್ಗೆ ಹತ್ತು ಗಂಟೆಗೆ ಬರ್ತಾರೆ. ಸಂಜೆತನಕ ಶೂಟಿಂಗ್ ನಡೆಯುತ್ತೆ'' ಎಂದರು.

'ಆರ್ ಯೂ ಶ್ಯೂರ್?''

''ಯಾಕೆ ಸಾರ್ ಹೀಗೆ ಕೇಳ್ತಾ ಇದ್ದೀರ?''

''ಕಾರಣ ಇಲ್ಲದೆ ಕೇಳಲ್ಲ. ಅವಳ ಮನೆ ಫೋನ್ ನಂಬರ್ ಕೊಡಿ.''

''ಸಾರ್... ಎನಿಥಿಂಗ್ ಲಾಂಗ್.''

''ನಾಳೆ ಹತ್ತು ಗಂಟೆಗೆ ಆಕೆ ಬಂದ ಮೇಲೆ ಹೇಳ್ತೀನಿ.''

ಪ್ರಲಂಗನ ಫೋನ್ ನಂಬರ್ ಮತ್ತು ಮನೆ ವಿಳಾಸ ನೀಡಿದರು.

ಪೊಲೀಸ್ ಅಧಿಕಾರಿ ರತನ್‌ಸಿಂಗ್ ಫೋನ್ ಮಾಡಿದಾಗ ಪ್ರಲಂಗನಳ ತಾಯಿ ಮಾತಾಡಿದರು. ''ನಾನು ಪೊಲೀಸ್ ಆಫೀಸರ್ ರತನ್‌ಸಿಂಗ್. ಜೋಹಾರ್ ಸ್ಟೇಷನ್‌ನಿಂದ ಮಾತಾಡ್ತಾ ಇದ್ದೀನಿ.''

ಆ ತಾಯಿ ಗಾಬರಿಯಾದರು.

''ಸಾರ್... ಯಾಕೆ... ಏನಾಗಿದೆ? ನನ್ನ ಹಸ್ಬೆಂಡ್ ಮತ್ತು ಮಗಳು ಮನೇಲಿ ಇಲ್ಲ. ಅವರಿಗೇನಾದರೂ ತೊಂದರೆ ಆಗಿದ್ಯಾ?''

''ನಿಮ್ಮ ಹಸ್ಬೆಂಡ್ ಮನೆಗೆ ಬರ್ತಾರೆ ಬಿಡಿ. ಒಮ್ಮೆ ಮಗಳು ಪ್ರಲಂಗನ ಎಲ್ಲಿ?''

''ಅವಳು ಬೆಳಿಗ್ಗೆ ಹತ್ತು ಗಂಟೆಗೆ ನನ್ನ ತಂಗಿ ಮನೆಗೆ ಹೋದ್ಲು.'

''ಅಲ್ಲಿಯತನಕ ಮನೇಲಿ ಇದ್ಲಾ?''

''ಹೌದು ಸಾರ್.''

''ಆಡಿಯೋ ಪ್ಲೇಯರ್ ನನಗೆ ಹನ್ನೆರಡು ಗಂಟೆಗೆ ತಲುಪಿದೆ. ಅವಳನ್ನು ಅಪಹರಿಸಿ ಕೊಲೆ ಮಾಡಲು ಪ್ರಯತ್ನ ಮಾಡಿದ್ದಾರೆ.

ಅಂದರೆ ಪ್ರಲಂಗನ ಆಂಟಿ ಮನೆಗೆ ಹೋಗುತ್ತಿದ್ದಾಗ ಅಪಹರಿಸಿ ಕೊಲೆ ಮಾಡಿದ್ದಾರೆ. ಆಕೆಯ ಧ್ವನಿಯನ್ನು ರೆಕಾರ್ಡ್ ಮಾಡಿ ಕಳಿಸಿದ್ದಾರೆ. ಎರಡು ದಿನಗಳ ಹಿಂದೆ ಮಲ್ಲಿಕಾಳನ್ನು ಕೊಲೆ ಮಾಡಿ, ಡೆಡ್‌ಬಾಡಿಯ ಫೋಟೋ ತೆಗೆದು ಕಳಿಸಿದ್ದರು. ಇವತ್ತು ಆ ಆ್ಯಂಕರ್ ಪ್ರಲಂಗನ ಪ್ರಾಣಾಂತಿಕ ಕೂಗನ್ನು ರೆಕಾರ್ಡ್ ಮಾಡಿದ್ದಾರೆ.

ಇದನ್ನೆಲ್ಲಾ ಮಾಡುತ್ತಿರೋದು ಯಾರು? ಇವರ ಉದ್ದೇಶ ಏನು? ಕೊಲೆ ಮಾಡಿದವರೇ ಅದನ್ನು ರಹಸ್ಯವಾಗಿ ಡುತ್ತಾ ವಿನಹ, ಈ ರೀತಿ ಪೊಲೀಸರಿಗೆ ಕಳಿಸಿ ಚೆಲ್ಲಾಟ ಆಡೋಲ್ಲ. ಇದರ ಹಿನ್ನೆಲೆ ಏನು?

ಪ್ರಲಂಗನಳ ತಾಯಿ ಗಾಬರಿಯಾದರು. ''ಸಾರ್... ಸಾರ್... ಯಾಕೆ ಮಾತಾಡುತ್ತಿಲ್ಲ'' ಎಂದು ಕೇಳಿದರು.

ಗಾಬರಿಯಾಗಬೇಡಿ ಮೇಡಂ. ನಿಮ್ಮ ತಂಗಿ ಮನೆಯ ವಿಳಾಸ ಮತ್ತು ಫೋನ್ ನಂಬರ್ ಕೊಡಿ.''

☞14

13 ☞

ಪ್ರಲಂಗನ ತಾಯಿ ಎಲ್ಲಾ ವಿವರಗಳನ್ನು ನೀಡಿದ ನಂತರ "ಸಾರ್... ನನ್ನ ಮಗಳಿಗೆ ಏನೂ ತೊಂದರೆ ಆಗಿಲ್ಲ ತಾನೆ?''

ಪೊಲೀಸ್ ಅಧಿಕಾರಿ ರತನ್‌ಸಿಂಗ್ ಆಕೆಯನ್ನು ಸಮಾಧಾನ ಮಾಡಿದನು. ಫೋನ್ ಮಾಡದೆ ಪ್ರಲಂಗನಳ ತಾಯಿಯ ತಂಗಿ ಅಂದರೆ ಆಂಟಿ ಮನೆಗೆ ಪೊಲೀಸ್ ವಾಹನದಲ್ಲಿ ಹೊರಟನು.

ಎಡ-ಬಲಗಭಾಗದಲ್ಲಿ ಖಾಲಿ ಸೈಟುಗಳಿವೆ. ನಡುವೆ ತುಂಬಾ ಸೊಗಸಾಗಿ ಮನೆ ಕಟ್ಟಿದ್ದಾರೆ. ಜೀಪಿನಿಂದ ಇಳಿದು ಈ ಪೊಲೀಸ್ ಅಧಿಕಾರಿ ಹೋಗುತ್ತಿದ್ದಾನೆ.

ಇದನ್ನು ಕಿಟಕಿಯ ಮೂಲಕ ನೋಡಿದ ಪ್ರಲಂಗನಳ ಆಂಟಿ ಗಾಬರಿಯಾದರು. ಅಲ್ಲಿ ಬೇರೆ ಯಾರಿದ್ದಾರೆ. ಅಂಕಲ್ ಮತ್ತು ಇಬ್ಬರು ಮಕ್ಕಳು. ಎಲ್ಲರೂ ಗಾಬರಿಯಿಂದ ಈಗ ಪರಸ್ಪರ ಮುಖ ನೋಡಿಕೊಂಡರು. ಪೊಲೀಸ್ ಅಧಿಕಾರಿ ಬೆಲ್ ಮಾಡುವ ಮೊದಲೇ ಆಂಟಿ ಡೋರ್ ಓಪನ್ ಮಾಡಿದರು. ರತನ್‌ಸಿಂಗ್ ತುಂಬಾ ಸೂಕ್ಷ್ಮವಾಗಿ ಆ ಮನೆಯ ಎಲ್ಲಾ ಕಡೆ ಕಣ್ಣಾಡಿಸಿದನು ಮತ್ತು ಅಲ್ಲಿದ್ದವರನ್ನು ಪರೀಕ್ಷೆ ಮಾಡುವ ರೀತಿ ನೋಡಿದನು.

"ನಿಮ್ಮ ಹೆಸರೇನು?''

ಆಕೆ ''ನಂದಿತ ಸಿಂಗ್'' ಎಂದ ಗಂಡನ ಕಡೆ ಕೈ ತೋರಿಸಿ 'ನವಜೋತ್‌ಸಿಂಗ್'' ಎಂದು ಹೇಳಿ ಮಕ್ಕಳ ಪರಿಚಯ ಮಾಡಿಸಿದ ನಂತರ 'ಇನ್ಸ್‌ಪೆಕ್ಟರ್... ನೀವು ಕಾರಣ ಇಲ್ಲದೆ ಇಲ್ಲಿಗೆ ಬಂದಿಲ್ಲ, ನಮ್ಮಿಂದ ಏನಾಗಬೇಕು ಅಂತ ಹೇಳಿ.''

''ಪ್ರಲಂಗನ ಬೇಕು.'

ಆಕೆ ಗಾಬರಿಯಿಂದ ''ವಾಟ್... ಪ್ರಲಂಗನ'' ಎಂದು ಉದ್ಗರಿಸುವ ರೀತಿ ಕೇಳಿದರು.

"ನಿಮ್ಮ ತಂಗಿಯ ಮಗಳು ಪ್ರಲಂಗನ ಬೆಳಗ್ಗೆ ಹತ್ತು ಗಂಟೆಗೆ ನಿಮ್ಮ ಮನೆಗೆ ಬಂದಿದ್ದು ನಿಜ ತಾನೇ?''

"ಹೌದು ಬಂದಿದ್ಲು. ನನ್ನ ಕಿರಿಯ ಮಗನ ಬರ್ತ್‌ಡೇ ಇದೆ ಅಂತ ಹೇಳಿದ್ದೆ. ಟಿ.ವಿ. ಚಾನಲ್ ಶೂಟಿಂಗ್ ಇರೋದ್ರಿಂದ ಸಂಜೆ ಮತ್ತು ನಾಳೆ ಬರಲಾರೆ. ಈಗಲೇ ಬಂದು ವಿಶ್ ಮಾಡಿ ಹೋಗ್ತೀನಿ ಅಂತ ಹೇಳಿ ಗಿಫ್ಟ್ ಸಮೇತ ಬಂದಿದ್ಲು.''

"ಇಲ್ಲಿ ಎಷ್ಟು ಹೊತ್ತು ಇದ್ಲು?''

"ಕೇವಲ ಇಪ್ಪತ್ತು ನಿಮಿಷ ಮಾತ್ರ. ತುಂಬಾ ಕೆಲಸ ಇದೆ ಅಂತ ಹೇಳಿ ಹೊರಟು ಹೋದ್ಲು.'

"ಎಲ್ಲಿಗೆ ಹೋದ್ಲು?''

"ನಾವು ಕೇಳಲಿಲ್ಲ. ಅವಳು ಹೇಳಲಿಲ್ಲ. ಯಾಕೆ ಅಂದರೆ ಆ್ಯಂಕರಿಂಗ್ ಮಾಡುವ ಅವಳಿಗೆ ಕೆಲಸ ಇರುತ್ತೆ.''

''ಅವಳ ಜೊತೆ ನಿಮ್ಮವರು ಯಾರಾದ್ರು ಹೋದ್ರಾ?''

"ಇಲ್ಲ... ಇಲ್ಲ ಸಾರ್.''

"ಅವಳು ಯಾವ ವೆಹಿಕಲ್‌ನಲ್ಲಿ ಬಂದಿದ್ಲು?''

"ಟೂ ವೀಲರ್‌ನಲ್ಲಿ ಸಾರ್.''

"ಅವರಲ್ಲಿ ವಾಪಸ್ ಹೋದ್ಲಾ?''

''ಓಕೆ. ಅವಳ ಬಗ್ಗೆ ಹೆಚ್ಚಿನ ಸಂಗತಿ ತಿಳಿದ್ರೆ ಈ ನಂಬರ್‌ಗೆ ಫೋನ್ ಮಾಡಿ'' ಎಂದು ಫೋನ್ ನಂಬರ್ ಕೊಟ್ಟು ಹೊರಗೆ ಬಂದನು.

ಜೀಪಲ್ಲಿ ಕುಳಿತು ಸ್ಟಾರ್ಟ್ ಮಾಡುತ್ತಿರುವಾಗ ಆ ದೃಶ್ಯ ಕಂಡಿತು. ಅವನು ಬೆಚ್ಚಿಬಿದ್ದನು. ಜೀಪನ್ನು ರಸ್ತೆಯ ತಿರುವಿನಲ್ಲಿ ನಿಲ್ಲಿಸಿ ಇಳಿದು ಆ ಮನೆಯ ಹಿಂಭಾಗಕ್ಕೆ ಬಂದನು.

ಮೊಬೈಲ್‌ನಲ್ಲಿ ಫೋಟೋ ತೆಗೆದನು. ನಂತರ ಪೊಲೀಸ್ ಸ್ಟೇಷನ್‌ಗೆ ಫೋನ್ ಮಾಡಿ ಇಬ್ಬರು ಪಿ.ಸಿ.ಗಳನ್ನು ಅಲ್ಲಿಗೆ ಬರಲು ಹೇಳಿದನು.

ನಂತರ ಅವರು ಪಿ.ಸಿ.ಗಳು ಎಲ್ಲಿರಬೇಕು ಮತ್ತು ಏನು ಮಾಡಬೇಕು ಎಂಬುದನ್ನು ತಿಳಿಸಿ ಎಚ್ಚರಿಕೆ ನೀಡಿದನು.

ಜೀಪು ಚಲಿಸುತ್ತಿದೆ. ಪೊಲೀಸ್ ಅಧಿಕಾರಿ ಪ್ರಲಂಗನಳ ತಾಯಿಗೆ ಫೋನ್ ಮಾಡಿ ತನಗೆ ಬೇಕಾದ ಮುಖ್ಯವಾದ ಮಾಹಿತಿ ಪಡೆದನು.

●●●

ಜೋಹಾನ್ ಬಡಾವಣೆಯ ಪೊಲೀಸ್ ಸ್ಟೇಷನ್‌ನಲ್ಲಿ ರತನ್‌ಸಿಂಗ್ ಈ ಪ್ರಕರಣದ ಬಗ್ಗೆ ಮೊದಲಿನಿಂದ ನಡೆದಿದ್ದ ಘಟನೆಗಳನ್ನು ನೆನಪು ಮಾಡಿಕೊಂಡು ಪಾಯಿಂಟ್ ಬರೆದುಕೊಳ್ಳುತ್ತಿದ್ದಾನೆ.

ಫೋನ್ ಕಾಲ್ ಬಂದಿತು!

ಅತ್ತಕಡೆಯಿಂದ ಸಂತೋಷದ, ಉದ್ವೇಗದ ಧ್ವನಿಯಿಂದ ಮಾತುಗಳು ಕೇಳಿಬರುತ್ತಿವೆ. ''ಇನ್ಸ್‌ಪೆಕ್ಟರ್ ಸಾರ್... ನೀವು ಈಗಲೇ ನನ್ನ ಮನೆಗೆ ಬನ್ನಿ'' ಎಂದರು.

"ಯಾಕೆ... ಏನಾಗಿದೆ?''

''ನನ್ನ ಮಗಳು... ನನ್ನ ಮಗಳು...'' ಎಂದು ಸಂಕ್ಷಿಪ್ತವಾಗಿ ಹೇಳಿದರು.

ಸರ್‌ಪ್ರೈಸಿಂಗ್ ನ್ಯೂಸ್.''

ನಂಬಲಾಗುತ್ತಿಲ್ಲ ಅವನಿಂದ.

ಇದೇನಿದು ಈ ರೀತಿಯಾಗಿದೆ. ಇದು ಹೇಗೆ ಸಾಧ್ಯ? ಇದರ ಹಿನ್ನೆಲೆ ಏನು? ಯಾವ ಹುಚ್ಚು ಈ ಆಟಗಳನ್ನು ಆಡುತ್ತಿದ್ದೇನೆ ಎಂದುಕೊಳ್ಳುತ್ತಿರುವಾಗಲೇ ಆ ಮನೆಗೆ ಬಂದನು.

ಮನೆಯವರೆಲ್ಲಾ ಸಂತೋಷ ಉದ್ವೇಗದಿಂದ ಆ ರೂಮಲ್ಲಿದ್ದಾರೆ. ಈ ಅಧಿಕಾರಿ ಆ ರೂಮಿಗೆ ಬಂದನು.

ಪೊಲೀಸ್ ಅಧಿಕಾರಿಗೆ ಆಶ್ಚರ್ಯವಾಗಿದೆ. ಈಗ ಹತ್ತಿರ ಹೋಗಿ ಪರೀಕ್ಷೆ ಮಾಡುವಂತೆ ನೋಡಿದನು.

ತಂದೆ-ತಾಯಿ-ಅಣ್ಣನ ಜೊತೆ ಅವಳು ಕುಳಿತಿದ್ದಾಳೆ. ಆದರೆ ಅವಳು ಮಂಕಾಗಿದ್ದಾಳೆ. ಅವಳು ಶ್ರೀ ಮಲ್ಲಿಕ...!

ಅಧಿಕಾರಿ ಚಡಪಡಿಸುತ್ತಿರುವಾಗ ತಂದೆ ''ಇನ್ಸ್‌ಪೆಕ್ಟರ್... ಇವಳೇ ನನ್ನ ಮಗಳು. ಈ ಲೋಕದಿಂದ ದೂರಾಗಿದ್ದಾಳೆ. ಹುಚ್ಚನೊಬ್ಬನ ಕ್ರೌರ್ಯಕ್ಕೆ ಬಲಿಯಾಗಿ ಕೊಲೆಯಾಗಿದ್ದಾಳೆ ಅಂತ ತಿಳಿದಿದ್ದೆವು. ಆದರೆ ಅವಳು ಬದುಕಿ ಬಂದಿದ್ದಾಳೆ. ಇದು ಹೇಗೆ ಸಾಧ್ಯ?

ಅವಳನ್ನು ಹಿತ್ತಲಿನಲ್ಲಿ ಖಾಲಿ ಇರುವ ಜಾಗದಲ್ಲಿ ಯಾರೋ ಮಲಗಿಸಿ ಹೋಗಿದ್ದರು. ಆಗ ಅವಳಿಗೆ ಪ್ರಜ್ಞೆ ಇರಲಿಲ್ಲ. ಈಗಲೂ ಸಹ ಅವಳು ಮಂಕಾಗಿದ್ದಾಳೆ.

ತಂದೆ ''ನಾನು ಬೆಳಿಗ್ಗೆ ಎಂಟು ಗಂಟೆಯ ಸಮಯದಲ್ಲಿ ಹಿತ್ತಲಿಗೆ ಹೋದೆ. ಸೀಬೆ ಮತ್ತು ದಾಳಿಂಬೆ ಮರಗಳ ನಡುವೆ ಖಾಲಿ ಇರುವ ಜಾಗದಲ್ಲಿ ಅವಳು ಮಲಗಿದ್ದಳು. ಇದು ಹೇಗೆ ಸಾಧ್ಯ? ಅವಳು ಕೊಲೆಯಾಗಿರಲಿಲ್ಲವೇ? ಇದೆಲ್ಲಾ ಏನು?''

ಪೊಲೀಸ್ ಅಧಿಕಾರಿ ''ಕೊಲೆಯಾಗಿಲ್ಲ ನಿಜ. ಆದರೆ ಕೊಲೆಯಾಗಿರುವಂತೆ ದೃಶ್ಯ ಸೃಷ್ಟಿ ಮಾಡಿ ಫೋಟೋ ತೆಗೆದು ಕಳಿಸಿದ್ದಾರೆ. ಇದೇ ರೀತಿ ಇನ್ನೊಂದು ಪ್ರಕರಣ ಸಹ ನಡೆದಿದೆ'' ಎಂದು ಹೇಳಿ ಪ್ರಲಂಗನಳ ಪ್ರಕರಣದ ಬಗ್ಗೆ ಸಂಕ್ಷಿಪ್ತವಾಗಿ ಹೇಳಿದನು. ಪ್ರಲಂಗನ ಬದುಕಿದ್ದಾಳೋ ಇಲ್ಲವೋ ಎಂಬುದು ತಿಳಿದಿರಲಿಲ್ಲ. ಕೆಲವು ವಿಚಾರಗಳಲ್ಲಿ ಈ ಅಧಿಕಾರಿಗೆ ಸಂಶಯ ಬಂದಿದೆ.

"ಡಾಕ್ಟರ್‌ಗೆ ಫೋನ್ ಮಾಡಿ ಟ್ರೀಟ್‌ಮೆಂಟ್ ಬೇಗ ಕೊಡಿಸಿ. ಇವಳು ನಾರ್ಮಲ್ ಸ್ಟೇಜ್‌ಗೆ ಬಂದ ಕೂಡಲೇ ನನಗೆ ಫೋನ್ ಮಾಡಿ. ಇವಳಿಂದ ಮಾಹಿತಿ ಸಂಗ್ರಹಿಸಬೇಕಾಗಿದೆ.

●●●

ಪೊಲೀಸ್ ಅಧಿಕಾರಿ ರತನ್‌ಸಿಂಗ್ ಸ್ಟೇಷನ್‌ಗೆ ಬಂದ ಕೂಡಲೇ ಪಿ.ಸಿ.ಗಳಿಂದ ಫೋನ್ ಕಾಲ್ ಬಂದಿತು.

ಅಸಲು ಸಂಗತಿ ಏನು? ಪ್ರಲಂಗನಳ ಆಂಟಿ ಮನೆ ಇರುವ ಬಡಾವಣೆಯಲ್ಲಿ ಇಬ್ಬರು ಪಿ.ಸಿ.ಗಳು ತಿರುಗುತ್ತಾ ಆಗಾಗ ಆ ಮನೆಯ ಕಡೆ ನೋಡುತ್ತಿದ್ದರು. ಮತ್ತೊಬ್ಬ ಪಿ.ಸಿ. ಮರದ ಮೇಲೆ ಹತ್ತಿ ಬೈನಾಕ್ಯುಲರ್ ಹಿಡಿದು ಆ ಮನೆ ಕಡೆ ನೋಡುತ್ತಿದ್ದನು. ಆಗಾಗ ಮರದ ಕೊಂಬೆಗಳನ್ನು ಬದಲಿಸುತ್ತಾ ಆ್ಯಂಗಲ್ ಬದಲಿಸುತ್ತಿದ್ದಾನೆ.

ಆ ದೃಶ್ಯ ಕಂಡಿತು. ಮನೆಯ ಹಿಂಭಾಗದಲ್ಲಿದ್ದ ಬೈಕ್ ನಂಬರ್ ಈ ಬೈನಾಕ್ಯುಲರ್ ಲೆನ್ಸ್‌ಗೆ ಕಂಡಿತು. ಅದನ್ನು ರತನ್‌ಸಿಂಗ್‌ಗೆ ತಿಳಿಸಿದನು. ಮತ್ತೊಂದು ದೃಶ್ಯ ಕಂಡಿತು. ಮಹಡಿಯಲ್ಲಿರುವ ಕಾರ್ನರ್ ರೂಮಿನ ಕಿಟಕಿ ಬಾಗಿಲು ತೆರೆದಿತ್ತು. ಆ ದೃಶ್ಯ ಏನು?

ಮಂಚದ ಮೇಲೆ ಯುವತಿಯೊಬ್ಬಳು ತುಂಬಾ ಗಾಢವಾಗಿ ನಿದ್ರಿಸುತ್ತಿದ್ದಾಳೆ. ಈ ಸುದ್ದಿ ಸಹ ಪಾಸ್ ಆಯಿತು!

●●●

ಪೊಲೀಸ್ ಜೀಪ್ ಸೈರನ್ ಮೊಳಗಿಸುತ್ತಾ ತುಂಬಾ ವೇಗವಾಗಿ ಹೋಗುತ್ತಿದೆ. ಆ ಮನೆ ಹತ್ತಿರ ಬಂದ ಕೂಡಲೇ ಪಿ.ಸಿ.ಗಳು ಹತ್ತಿರ ಬಂದು ಸೆಲ್ಯೂಟ್ ಹೊಡೆದರು. ಎಲ್ಲಾ ಹೇಳುತ್ತಿದ್ದಾರೆ.

ಪೊಲೀಸ್ ಅಧಿಕಾರಿ ಪಿ.ಸಿ.ಗಳೊಂದಿಗೆ ಆ ಮನೆಯೊಳಗೆ ನುಗ್ಗಿದನು. ಪ್ರಲಂಗನಳ ಆಂಟಿ ಮತ್ತು ಉಳಿದವರು ಗಾಬರಿಯಾಗಿದ್ದಾರೆ. ಎಲ್ಲರನ್ನೂ ತಳ್ಳಿಕೊಂಡೇ ಮಹಡಿಯಲ್ಲಿರುವ ರೂಮಿಗೆ ಬಂದು ಬಾಗಿಲನ್ನು ಬಲವಾಗಿ ಜಾಡಿಸಿದನು.

ದಡಾಲನೆ ತೆರೆದುಕೊಂಡಿತು.

ತುಂಬಾ ಹೊತ್ತಿನಿಂದ ಮಂಚದ ಮೇಲೆ ಮಲಗಿದ್ದ ಯುವತಿ ಆಗ ತಾನೇ ಎಚ್ಚರಗೊಂಡು ಎದ್ದು ಕುಳಿತು ಆಕಳಿಸುತ್ತಿದ್ದಾಳೆ.

ಅವಳು ಪ್ರಲಂಗನ...!

ಆಗ ತಾನೇ ಅವಳ ಆಂಟಿ ಮತ್ತು ಉಳಿದವರು ಅಲ್ಲಿಗೆ ಬಂದಿದ್ದಾರೆ.

ಪೊಲೀಸ್ ಅಧಿಕಾರಿ ಎಲ್ಲರನ್ನೂ ಆ ರೂಮಿನಿಂದ ದೂರಕ್ಕೆ ಕರೆದುಕೊಂಡು ಬಂದು ವಿಚಾರಣೆ ಮಾಡಿದನು.

"ನಿಮ್ಮ ಮನೆ ಹಿಂಭಾಗದಲ್ಲಿ ಪ್ರಲಂಗನಳ ಟೂ ವೀಲರ್ ಇದೆ. ಇಲ್ಲಿಂದ ಹೋಗುವಾಗ ಆಕಸ್ಮಿಕವಾಗಿ ಕಂಡೆ. ನೀವು ಹೇಳಿದ್ದೇನು? ಪ್ರಲಂಗನ ಅರ್ಧ ಗಂಟೆ ಇದ್ದು ಅವಳ ವೆಹಿಕಲ್‌ನಲ್ಲಿ ಮನೆಗೆ ಹೋದ್ಲು ಅಂತ ಹೇಳಿದ್ರಿ. ಪ್ರಲಂಗನ ಆ ರೂಮಲ್ಲಿ ಮಲಗಿದ್ದಾಳೆ. ಅವಳ ವೆಹಿಕಲ್ ನಿಮ್ಮ ಮನೆ ಹಿಂಭಾಗದಲ್ಲಿದೆ. ನಿಜ ಹೇಳಿ... ನಿಜ ಹೇಳಿ... ನೀವ್ಯಾಕೆ ಸುಳ್ಳು ಹೇಳಿ ನಾಟಕ ಆಡಿದ್ರಿ.''

ಆಂಟಿ ಮತ್ತು ಮನೆಯವರು ತುಂಬಾ ಗಾಬರಿಯಾಗಿದ್ದಾರೆ. ''ನೀವು ಸತ್ಯ ಹೇಳದಿದ್ದರೆ ಪೊಲೀಸ್ ಸ್ಟೇಷನ್‌ಗೆ ಕರೆಸಿಕೊಂಡು ಬಾಯಿ ಬಿಡಿಸಬೇಕಾಗುತ್ತೆ'' ಎಂದಾಗ ಅವರು ಭೀತರಾಗಿ ಪರಸ್ಪರ ಮುಖ ನೋಡಿಕೊಂಡರು.

"ನನ್ನ ಪ್ರಶ್ನೆಗಳಿಗೆ ಉತ್ತರ ಕೊಡಿ. ಪ್ರಲಂಗನಳಿಗೆ ಬೆಳಗಿನ ಹತ್ತು ಗಂಟೆ ವೇಳೆಗೆ ಅಷ್ಟೊಂದು ಗಾಢವಾಗಿ ನಿದ್ದೆ ಬರಲು ಕಾರಣ ಏನು?''

ಆಂಟಿ ಗಾಬರಿಯಿಂದ ''ಅದು... ಅದು...'' ಎಂದು ತಡವರಿಸಿದಳು. ಆಕೆಯ ಗಂಡ ''ಇದರಲ್ಲಿ ನಮ್ಮ ತಪ್ಪೇನಿಲ್ಲ ಸಾರ್. ಬೆಳಿಗ್ಗೆ ಒಂಭತ್ತು ಗಂಟೆ ಹೊತ್ತಿಗೆ ಯಾರೋ ನಾಲ್ಕು ಬಾಂಬ್‌ಗಳನ್ನು ಫಿಕ್ಸ್ ಮಾಡಿದರು. ಅವರು ಹೇಳಿದಂತೆ ಕೇಳಬೇಕು ಮತ್ತು ರಹಸ್ಯ ಕಾಪಾಡಬೇಕೆಂದು ಹೆದರಿಸಿದರು.

''ಪ್ರಲಂಗನಳಿಗೆ ಫೋನ್ ಮಾಡಿ ಬೇಗ ಬರಲು ಹೇಳ್ದೆ. ಅವಳು ಬಂದ ಕೂಡಲೇ ಉಪಹಾರ ಮಾಡಿ. ಆ ರೌಡಿಗಳು ಕೊಟ್ಟಿದ್ದ ಅಮಲಿನ ಪುಡಿಯನ್ನು, ಕಡಿಮೆ ಪ್ರಮಾಣದಲ್ಲಿ ಬಾದಾಮಿ ಹಾಲು ಮತ್ತು ಆಹಾರ ಪದಾರ್ಥಗಳಲ್ಲಿ ಬೆರೆಸಿದೆ. ಅವಳ ಟೂ ವೀಲರ್ ಅನ್ನು ಮನೆಯ ಹಿಂಭಾಗದಲ್ಲಿ ನಿಲ್ಲಿಸಿದೆವು. ನಿದ್ರಾವಶಳಾಗಿದ್ದ ಅವಳನ್ನು ರೂಮಲ್ಲಿ ಮಲಗಿಸಿದೆವು. ಇಷ್ಟೇ ನಾವು ಮಾಡಿದ್ದು. ಇದರ ವಿನಹ ನಮಗೆ ಬೇರೇನೂ ಗೊತ್ತಿಲ್ಲ.''

ಆ ಬಂಗಲೆಯ ಸುತ್ತಲು ಬಾಂಬ್‌ಗಳನ್ನು ಫಿಕ್ಸ್ ಮಾಡಿರೋದನ್ನು ತೋರಿಸಿದರು.

ಡಾಕ್ಟರ್‌ಗೆ ಫೋನ್ ಮಾಡಿ ಬೇಗ ಕರೆಸಿಕೊಂಡು ಪ್ರಲಂಗನಳಿಗೆ ಟ್ರೀಟ್‌ಮೆಂಟ್ ಕೊಡಲು ವ್ಯವಸ್ಥೆ ಮಾಡಿದರು. ಅವಳನ್ನು ಈ ವಿಚಾರವಾಗಿ ಪ್ರಶ್ನೆ ಮಾಡಲಿಲ್ಲ.

●●●

ಪೊಲೀಸ್ ಅಧಿಕಾರಿ ಪಾರ್ಸಲ್‌ನಲ್ಲಿ ಬಂದಿದ್ದ ಆಡಿಯೋ ಪ್ಲೇಯರ್ ಅನ್ನು ಪುನಹ ಪ್ಲೇ ಮಾಡಿ ಕೇಳಿದನು. ಪ್ರಲಂಗನಳ ಕೂಗು, ಕಿರುಚಾಟ ಮತ್ತು ನನ್ನನ್ನು ಕೊಲ್ಲಬೇಡ ಎಂದು ಹೇಳುತ್ತಿರುವ ಮಾತುಗಳು ಪುನಹ ಕೇಳಿದನು.

ನೂರಕ್ಕೆ ನೂರು ಭಾಗ ಅವಳ ಧ್ವನಿಯಂತೆ ಇದೆ. ತಿವಿದು ಕೊಲೆ ಮಾಡುವಾಗ ಪ್ರಾಣಾಂತಿಕ ಕೂಗು ಬಂದಿತ್ತು. ಇದು ಹೇಗೆ ಸಾಧ್ಯ?

ಪ್ರಲಂಗನಳನ್ನು ಅವರ ಆಂಟಿಯ ಮನೆಯಲ್ಲಿ ಕೆಲವು ಗಂಟೆಗಳ ಕಾಲ ಅಮಲೇರಿಸಿಕೊಂಡು ಮಲಗುವಂತೆ ಮಾಡಿದ್ದಾರೆ. ಶ್ರೀಮಲ್ಲಿಕಾಳನ್ನು ಕೊಲೆ ಮಾಡಿರುವ ವಕ್ರ ಲೇಪನ ಆಯ, ಅವಳ ಶರೀರದ ಮತ್ತು ಅಂಟಿರುವ ರಕ್ತದ ಕಲೆಗಳ ದೃಶ್ಯವನ್ನು ತೋರಿಸಿದ್ದಾರೆ. ಆದರೆ ಶ್ರೀಮಲ್ಲಿಕಾ ಜೀವಂತವಾಗಿದ್ದಾಳೆ. ಅವಳೀಗ ಮನೆಯಲ್ಲಿದ್ದಾಳೆ.

ಇದೊಂದು ರೀತಿ ಹುಚ್ಚಾಟ!

ಯಾರು ಯಾಕೆ ಮಾಡುತ್ತಿದ್ದಾರೆ?

ಶ್ರೀಮಲ್ಲಿಕಾಳನ್ನು ಅವಳ ಮನೆಯಲ್ಲಿ, ಪ್ರತ್ಯೇಕವಾದ ಕೊಠಡಿಯಲ್ಲಿ ವಿಚಾರಣೆ ಮಾಡಲಾಯಿತು.

ಅವಳಿಂದ ಮಾಹಿತಿ ದೊರೆಯಿತು. ಸುಳಿವಿನ ಎಳೆ ಸಿಕ್ಕಿತು. ಅವಳ ಹೇಳಿಕೆ ಏನು?

ಶ್ರೀಮಲ್ಲಿಕ 'ಕೃಪಾಸಿಂಗ್' ಎಂಬ ಮಾಲೀಕನ ಕಂಪನಿ 'ಕೃಪಾ ಎಂಟರ್‌ಪ್ರೈಸಸ್‌ನಲ್ಲಿ' ಕೆಲಸ ಮಾಡುತ್ತಿದ್ದಳು.

ಸಂಜೆ ಅಲ್ಲಿಂದ ಹೊರಡುವ ಅರ್ಧ ಗಂಟೆ ಮೊದಲು ಕೃಪಾಸಿಂಗ್ ಚೇಂಬರ್‌ಗೆ ಕರೆಸಿಕೊಂಡು ಅವಳ ಕೆಲಸದ ಬಗ್ಗೆ ಮಾತಾಡಿದ್ದರಂತೆ ಮತ್ತು ಮುಂದಿನ ತಿಂಗಳಿನಿಂದ ಪ್ರಮೋಷನ್ ಕೊಟ್ಟು ಸಂಬಳ ಜಾಸ್ತಿ ಮಾಡುವುದಾಗಿ ಹೇಳಿದ್ದರಂತೆ.

ಆಗ ಅವರ ಚೇಂಬರ್‌ಗೆ ಸ್ವೀಟ್ ಸ್ಪೆಷಲ್ ವೆಜಿಟೇಬಲ್ ಬೋಂಡ ಮತ್ತು ವಿಶೇಷವಾಗಿ ಬಾದಾಮಿ, ಕೇಸರಿ ಬೆರೆಸಿ ಮಾಡಿದ್ದ ಬಿಸಿ ಹಾಲು ತರಿಸಿದ್ದರು.

ತಿಂಡಿ ತಿಂದು ಹಾಲು ಕುಡಿದ ಮೇಲೆ ತಲೆಯೊಳಗೆ ಚಕ್ರ ತಿರುಗಿದಂತೆ ಮತ್ತು ಇಡೀ ಶರೀರ ಹಗುರಗೊಂಡು ಗಾಳಿಯಲ್ಲಿ ತೇಲುತ್ತಿರುವ ಅನುಭವ ಆಗಿತ್ತು. ನಂತರ ಏನಾಯಿತು ಅಂತ ಗೊತ್ತಿಲ್ಲ ಎಂಬ ಹೇಳಿಕೆ ನೀಡಿದ್ದಳು.

●●●

ಸುಳಿವೇ ಕೊಡದ ರೀತಿ ಪೊಲೀಸ್ ಅಧಿಕಾರಿ ಬಂಗಲೆಯ ಹಿಂಭಾಗದಲ್ಲಿರುವ ಪ್ರೈವೇಟ್ ಗೆಸ್ಟ್‌ಹೌಸ್ ಮೇಲೆ ದಾಳಿ ಮಾಡಿದ್ದರು. ಅಲ್ಲಿಗೆ ಹೋಗುವ ಮೊದಲು ಮಾಹಿತಿ ಸಂಗ್ರಹಿಸಿದ್ದರು. ಅಲ್ಲಿನ ದೃಶ್ಯ ಏನು?

ಕೃಪಾಸಿಂಗ್ ಯುವತಿಯೊಬ್ಬಳ ಜೊತೆ ವಿಲಕ್ಷಣವಾಗಿ ವರ್ತಿಸುತ್ತಾ ಹೆದರಿಸುತ್ತಿದ್ದರು. ಅವಳನ್ನು ಕೊಲೆ ಮಾಡುವುದಾಗಿ ಚಾಕು ಹಿಡಿದು ಹುಚ್ಚು, ಹುಚ್ಚಾಗಿ ಆಡಿದ್ದರು. ಅವಳು ಪ್ರಾಣಭಯದಿಂದ ಕಿರುಚಿದ್ದಳು. ಅವಳ ಮೈಮೇಲೆ ಕೃತಕ ರಕ್ತ ಚೆಲ್ಲಿದರು. ಎಲ್ಲಾ ದೃಶ್ಯ ರೆಕಾರ್ಡ್ ಆಗುತ್ತಿದೆ.


ಪೊಲೀಸರು ಆಕ್ರಮಣ ಮಾಡಿದರು.

ಕೃಪಾಸಿಂಗ್‌ನನ್ನು ಬಂಧಿಸಿದ್ದಾರೆ.

ಮತ್ತೊಂದು ರೂಮಿನಲ್ಲಿ ಅಣುಕು ಧ್ವನಿ ಕಲಾವಿದೆ ಸಹನಾ ಇದ್ದಳು. ಅವಳಿಗೆ ಹಣ ಕೊಟ್ಟು ತಾವು ಸೆಲೆಕ್ಟ್ ಮಾಡಿರುವ ಹೆಣ್ಣಿನ ಧ್ವನಿ ಅನುಸರಿಸಿ ಮಾತಾಡಲು ಸೂಚನೆ ನೀಡುತ್ತಿದ್ದರು. ಪ್ರಲಂಗನಳನ್ನು ಬಂಧಿಸದೆ, ಅಣುಕು ಧ್ವನಿಯ ಪ್ರಾಣಾಂತಿಕ ಕೂಗು, ಸಂಭಾಷಣೆ ರೆಕಾರ್ಡ್ ಮಾಡಿ ಪೊಲೀಸರಿಗೆ ಕಳಿಸಿದ್ದರು.

ಯಾರನ್ನೂ ಕೊಲೆ ಮಾಡಿರಲಿಲ್ಲ. ಆದರೆ ಈ ಶ್ರೀಮಂತ ಉದ್ಯಮಿ ವಿಲಕ್ಷಣ ಬಯಕೆಗಳ 'ಸೈಕೋ ಸ್ಯಾಂಡ್ರಮ್' ಇಂತಹ ಭಯಾನಕ ವಿಲಕ್ಷಣ ಆಟಗಳನ್ನು ಆಡಿ ಪೈಶಾಚಿಕ ಆನಂದ ಅನುಭವಿಸುತ್ತಾ ನಗುತ್ತಿದ್ದನು. ಕುಣಿದು ಕುಪ್ಪಳಿಸಿ ಗಹಿಗಹಿಸುತ್ತಿದ್ದನು. ಈಗ ಈ ಶ್ರೀಮಂತ ಪೊಲೀಸರ ಅತಿಥಿಯಾಗಿದ್ದಾನೆ. ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ.

# ವ್ಯವಸ್ಥೆಯ ವಿರುದ್ಧ ನಿಂತ ಭೈರತಿ ರಣಗಲ್



ಮೊದಲೇ ಹೇಳಿದಂತೆ ಭೈರತಿ ರಣಗಲ್ ಮಫ್ತಿ ಚಿತ್ರದ ಪ್ರೀಕ್ವೇಲ್. ಕನ್ನಡದ ಮಟ್ಟಿಗೆ ಇಂಥದೊಂದು ಪ್ರಯತ್ನ ಇದೇ ಮೊದಲು. ಈಗ ಕಾಂತಾರ ಪ್ರೀಕ್ವೆಲ್ ಕೂಡ ಸಿದ್ದವಾಗುತ್ತಿದೆ, ಮುಂದಿನ ಭಾಗಕ್ಕೆ ಕಥೆ ಹೆಣೆಯೋದು ಸುಲಭ, ಆದರೆ ಒಂದು ಸಿನಿಮಾ ರಿಲೀಸಾದ ನಂತರ ಅದರ ಹಿಂದಿನ ಕಥೆ ಕಟ್ಟುವುದು ಸುಲಭವಲ್ಲ, ಅಂಥಾ ಪ್ರಯತ್ನ ನಿರ್ದೇಶಕ ನರ್ತನ್‌ರಿಂದ ನಡೆದಿದೆ, ರೋಣಾಪುರದ ಮುಗ್ದ ಜನರಿಗೆ ಒಳಿತು ಮಾಡಬೇಕು, ಅವರ ರಕ್ಷಣೆಗಾಗಿ ಪ್ರಾಣ ತೆಗೆಯೋಕು ಸಿದ್ಧ ಪ್ರಾಣ ಕೊಡುವುದಕ್ಕೂ ಸಿದ್ಧ ಎಂದು ವ್ಯವಸ್ಥೆಯ ವಿರುದ್ಧ ಸಿಡಿದು ನಿಂತ ಭೈರತಿ ರಣಗಲ್ ಆ ಹಾದಿಯಲ್ಲಿ ಏನೇನೆಲ್ಲ ಅಡ್ಡಿ ಆತಂಕಗಳನ್ನು ಎದುರಿಸಬೇಕಾಯಿತು ಎಂಬುದನ್ನು ಭೈರತಿ ರಣಗಲ್ ಹೇಳುತ್ತದೆ, ರಣಗಲ್ ಲಾಂಗ್ ಹಿಡಿದು ಡಾನ್ ಆಗಿದ್ದೇಗೆ? ಅದಕ್ಕೆ ಅಂತಹ ಬಲವಾದ ಕಾರಣ ಏನಿತ್ತು? ಈ ಎಲ್ಲ ಪ್ರಶ್ನೆಗಳು ಮಫ್ತಿ ನೋಡಿದವರ ಮನದಲ್ಲಿತ್ತು. ಅದಕ್ಕೆಲ್ಲ ಭೈರತಿ ರಣಗಲ್ ಉತ್ತರ ನೀಡುತ್ತದೆ,

ರೋಣಾಪುರದ ಮೈನಿಂಗ್ ದೊರೆ ರಣಗಲ್ (ಶಿವರಾಜ್‌ಕುಮಾರ್) ಬಂಧನದೊಂದಿಗೆ ಮಫ್ತಿ ಚಿತ್ರದ ಕಥೆ ಎಂಡ್ ಆಗಿತ್ತು. ಈ ಚಿತ್ರದಲ್ಲಿ ರಣಗಲ್ ಬಾಲ್ಯ ಹೇಗಿತ್ತು, ಆತನ ತಂದೆ, ತಾಯಿ ಏನು ಕೆಲಸ ಮಾಡುತ್ತಿದ್ದರು ಎಂದು ಹೇಳುವುದರೊಂದಿಗೆ, 21 ವರ್ಷಗಳ ಹಿಂದಿನ ಚಿತ್ರಕಥೆ ತೆರೆದುಕೊಳ್ಳುತ್ತದೆ. ರೋಣಾಪುರ ಎಂಬ ಸಣ್ಣ ಹಳ್ಳಿಯಲ್ಲಿ ರಣಗಲ್ ಬಾಲ್ಯದ ದಿನಗಳು, ಆ ಊರಿನಲ್ಲಿ ನೀರಿಲ್ಲದೆ ಪರದಾಡುವ ಜನ, ತನ್ನ ತಂದೆ ನೀರಿಗಾಗಿ ಸರ್ಕಾರಕ್ಕೆ ಎಷ್ಟೇ ಅರ್ಜಿ ಸಲ್ಲಿಸಿದರೂ ನಿರ್ಲಕ್ಷ್ಯ ಮಾಡುವ ಸರ್ಕಾರಿ ಅಧಿಕಾರಿಗಳು, ಅವರ ಬೇಜವಾಬ್ದಾರಿ ವರ್ತನೆಗೆ ಬೇಸತ್ತ 12 ವರ್ಷದ ಬಾಲಕ ರಣಗಲ್, ಒಮ್ಮೆ ಅದೇ ಸರ್ಕಾರಿ ಕಛೇರಿಯಲ್ಲಿ ಬಾಂಬ್ ಇಟ್ಟು 6 ಜನರ ಸಾವಿಗೆ ಕಾರಣನಾಗುತ್ತಾನೆ. ಬಾಲಾಪರಾಧಿಯಾದ ರಣಗಲ್‌ಗೆ 21ವರ್ಷಗಳ ಜೈಲು ಶಿಕ್ಷೆ ಆಗುತ್ತದೆ. ಆದರೆ ಅವನಿಂದಲೇ ರೋಣಾಪುರಕ್ಕೆ ನೀರು ಬರುವಂತಾಗುತ್ತದೆ. ಈ ಸಂದರ್ಭದಲ್ಲಿ ಆ ಏರಿಯಾದಲ್ಲಿ ಅಪಾರ ಪ್ರಮಾಣದ ಕಬ್ಬಿಣದ ನಿಕ್ಷೇಪ ಇರುವುದು ಪತ್ತೆಯಾಗಿ ಪರಾಂಡೆ (ರಾಹುಲ್ ಬೋಸ್) ಅಲ್ಲಿ ಗಣಿಗಾರಿಕೆ ಆರಂಭಿಸುತ್ತಾನೆ. ರೋಣಾಪುರದ ಸಾವಿರಾರು ಜನ ಆತನ ಕಾರ್ಖಾನೆಗಳಲ್ಲಿ ಕೆಲಸ ಮಾಡಿಕೊಂಡಿರುತ್ತಾರೆ.

ಇತ್ತ ಜೈಲಿನಲ್ಲಿದ್ದುಕೊಂಡೇ ಲಾ ಮುಗಿಸಿದ ರಣಗಲ್, ವಕೀಲನಾಗಿ ಜೈಲಿನಿಂದ ಬಿಡುಗಡೆಯಾಗುತ್ತಾನೆ, ರೋಣಾಪುರದಲ್ಲೇ ಲಾಯರ್ ಕಛೇರಿ ತೆರೆದು, ತನ್ನ ಜನರ ಕಷ್ಟಗಳಿಗೆ ಹೆಗಲಾಗಿ ನಿಂತುಕೊಳ್ಳುತ್ತಾನೆ, ಪರಾಂಡೆ ಮಾಡೋ ಕುತಂತ್ರಗಳನ್ನು ಬಯಲಿಗೆಳೆಯುತ್ತ, ಕಾನೂನು, ತನ್ನ ಬುದ್ದಿವಂತಿಕೆಯಿಂದ ಜನರಿಗೆ ನ್ಯಾಯ ದೊರಕಿಸಿಕೊಡಲು ಟೊಂಕಕಟ್ಟಿ ನಿಲ್ಲುತ್ತಾನೆ. ಇದು ಪರಾಡೆಗೆ ನುಂಗಲಾರದ ತುತ್ತಾಗುತ್ತದೆ, ಒಂದು ಹಂತದಲ್ಲಿ ಕಾನೂನು ವ್ಯವಸ್ಥೆಯನ್ನೇ ಪರಾಂಡೆ ತನ್ನ ಹಣ ಬಲದಿಂದ ಕೊಂಡುಕೊಳ್ಳುತ್ತಾನೆ, ತನ್ನ ಜನರಿಗೆ ಕಾನೂನು ಪ್ರಕಾರ ನ್ಯಾಯ ಕೊಡಿಸಲು ಸಾಧ್ಯವಾಗದೇ ಇದ್ದಾಗ, ಅನಿವಾರ್ಯವಾಗಿ ಅದೇ ಕಾನೂನನ್ನು ಭೈರತಿ ರಣಗಲ್ ತನ್ನ ಕೈಗೆ ತೆಗೆದುಕೊಳ್ಳುತ್ತಾನೆ. ಮುಂದೆ ನಡೆಯುವ ಕಥೆ ರಣರೋಚಕ.

ಚಿತ್ರದ ಮೊದಲ ಭಾಗದಲ್ಲಿ ರಣಗಲ್ ಪಾತ್ರಕ್ಕೆ ಮಾತು ಕಮ್ಮಿ, ರೋಣಾಪುರದ ಜನರ ನೋವು, ಕಾರ್ಮಿಕರ ಸಂಕಷ್ಟಗಳ ಸುತ್ತಾ ಕಥೆ ಸಾಗುತ್ತದೆ. ವಕೀಲನಾಗಿ ಜನರಪರ ನಿಲ್ಲುವ ರಣಗಲ್ ವ್ಯಕ್ತಿತ್ವಕ್ಕೆ, ಸರ್ಕಾರಿ ಆಸ್ಪತ್ರೆ ವೈದ್ಯೆಯಾಗಿ ಬರುವ ವೈಶಾಲಿ(ರುಕ್ಮಿಣಿ ವಸಂತ್) ಮಾರು ಹೋಗುತ್ತಾಳೆ. ಕಾರ್ಖಾನೆಯ ಕಾರ್ಮಿಕರು ತಮಗಾದ ಅನ್ಯಾಯಕ್ಕೆ ನ್ಯಾಯ ಕೇಳಿದ್ದಕ್ಕೆ ಜೀವವನ್ನೇ ಕಳೆದುಕೊಳ್ಳುತ್ತಾರೆ. ಅಲ್ಲಿಗೆ ರಣಗಲ್ ಲಾಯರ್ ಕೋಟು ಬಿಟ್ಟು ಲಾಂಗ್ ಹಿಡಿಯುತ್ತಾನೆ, ಪರಾಂಡೆ ವಿರುದ್ಧ ನಿಂತ ಭೈರತಿ ರಣಗಲ್ ತನ್ನದೇ ಮೈನಿಂಗ್ ಸಾಮ್ರಾಜ್ಯ ಕಟ್ಟುತ್ತಾನೆ. ಅಲ್ಲಿಂದ ಮುಂದೆ ಪರಾಂಡೆ ಹಾಗೂ ರಣಗಲ್ ನಡುವೆ ಒಂದಲ್ಲ ಒಂದು ವಿಷಯಕ್ಕೆ ಘರ್ಷಣೆ ನಡೆಯುತ್ತ ಹೋಗುತ್ತದೆ, ತಮ್ಮ ಸಾಮ್ರಾಜ್ಯ ಉಳಿಸಿಕೊಳ್ಳಲು ಇವರಿಬ್ಬರೂ ಸರ್ಕಾರದ ಮೇಲೆ ಪ್ರಭಾವ ಬೀರುವ ಮಟ್ಟಕ್ಕೆ ಬೆಳೆಯುತ್ತಾರೆ. ಒಂದು ಹಂತದಲ್ಲಿ ರಣಗಲ್ ಸರ್ಕಾರವನ್ನೇ ಬದಲಿಸುವ ಹಂತಕ್ಕೆ ಹೋಗುತ್ತಾನೆ, ಬದಲಾದ ರಾಜಕೀಯ ವ್ಯವಸ್ಥೆಯಲ್ಲಿ ರಣಗಲ್ ವಿರುದ್ಧ ಸಂಚು ನಡೆಯುತ್ತದೆ.

ಚಿತ್ರದ ಪ್ರಥಮಾರ್ಧ ಸ್ವಲ್ಪಸ್ಲೋ ಆಗಿದೆ, ಕಾರ್ಮಿಕರ ಸಂಕಷ್ಟಗಳನ್ನು ನಿಧಾನವಾಗಿ ನರ್ತನ್ ತೋರಿಸುತ್ತಾ ಹೋಗುತ್ತಾರೆ. ಶಿವಣ್ಣ ಇಲ್ಲಿ ಕಾನೂನು ಪ್ರಕಾರ ನ್ಯಾಯಕ್ಕಾಗಿ ಹೋರಾಡುವ ಲಾಯರ್, ಆದರೆ ಇಂಟರ್ ವೆಲ್ ಬಳಿಕ ಸಿನಿಮಾ ವೇಗ ಪಡೆದು ಕೊಳ್ಳುತ್ತದೆ. ನರ್ತನ್ ಅವರ ಪಂಚಿಂಗ್ ಸಂಭಾಷಣೆಗಳು ಶಿವಣ್ಣ ಅಭಿಮಾನಿಗಳಿಗೆ ಮಜಾ ಕೊಡುತ್ತವೆ, ಸಣ್ಣ ಸಣ್ಣ ಡೈಲಾಗ್ಸ್ ಕೂಡ ಇಷ್ಟವಾಗುತ್ತ ಹೋಗುತ್ತದೆ. ಶಿವಣ್ಣ ಅಭಿನಯ ಅದ್ಭುತ, ರಣಗಲ್ ಪಾತ್ರದ ಪರಕಾಯ ಪ್ರವೇಶ ಮಾಡಿದ್ದಾರೆ. ನಾಯಕಿಯಾಗಿ ರುಕ್ಮಿಣಿಗೆ ಹೆಚ್ಚು ಅವಕಾಶವಿಲ್ಲ, ತೆರೆಮೇಲೆ ಇದಷ್ಟೂ ಇಷ್ಟವಾಗುತ್ತಾರೆ. ಕಾರ್ಮಿಕರ ನಾಯಕನಾಗಿ ಗೋಪಾಲಕೃಷ್ಣ ದೇಶಪಾಂಡೆ, ಕೈಗಾರಿಕೋದ್ಯಮಿ ಪರಾಂಡೆ ಆಗಿ ರಾಹುಲ್ ಬೋಸ್, ಆತನ ಭಂಟನಾಗಿ ಅವಿನಾಶ್, ಶಿವಣ್ಣನ ಸಹೋದರಿಯಾಗಿ ಛಾಯಾಸಿಂಗ್ ತಂತಮ್ಮ ಪಾತ್ರಗಳನ್ನು ಸೊಗಸಾಗಿ ನಿಭಾಯಿಸಿದ್ದಾರೆ. ರಮೇಶ್ ಅರವಿಂದ್ ಅವರ ನಿರೂಪಣೆ ಈ ಚಿತ್ರದ ಮತ್ತೊಂದು ಹೈಲೈಟ್. ಹಿನ್ನೆಲೆ ಧ್ವನಿಯ ಮೂಲಕ ರಣಗಲ್ ಚರಿತ್ರೆ ಹೇಳುತ್ತಾ ಸಾಗುತ್ತಾರೆ. ನವೀನ್‌ಕುಮಾರ್ ಅವರ ಛಾಯಾಗ್ರಹಣ ಈ ಚಿತ್ರದ ಹೈಲೆಟ್. ರವಿ ಬಸ್ರೂರು ಅವರ ಬಿಜಿಎಂ ಸನ್ನಿವೇಶಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ ಇದೆ. ಭಾವನಾತ್ಮಕ ಸನ್ನಿವೇಶಗಳನ್ನು ತಮ್ಮ ಸಂಗೀತದಿಂದ ನೋಡುಗರಿಗೆ ಮತ್ತಷ್ಟು ಹತ್ತಿರವಾಗುವಂತೆ ಮಾಡಿದ್ದಾರೆ.

# ಏಳು ಜನ ಕುಖ್ಯಾತ ಅಂತರರಾಜ್ಯ ಕಳ್ಳರ ಬಂಧನ; 37 ಲಕ್ಷ ರೂ.ಗಳ ಸ್ವತ್ತು ವಶಕ್ಕೆ!

6 ☞

ಏನಾದರೂ ರಿಸ್ಕ್ ಆದರೂ ಸರಿ... ಹಿಂಜರಿಯಕೂಡದು ಎಂದು ತಮ್ಮ ತಂಡಕ್ಕೆ ನಿರ್ದೇಶನ ನೀಡಿದ್ದರು. ಅದರಂತೆ ಕರೋಶಿಯಲ್ಲಿ ನಡೆಸಿದ ಕಳ್ಳರು ಪಕ್ಕಾ ವೃತ್ತಿ ಪರರು ಎಂದು ಅರಿತುಕೊಂಡು ಇದು ಪಕ್ಕಾ ಮಹಾರಾಷ್ಟ್ರ ಮೂಲದ



ಮಹಾರಾಷ್ಟ್ರ ಮೂಲದ ಏಳು ಜನ ಕಳ್ಳರಿಂದ ವಶಪಡಿಸಿಕೊಂಡ 37.40 ಲಕ್ಷ ರೂ. ಸ್ವತ್ತುಗಳೊಂದಿಗೆ ಸಿಪಿಐ ವಿಶ್ವನಾಥ ಚೌಗಲಾ, ಪಿಎಸ್ಐ ಬಸಗೌಡ ನೇರ್ಲಿ ಮತ್ತು ಸಿಬ್ಬಂದಿಗಳು

ಕಳ್ಳರ ಗ್ಯಾಂಗ್‌ನ ಕೃತ್ಯವಾಗಿದೆ ಎಂದರಿತುಕೊಂಡು ವಿವಿಧ ಮೂಲಗಳಿಂದ, ವಿವಿಧ ಪೊಲೀಸ್ ಠಾಣೆಗಳಿಂದ ಕರಾರುವಕ್ಕಾದ ಖಚಿತ ಮಾಹಿತಿ ದೊರಕಿಸಿಕೊಂಡು ಅವರ ಮೊಬೈಲ್ ನಂಬರ್‌ಗಳನ್ನು ಅತ್ಯಂತ ಚಾಣಾಕ್ಷತನದಿಂದ ಸಂಗ್ರಹಿಸಿದರು. ಇದಕ್ಕಾಗಿ ಆಧುನಿಕ ತಾಂತ್ರಿಕ ಸೌಲಭ್ಯ ಬಳಸಿಕೊಳ್ಳಲಾಯಿತು. ಹಗಲಿರುಳು ಊಟ... ನಿದ್ರೆ ಮರೆತು ಸುಮಾರು 20 ದಿನಗಳವರೆಗೆ ಸಂಶಯಿತ ಅಪಾಯಕಾರಿ ಪಾಸಿ ಪರದಿ ಕಳ್ಳರ ಗ್ಯಾಂಗ್‌ನ ಹಿಂದೆ ಬಿದ್ದರು. ಅವರ ಮೊಬೈಲ್ ಲೋಕೇಷನ್‌ಗಳನ್ನು ಪರಿಶೀಲಿಸುತ್ತಿರುವಾಗಲೇ ಅವರು ಚಿಕ್ಕೋಡಿ ಗಡಿಭಾಗದಲ್ಲಿ ಅದಾಗಲೇ ಎಂಟ್ರಿ ಕೊಟ್ಟಿದ್ದರು.

### ಸಿಕ್ಕುಬಿದ್ದ ಏಳು ಜನ ಕಳ್ಳರು...

ಅಪಾಯಕಾರಿ ಕಳ್ಳರ ಗ್ಯಾಂಗ್ ಎಂಟ್ರಿ ಕೊಟ್ಟಿರುವುದನ್ನು ಅರಿತು ಪಿಎಸ್ಐ ಬಸಗೌಡ ನೇರ್ಲಿ ಮತ್ತು ಸಿಬ್ಬಂದಿಗಳು ತುಂಬಾ ಅಲರ್ಟ್ ಆಗಿಬಿಟ್ಟರು. ದಿ. 12-11-2024ರಂದು ಕಳ್ಳರ ಗ್ಯಾಂಗ್‌ನ ಇಬ್ಬರು ತಾವು ಕದ್ದಿದ್ದ ಡಿಸ್ಕ್ ಸಮೇತ ಟಾಯರ್‌ಗಳ ಮಾರಾಟ ಮಾಡಲು ಜೈನಾಪೂರ ಪರಿಸರದಲ್ಲಿ ತಿರುಗುತ್ತಿದ್ದರು. ತಕ್ಷಣ ಖಚಿತ ಮಾಹಿತಿ ಮೇರೆಗೆ ವಿಶೇಷ ತನಿಖಾ ತಂಡ ಇವರನ್ನು ವಶಕ್ಕೆ ತೆಗೆದುಕೊಂಡು ಠಾಣೆಗೆ ಕರೆತಂದಾಗ ಅವರೆಲ್ಲ ಕಥೆ ಹೇಳತೊಡಗಿದರು. ಕೊನೆಗೆ ಪೊಲೀಸ್ ಭಾಷೆಯಲ್ಲಿ ವಿಚಾರಿಸಿದಾಗ ತಮ್ಮ ಗ್ಯಾಂಗ್‌ನ ಸದಸ್ಯರ ಬಗ್ಗೆ, ತಾವು ಕಳ್ಳತನ ಮಾಡುತ್ತಿದ್ದ ಬಗ್ಗೆ, ಕರೋಶಿಯಲ್ಲಿ ನಡೆಸಿದ ಎರಡು ಕಳ್ಳತನಗಳ ಕುರಿತು ಗಿಳಿಪಾಠ ಒಪ್ಪಿಸಿದರು. ತಕ್ಷಣ ತಡ ಮಾಡದೇ ಪಿಎಸ್ಐ ಬಸಗೌಡ ನೇರ್ಲಿ ಅವರು ಮೇಲಾಧಿಕಾರಿಗಳಿಗೆ ವಿಷಯ ತಿಳಿಸಿ ಅವರ ನಿರ್ದೇಶನದಂತೆ ಒಟ್ಟು ಏಳು ಜನರನ್ನು ವಶಕ್ಕೆ ತೆಗೆದುಕೊಂಡರು. ಇವರೆಲ್ಲ ಕ್ರಿಮಿನಲ್ ಟ್ರೈಬ್ಸ್ ಎಂದು ಕುಖ್ಯಾತವಾದ ಪಾಸಿ ಪಾರದಿ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಈ ತಂಡದ ಸೂತ್ರಧಾರ ರಾಮು ಸುಬ್ಬರಾವ ಕಾಳೆಯಾಗಿದ್ದು, ಲಗಮಣ್ಣಾ ಬಿಸರಾಂ ಪವಾರ್, ದತ್ತಾ ಲಗಮಣ್ಣಾ ಪವಾರ್ ಎಂಬ ತಂದೆ ಮಗ ಈ ಗ್ಯಾಂಗ್‌ನಲ್ಲಿದ್ದಾರೆ. ಉಳಿದಂತೆ ಗುಲಾಬ್ ಗಂಪು ಕಾಳೆ, ಸಂತೋಷ ಭೀಮಾ ಕಾಳೆ, ಕಿರಣ ಅರ್ಜುನ ಕಾಳೆ, ಸುನೀಲ ಲಗಮಣ್ಣಾ ಪವಾರ್ ಎಂದು ಒಪ್ಪಿಕೊಂಡಿದ್ದಾರೆ.

### ಬಂಧಿತರಿಂದ 37.40 ಲಕ್ಷ ರೂ. ಸ್ವತ್ತು...

ವಿಚಾರಣೆ ಕಾಲಕ್ಕೆ ಏಳು ಜನ ಕಳ್ಳರು ತಮ್ಮ ಕೃತ್ಯ ಒಪ್ಪಿಕೊಂಡಿದ್ದಾರೆ. ಬಂಧಿತರಿಂದ ಕಪ್ಪು ಬಣ್ಣದ ಹೊಂಡಾ ಯುನಿಕಾರ್ನ್ ಮೋಟಾರ್ ಬೈಕ್ ಹಾಗೂ ಡಿಸ್ಕ್ ಸಹಿತ 8 ಟೈರ್‌ಗಳು, ಆರೋಪಿತರು ತಾವು ಕಳ್ಳತನ ಮಾಡಲು ಉಪಯೋಗಿಸುತ್ತಿದ್ದ 14 ಗಾಲಿಯ ಬೃಹತ್ ಮಹಿಂದ್ರಾ ಕಂಪೆನಿಯ ಲಾರಿ, ಕಬ್ಬಿಣದ ಪಾನಾ ಸೆಟ್, ರಾಡ್‌ಗಳು ಸೇರಿದಂತೆ ಒಟ್ಟು 37.40 ಲಕ್ಷ ರೂ.ಗಳ ಸ್ವತ್ತನ್ನು ವಶಪಡಿಸಿಕೊಂಡು ಬಂಧಿತರನ್ನು ಜೈಲಿಗಟ್ಟುವಲ್ಲಿ ಪಿಎಸ್ಐ ಬಸಗೌಡ ನೇರ್ಲಿ ಅವರ ತಂಡ ಯಶಸ್ವಿಯಾಗಿದೆ.

### ಮೋಸ್ಟ್ ವಾಂಟೆಡ್ ಕ್ರಿಮಿನಲ್‌ಗಳು...

ಇವರು ತುಂಬಾ ಅಪಾಯಕಾರಿಗಳು. ಹಗಲು ಹೊತ್ತಿನಲ್ಲಿ ಹೊಟ್ಟೆಪಾಡಿಗಾಗಿ ಕಬ್ಬು ಕಟಾವ್ ಗ್ಯಾಂಗ್ ಮಾಡಿಕೊಂಡು ಮಹಾರಾಷ್ಟ್ರ-ಕರ್ನಾಟಕದ ಗಡಿ ಜಿಲ್ಲೆಗಳ ಸಕ್ಕರೆ ಕಾರ್ಖಾನೆಗೆ ಕೂಲಿ ಕಾರ್ಮಿಕರಾಗಿ ಬರುತ್ತಿದ್ದರು. ರಾತ್ರಿ ವೇಳೆ ತಾವು ಗುರುತಿಸಿದ ಸ್ಥಳಗಳಲ್ಲಿ ಸದ್ದಿಲ್ಲದೇ ಕಳ್ಳತನ ಮಾಡಿ ಪರಾರಿ ಆಗುತ್ತಿದ್ದರು. ಡಿಸೇಲ್, ಪೆಟ್ರೋಲ್ ಗಾಡಿಗಳ ಬಿಡಿಭಾಗಗಳು, ಮನೆಗಳ್ಳತನ ಪ್ರಕರಣಗಳಲ್ಲಿ ಇವರು ಅನೇಕ ಕೇಸ್‌ಗಳನ್ನು ಕರ್ನಾಟಕ-ಮಹಾರಾಷ್ಟ್ರದ ವಿವಿಧ ಪೊಲೀಸ್ ಠಾಣೆಗಳಲ್ಲಿ ಎದುರಿಸಿ ನ್ಯಾಯಾಲಯದಿಂದ ಜಾಮೀನು ಪಡೆದು ಪರಾರಿಯಾಗುವುದು ವಾಡಿಕೆಯಾಗಿದೆ.


### ಶ್ಲಾಘನೆ...

ಅತ್ಯಂತ ಅಪಾಯಕಾರಿ ಕಳ್ಳರ ಗ್ಯಾಂಗ್‌ನ ಏಳು ಜನರನ್ನು ಬಂಧಿಸಿ ಅವರಿಂದ 37.40 ಲಕ್ಷ ರೂ. ಮೌಲ್ಯದ ಸ್ವತ್ತನ್ನು ವಶಪಡಿಸಿಕೊಳ್ಳುವಲ್ಲಿ ಸಿಪಿಐ ವಿಶ್ವನಾಥ ಚೌಗಲಾ ಅವರ ಸೂಕ್ತ ನಿರ್ದೇಶನದಲ್ಲಿ ಪಿಎಸ್ಐಗಳಾದ ಬಸಗೌಡ ನೇರ್ಲಿ, ಲಕ್ಷ್ಮಿ ಬಿರಾದಾರ ಮತ್ತು ವಿಶೇಷ ತನಿಖಾ ತಂಡದ ಸಿಬ್ಬಂದಿಗಳ ಯಶಸ್ವಿ ಕಾರ್ಯಾಚರಣೆಯನ್ನು ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್. ರಾಮನಗೌಡ ಬಸರಗಿ, ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ ಶ್ಲಾಘಿಸಿದ್ದಾರೆ.











**Sridhar Shastri**
Director, Writer


**Nagaraj T**
Producer


**Pruthviraj Sagar**
Producer


**Praveen Prakash**
Writer, Lyricist


**Girish Hothur**
Musician


**Manohar Joshi**
Cinematographer


**Ujwal Chandra**
Editor


Vol. 40 No. 24 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com